ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 28 ಬುಧವಾರ 2022

ಸಂಪುಟ: 43 | ಸಂಚಿಕೆ: 163 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ನಾಳೆಯಿಂದ ದಸರಾ ಕ್ರೀಡಾಕೂಟ

● ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲ್ಲಿಕ್‌ರಿಂದ ಚಾಲನೆ ● ವಿವಿಧ ಜಿಲ್ಲೆಯ ನಾಲ್ಕರಿಂದ ಐದು ಸಾವಿರ ಕ್ರೀಡಾಪಟುಗಳು ಭಾಗಿ ● ವಿಜೇತರಿಗೆ ನಗದು ಬಹುಮಾನ: ಊಟ, ವಸತಿ, ಸಾರಿಗೆ ಸೌಕರ್ಯ

ಮೈಸೂರು, ಸೆ.27(ಎಂಕೆ)– ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ 'ರಾಜ್ಯಮಟ್ಟದ ದಸರಾ ಕ್ರೀಡಾಕೂಟ'ಕ್ಕೆ ಸೆ.29ರಂದು ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲ್ಲಿಕ್ ಚಾಲನೆ ನೀಡಲಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಡಾ. ಹೆಚ್.ಎಸ್.ಗೋಪಾಲಕೃಷ್ಣ ತಿಳಿಸಿದರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಅಂದು ಸಂಜೆ 4.30ಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಕೆ.ಸಿ.ನಾರಾಯಣಗೌಡ, ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಧ್ವಜಾರೋಹಣ ನಡೆಸಿಕೊಡಲಿದ್ದಾರೆ. ಕ್ರೀಡಾಕೂಟಕ್ಕೆ ಖ್ಯಾತ ಕುಸ್ತಿಪಟು, ಒಲಿಂಪಿಕ್ ಪದಕ ವಿಜೇತರಾದ ಸಾಕ್ಷಿ ಮಲ್ಲಿಕ್ ಚಾಲನೆ ನೀಡಲಿದ್ದಾರೆ ಎಂದರು.

ಸೆ.29ರಿಂದ ಅ.2ರವರೆಗೆ ದಸರಾ ಕ್ರೀಡಾಕೂಟ ನಡೆಯಲಿದ್ದು, ಸುಮಾರು 27 ಬಗೆಯ ಕ್ರೀಡೆಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ 4 ರಿಂದ 5 ಸಾವಿರ ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆ ಇದೆ. ಕ್ರೀಡಾಪಟುಗಳಿಗೆ ಊಟ, ವಸತಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದ್ದು, ಈಗಾಗಲೇ ಕೆಲ ಕಲ್ಯಾಣ ಮಂಟಪಗಳು ಹಾಗೂ ಹೋಟೆಲ್‌ಗಳು ಸೇರಿ 2000ಕ್ಕೂ ▶ 9ನೇ ಪುಟಕ್ಕೆ



ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲ್ಲಿಕ್

ಈ ಬಾರಿ ಟ್ರ್ಯಾಕ್‌ಸೂಟ್ ಇಲ್ಲ...

ದಸರಾ ಕ್ರೀಡಾಕೂಟದಲ್ಲಿ ಕ್ರೀಡಾಪಟುಗಳಿಗೆ ಟ್ರ್ಯಾಕ್‌ಸೂಟ್ ನೀಡಲಾಗುತ್ತಿತ್ತು. ಆದರೆ ಈ ವರ್ಷ ನೀಡಿರುವ ಅನುದಾನ ಕಡಿಮೆಯಾಗಿರುವುದರಿಂದ ಟ್ರ್ಯಾಕ್‌ಸೂಟ್ ಬದಲಿಗೆ ಟೀ ಶರ್ಟ್ ಮಾತ್ರ ನೀಡುತ್ತಿದ್ದೇವೆ. ಕಳೆದ ದಸರಾ ಕ್ರೀಡಾಕೂಟಕ್ಕೆ 7 ಕೋಟಿ ಅನುದಾನ ನೀಡಲಾಗಿತ್ತು. ಆದರೆ ಈ ಬಾರಿ 5 ಕೋಟಿ ನೀಡಲಾಗಿದೆ. ಟ್ರ್ಯಾಕ್‌ಸೂಟ್‌ಗೆ ಪರ್ಯಾಯವಾಗಿ ನಗದು ಪುರಸ್ಕಾರದ ಮೊತ್ತವನ್ನು ಹೆಚ್ಚಿಸಲಾಗಿದೆ. – **ಡಾ.ಹೆಚ್.ಎಸ್.ಗೋಪಾಲಕೃಷ್ಣ, ಆಯುಕ್ತ,**

ಕ್ರೀಡಾಕೂಟ ನಡೆಯುವ ಸ್ಥಳ ಹಾಗೂ ಸ್ಪರ್ಧೆಗಳು...

ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಅಥ್ಲೆಟಿಕ್ಸ್, ಬಾಲ್ ಬ್ಯಾಡ್ಮಿಂಟನ್, ಬಾಸ್ಕೆಟ್‌ಬಾಲ್, ಬಾಕ್ಸಿಂಗ್, ಜಿಮ್ನಾಸ್ಟಿಕ್ಸ್, ಹ್ಯಾಂಡ್‌ಬಾಲ್, ಹಾಕಿ, ಕಬಡ್ಡಿ, ಖೋ–ಖೋ, ಶೂಟಿಂಗ್, ಈಜು, ಥ್ರೋಬಾಲ್, ವಾಲಿಬಾಲ್ ಕ್ರೀಡೆಗಳು ನಡೆಯಲಿವೆ. ಹಾಗೆಯೇ **ಮೈಸೂರು ವಿವಿ ಓವಲ್ ಮೈದಾನದಲ್ಲಿ** ಆರ್ಚರಿ, **ಮಾನಸ ಗಂಗೋತ್ರಿ ಒಳಾಂಗಣ ಕ್ರೀಡಾಂಗಣದಲ್ಲಿ** ಷಟಲ್ ಬ್ಯಾಡ್ಮಿಂಟನ್, **ರಿಂಗ್ ರಸ್ತೆ(ಉತ್ತನಹಳ್ಳಿ ಜಂಕ್ಷನ್)ಯಲ್ಲಿ** ಸೈಕ್ಲಿಂಗ್, **ಮೈಸೂರು ವಿವಿ ಸ್ಪೋರ್ಟ್ ಪೆವಿಲಿಯನ್‌ನಲ್ಲಿ** ಫೆನ್ಸಿಂಗ್, ಯೋಗ, ನೆಟ್‌ಬಾಲ್, **ಫುಟ್‌ಬಾಲ್ ಮೈದಾನದಲ್ಲಿ** ಫುಟ್‌ಬಾಲ್ ಪಂದ್ಯಗಳು ನಡೆಯಲಿವೆ. **ಯುವರಾಜ ಕಾಲೇಜು ಒಳಾಂಗಣದಲ್ಲಿ** ಜೂಡೋ, ಚಾಮರಾಜಪುರಂನ **ಮೈಸೂರು ಟೆನ್ನಿಸ್ ಕ್ಲಬ್‌ನಲ್ಲಿ** ಟೆನ್ನಿಸ್, **ವಿದ್ಯಾರಣ್ಯಪುರಂ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ** ಟೇಬಲ್ ಟೆನ್ನಿಸ್, **ಮಹಾರಾಜ ಕಾಲೇಜು ಒಳಾಂಗಣದಲ್ಲಿ** ಟೆಕ್ವಾಂಡೋ, **ಡಿ.ದೇವರಾಜ ಅರಸು ಕುಸ್ತಿ ಅಖಾಡದಲ್ಲಿ** ಕುಸ್ತಿ, **ಮಹಾರಾಜ ಶತಮಾನೋತ್ಸವ ಭವನದಲ್ಲಿ** ವೈಟ್‌ಲಿಫ್ಟಿಂಗ್ ಹಾಗೂ **ಎನ್‌ಐಇ ಒಳಾಂಗಣ ಕ್ರೀಡಾಂಗಣದಲ್ಲಿ** ವುಶು ಕ್ರೀಡೆ ನಡೆಯಲಿದೆ.

ಕ್ರೀಡಾ ಉಪಸಮಿತಿ ವತಿಯಿಂದ ಸಂಘಟಿಸಲಾದ ಕ್ರೀಡೆಗಳು...

ಕೆಆರ್‌ಎಸ್ ಹಿನ್ನೀರಿನಲ್ಲಿ **ಸಾಹಸ ಕ್ರೀಡೆಗಳು,** ಮೈಸೂರಿನ ದಿವ್ಯಜ್ಯೋತಿ ಚಾರಿಟೇಬಲ್ ಟ್ರಸ್ಟ್‌ನಲ್ಲಿ **ಅಂಧರ ಚೆಸ್,** ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ **ಬಾಡಿ ಬಿಲ್ಡಿಂಗ್,** ಮಹಾರಾಜ ಕಾಲೇಜು ಮೈದಾನದಲ್ಲಿ **ಕರಾಟೆ,** ವಿಲೇಜ್ ಹಾಸ್ಟೆಲ್(ಕಾಫಿ ಬೋರ್ಡ್ ಬಳಿ) ಮೈದಾನದಲ್ಲಿ **ಸೈಕಲ್ ಪೋಲೋ,** ದಾಸ್‌ಪ್ರಕಾಶ್ ಪ್ಯಾರಡೈಸ್‌ನಲ್ಲಿ **ಚೆಸ್** ಪಂದ್ಯಾವಳಿ ಆಯೋಜಿಸಲಾಗುವುದು.


ಅ.4ರವರೆಗೆ ಪ್ರತೀದಿನ ರಾತ್ರಿ 9 ರಿಂದ 11 ಗಂಟೆವರೆಗೆ ಮೈಸೂರು ಅರಮನೆ ಸುತ್ತ ವಾಹನ ಸಂಚಾರ ನಿಷೇಧ

ಸುತ್ತಾಡಿಕೊಂಡು ದೀಪಾಲಂಕಾರ ಸವಿಯುವ ಸದವಕಾಶ



● ಡಬ್ಬಲ್ ಡೆಕ್ಕರ್ ಬಸ್‌ಗಳಿಗೆ ವಿನಾಯ್ತಿ ● ಯಾವುದೇ ಕಿರಿಕಿರಿಗೆ ಅವಕಾಶವಿಲ್ಲ

ಮೈಸೂರು, ಸೆ.27(ಆರ್‌ಕೆ)–ವಿದ್ಯುದ್ದೀಪಾಲಂಕಾರ ವೀಕ್ಷಿಸಲು ಅನುವಾಗುವಂತೆ ಮೈಸೂರು ಅರಮನೆ ಸುತ್ತಲಿನ ರಸ್ತೆಗಳಲ್ಲಿ ಅಕ್ಟೋಬರ್ 4ರವರೆಗೆ ಪ್ರತೀದಿನ ರಾತ್ರಿ 9ರಿಂದ 11ರವರೆಗೆ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ.



ಈ ಕುರಿತು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಆದೇಶ ಹೊರಡಿಸಿದ್ದು, ರಾತ್ರಿ ವೇಳೆ ಮೈಸೂರಿನ ಹೃದಯ ಭಾಗದಲ್ಲಿ ವಿದ್ಯುದ್ದೀಪಾಲಂಕಾರ ನೋಡಲು ಜನರು ವಾಹನಗಳಲ್ಲಿ ಬರುತ್ತಿರುವುದರಿಂದ ಸಂಚಾರ ದಟ್ಟಣೆ ಉಂಟಾಗಿ ತೀವ್ರ ತೊಂದರೆಯಾಗುತ್ತಿರುವುದನ್ನು ಮನಗಂಡು ಈ ಕ್ರಮ ಕೈಗೊಂಡಿರುವುದಾಗಿ ತಿಳಿಸಿದ್ದಾರೆ.

ಹಾರ್ಡಿಂಜ್ ಸರ್ಕಲ್, ಚಾಮರಾಜ ಸರ್ಕಲ್, ಕೃಷ್ಣರಾಜ ಸರ್ಕಲ್, ಸಯ್ಯಾಜಿ ರಾವ್ ರಸ್ತೆ, ಮಹಾರಾಜ ಸಂಸ್ಕೃತ ಪಾಠಶಾಲೆ ಸರ್ಕಲ್, ಗನ್‌ಹೌಸ್ ಸರ್ಕಲ್‌ನಿಂದ ಹಾರ್ಡಿಂಜ್ ಸರ್ಕಲ್‌ವರೆಗಿನ ರಸ್ತೆಯಲ್ಲಿ ಅರಮನೆ ಸುತ್ತ ಆಯುಧ ಪೂಜಾ ದಿನ (ಅ.4)ದವರೆಗೆ ರಾತ್ರಿ 9ರಿಂದ 11ರವರೆಗೆ ಎಲ್ಲಾ ಬಗೆಯ ವಾಹನ ಸಂಚಾರವಿರುವುದಿಲ್ಲ ಎಂದು ನಗರ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ. ▶ 9ನೇ ಪುಟಕ್ಕೆ

ಇಂದಿನಿಂದ ಮೆಗಾ ಇವೆಂಟ್ ಯುವ ದಸರಾ

ಯುವ ಪಡೆಗೆ ಸಂಗೀತದ ರಸದೌತಣ

● ಅಪ್ಪು ನಮನದೊಂದಿಗೆ ಚಾಲನೆ ● ಪಾಸ್ ವ್ಯವಸ್ಥೆ ಇಲ್ಲ, ಮೊದಲು ಬಂದವರಿಗೆ ಆದ್ಯತೆ ● ಗೋಲ್ಡ್ ಪಾಸ್ ಇದ್ದವರಿಗೆ ಪ್ರತ್ಯೇಕ ಗ್ಯಾಲರಿ ● ಯುವ ದಸರಾ ಪೋಸ್ಟರ್ ಬಿಡುಗಡೆ

ಮೈಸೂರು,ಸೆ.27(ಪಿಎಂ)–ಸಂಗೀತ, ಗಾಯನ ಮತ್ತು ನೃತ್ಯದ ಅಬ್ಬರದೊಂದಿಗೆ ಯುವ ಮನಸ್ಸುಗಳಲ್ಲಿ ರೋಮಾಂಚನ ಉಂಟು ಮಾಡುವ ಯುವ ದಸರಾದ ಪೋಸ್ಟರ್ ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಂಗಳವಾರ ಬಿಡುಗಡೆ ಮಾಡಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸೆ.28ರಂದು 'ಅಪ್ಪು ನಮನ'ದೊಂದಿಗೆ ಚಾಲನೆ ಪಡೆಯುವ ಯುವ ದಸರಾ, ಅ.3ರವರೆಗೆ ಸಂಗೀತ, ನೃತ್ಯ, ಗಾನ ಸುಧೆಯ ಕಾರಂಜಿ ಹೊಮ್ಮಿಸಲಿದೆ. ಇದೇ ಮೈದಾನದಲ್ಲಿ ಸಚಿವರು ಪೋಸ್ಟರ್ ಬಿಡುಗಡೆಗೊಳಿಸಿದರು.

ಆಸನಗಳ ಜೋಡಣೆ, ಬೃಹತ್ ಸ್ಪೀಕರ್‌ಗಳ ಅಳವಡಿಕೆ ಹಾಗೂ ತಾತ್ಕಾಲಿಕ ಶೌಚಾಲಯ ವ್ಯವಸ್ಥೆ ಸೇರಿದಂತೆ ಕಾರ್ಯಕ್ರಮಕ್ಕೆ ಅಗತ್ಯವಿರುವ ಕೆಲಸ ಕಾರ್ಯಗಳು ಭರದಿಂದ ಸಾಗಿವೆ. ವೇದಿಕೆಯಲ್ಲಿ ಬೃಹತ್ ಎಲ್‌ಇಡಿ ಪರದೆ ಅಳವಡಿಸುತ್ತಿದ್ದು, ವಿವಿಐಪಿ, ವಿಐಪಿ, ಗೋಲ್ಡ್ ಪಾಸ್ ಗ್ಯಾಲರಿಗಳು ಒಳಗೊಂಡಂತೆ 10 ಸಾವಿರ ಆಸನ ವ್ಯವಸ್ಥೆ ಮಾಡಲಾಗಿದೆ. ಹೆಚ್ಚುವರಿಯಾಗಿ ಇನ್ನೂ 3 ಸಾವಿರ ಆಸನ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದೆ. ಗುರುಕಿರಣ್, ಕುನಾಲ್ ಗಾಂಜಾವಾಲಾ, ವಿಜಯಪ್ರಕಾಶ್, ಕನ್ನಿಕಾ ಕಪೂರ್, ಸೋನು ನಿಗಮ್, ಡಾ.ಶಮಿತಾ ಮಲ್ನಾಡ್, ಮಂಗ್ಲಿ, ಅಮಿತ್ ತ್ರಿವೇದಿ ಮತ್ತು ಸುನಿಧಿ ಚೌಹಾನ್ ಅವರ ಗಾನ ಮೋಡಿ ಯುವ ಸಮೂಹದಲ್ಲಿ ಪುಳಕ ಉಂಟುಮಾಡಲಿದೆ.

ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಸಚಿವರು, ಪ್ರತಿದಿನ ಸಂಜೆ 6ರಿಂದ ರಾತ್ರಿ 10ರವರೆಗೆ ಯುವ ದಸರಾ ಕಾರ್ಯಕ್ರಮಗಳು ನಡೆಯಲಿವೆ. ಅಪ್ಪು ನಮನ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಪುನೀತ್ ರಾಜ್‌ಕುಮಾರ್ ಪತ್ನಿ ಅಶ್ವಿನಿ ಹಾಗೂ ನಟ ಶಿವರಾಜ್‌ಕುಮಾರ್ ಆಗಮಿಸಲಿದ್ದಾರೆ. ಯುವ ದಸರಾಗೆ ಯಾವುದೇ ಪಾಸ್ ವ್ಯವಸ್ಥೆ ಇಲ್ಲ. ಮೊದಲು ಬಂದವರಿಗೆ ಇಲ್ಲಿ ಆದ್ಯತೆ ನೀಡಲಾಗುವುದು ಎಂದರು. ಗೋಲ್ಡ್ ಪಾಸ್ ಹೊಂದಿರುವವರಿಗೆ ಪ್ರತ್ಯೇಕ ಆಸನಗಳ ಗ್ಯಾಲರಿ ವ್ಯವಸ್ಥೆ ಮಾಡಲಾಗುವುದು. ಅಪ್ಪು ನಮನದೊಂದಿಗೆ ಯುವ ದಸರಾಗೆ ಚಾಲನೆ ನೀಡಬೇಕೆಂಬ ಆಶಯದೊಂದಿಗೆ ಸೆ.28ರಿಂದ ಆರಂಭಿಸಲಾಗುತ್ತಿದೆ. ಗೋಲ್ಡ್ ಪಾಸ್ ವ್ಯವಸ್ಥೆ ಸಂಬಂಧ ಇಂದು ಅಧಿಕಾರಿಗಳೊಂದಿಗೆ ಚರ್ಚಿಸಿ ಅಂತಿಮಗೊಳಿಸಲಾಗುವುದು ಎಂದರು. ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಯುವ ದಸರಾ ಉಪ ಸಮಿತಿ ಉಪವಿಶೇಷಾಧಿಕಾರಿ ಆರ್.ಚೇತನ್, ಕಾರ್ಯಾಧ್ಯಕ್ಷ ವೆಂಕಟರಾಜು, ಅಧ್ಯಕ್ಷ ಕಿರಣ್‌ಗೌಡ, ಉಪಾಧ್ಯಕ್ಷರಾದ ಎಂ.ಬದರೀಶ್, ಸಂತೋಷ್‌ಕುಮಾರ್, ಎಂ.ಮಹೇಂದ್ರ ಕಾರ್ಯದರ್ಶಿಗಳಾದ ಡಾ.ಆರ್. ನಿಂಗರಾಜು, ಆಶಾದ್ ರೆಹಮಾನ್ ಷರೀಫ್ ಮತ್ತಿತರರು ಹಾಜರಿದ್ದರು.



ದುರ್ಬಲರಿಗೆ ಶೇ.10 ಮೀಸಲಾತಿ: ತೀರ್ಪು ಕಾಯ್ದಿರಿಸಿದ ಸುಪ್ರೀಂಕೋರ್ಟ್

ನವದೆಹಲಿ: ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ.10ರಷ್ಟು ಮೀಸಲಾತಿ ಒದಗಿಸುವ ಸಂವಿಧಾನದ 103ನೇ ತಿದ್ದುಪಡಿಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಪೂರ್ಣಗೊಳಿಸಿರುವ ಸುಪ್ರೀಂಕೋರ್ಟ್, ಮಂಗಳವಾರ ತನ್ನ ತೀರ್ಪನ್ನು ಕಾಯ್ದಿರಿಸಿತು. ಮುಖ್ಯನ್ಯಾಯಮೂರ್ತಿ ಯು.ಯು.ಲಲಿತ್ ನೇತೃತ್ವದ ಐವರು ಸದಸ್ಯರನ್ನೊಳಗೊಂಡ ಸಾಂವಿಧಾನಿಕ ಪೀಠವು ಈ ವಿಷಯಕ್ಕೆ ಸಂಬಂಧಿಸಿ ಕಳೆದ ಆರು ದಿನಗಳ ಕಾಲ ವಾದ–ಪ್ರತಿವಾದಗಳನ್ನು ಆಲಿಸಿದೆ. ನ್ಯಾಯಮೂರ್ತಿಗಳಾದ ದಿನೇಶ ಮಾಹೇಶ್ವರಿ, ಎಸ್.ರವೀಂದ್ರ ಭಟ್, ಬೇಲಾ ಎಂ.ತ್ರಿವೇದಿ ಹಾಗೂ ಜೆ.ಬಿ.ಪಾರ್ದಿವಾಲಾ ಪೀಠದಲ್ಲಿದ್ದಾರೆ. ಈ ತಿದ್ದುಪಡಿಯ ಸಿಂಧುತ್ವವನ್ನು ಪ್ರಶ್ನಿಸಿ 40ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ರವಿವರ್ಮ ಕುಮಾರ್, ಪಿ.ವಿಲ್ಸನ್, ಮೀನಾಕ್ಷಿ ಅರೋರಾ, ಸಂಜಯ್ ಪಾರೀಖ್ ಹಾಗೂ ಇತರರು ವಾದ ಮಂಡಿಸಿದ್ದರು.

ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಮಲ್ಲಿಕಾರ್ಜುನ ಖರ್ಗೆ ಹೆಸರು ಮತ್ತೆ ಮುಂಚೂಣಿಗೆ

ನವದೆಹಲಿ: ರಾಜಸ್ಥಾನ ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು ಉಲ್ಬಣಗೊಂಡ ಬಳಿಕ, ಪಕ್ಷದ ರಾಷ್ಟ್ರೀಯ ಅಧ್ಯಕ್ಷೀಯ ಚುನಾವಣೆಗೆ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೆಸರು ಮುಂಚೂಣಿಗೆ ಬಂದಿದೆ. ಈ ವಿಚಾರವನ್ನು ಕಾಂಗ್ರೆಸ್ ಉನ್ನತ ಮೂಲಗಳು ತಿಳಿಸಿವೆ.

ಈ ಬಾರಿಯ ಚುನಾವಣೆಯಲ್ಲಿ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರು ಸ್ಪರ್ಧಿಸಲು ಸಜ್ಜಾಗಿದ್ದರು. ಆದರೆ, ರಾಜ್ಯದ ಮುಂದಿನ ಸಿಎಂ ಆಯ್ಕೆ ವಿಚಾರವಾಗಿ ಅಲ್ಲಿನ ಕಾಂಗ್ರೆಸ್ ಶಾಸಕರಲ್ಲಿ ಒಡಕು ಮೂಡಿದೆ. ಹೀಗಾಗಿ ಗೆಹ್ಲೋಟ್ ಸ್ಪರ್ಧಿಸುವುದು ಅನುಮಾನವಾಗಿದೆ. ಕೇರಳದ ತಿರುವನಂತಪುರ ಸಂಸದ ಶಶಿ ತರೂರ್ ಅವರು ಸೆಪ್ಟೆಂಬರ್ 30ರಂದು ನಾಮಪತ್ರ ಸಲ್ಲಿಸಲಿದ್ದಾರೆ. ಅವರಿಗೆ ಎದುರಾಳಿಯಾಗಿ ಹಿರಿಯ ನಾಯಕಿ ಸೆಲ್ಜಾ ಕುಮಾರಿ ಅಥವಾ ರಾಹುಲ್ ಗಾಂಧಿ ಅವರ ಆಪ್ತರೆನಿಸಿಕೊಂಡಿರುವ ಕೆ.ಸಿ.ವೇಣುಗೋಪಾಲ್ ಕಣಕ್ಕಿಳಿಯಲಿದ್ದಾರೆ ಎಂದು ಈ ಮೊದಲು ವರದಿಯಾಗಿತ್ತು. ಸೆಲ್ಜಾ ಕುಮಾರಿ ಮತ್ತು ವೇಣುಗೋಪಾಲ್ ಹೆಸರುಗಳು ಈಗಲೂ ಚಾಲ್ತಿಯಲ್ಲಿವೆ.



ಅಖಿಲ ಭಾರತ ಕಾಂಗ್ರೆಸ್ ಸಮಿತಿ ಖಜಾಂಚಿ ಪವನ್‌ಕುಮಾರ್ ಬನ್ಸಲ್ ಅವರು ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರದ ಮುಖ್ಯಸ್ಥ ಮಧುಸೂದನ್ ಮಿಸ್ತ್ರಿ ಅವರಿಂದ ನಾಮಪತ್ರದ ಅರ್ಜಿ ಪಡೆದುಕೊಂಡಿದ್ದಾರೆ. ಹೀಗಾಗಿ ಚುನಾವಣಾ ಕಣ ಮತ್ತಷ್ಟು ಕುತೂಹಲ ಕೆರಳಿಸಿದೆ. ಕಾಂಗ್ರೆಸ್ ಪಕ್ಷದ ಪ್ರಕಟಣೆ ಪ್ರಕಾರ ಸೆ.24ರಿಂದ 30ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶವಿದೆ. ಅ.1ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಹಿಂಪಡೆಯಲು ಅ.8 ಕೊನೇ ದಿನವಾಗಿದೆ. ಅದೇ ದಿನ (ಅ.8) ಸಂಜೆ 5ರ ವೇಳೆಗೆ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟವಾಗಲಿದೆ. ಅ.17ರಂದು ಚುನಾವಣೆ ನಡೆಯಲಿದ್ದು, ಎರಡು ದಿನಗಳ ಬಳಿಕ (19ರಂದು) ಮತ ಎಣಿಕೆ ನಡೆದು ಫಲಿತಾಂಶ ಹೊರಬೀಳಲಿದೆ.

ತಾಪಂ, ಜಿಪಂ ಚುನಾವಣೆಗೆ ಹೈಕೋರ್ಟ್ ಮತ್ತೆ

12 ವಾರಗಳ ಗಡುವು

ಬೆಂಗಳೂರು, ಸೆ.27– ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ಪೂರ್ಣಗೊಳಿಸಲು ಕರ್ನಾಟಕ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಹೊಸ ಗಡುವು ನೀಡಿದೆ.





ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ವಿಂಗಡಣೆ ಕಾರ್ಯವನ್ನು ಪೂರ್ಣಗೊಳಿಸಿ, ಹೆಚ್ಚುವರಿ 12 ವಾರಗಳಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಇತರ ವರ್ಗಗಳಿಗೆ ಮೀಸಲಾತಿ ಕಲ್ಪಿಸಿ, ಚುನಾವಣೆ ನಡೆಸಲು ಕರ್ನಾಟಕ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಈ ಹಿಂದಿನ ಮೇ 24, 2022ರ ಆದೇಶವನ್ನು ಮಾರ್ಪಡಿಸುವಂತೆ ಕೋರಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ವಿಲೇವಾರಿ ಮಾಡುವಾಗ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಮತ್ತು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರ ವಿಭಾಗೀಯ ಪೀಠವು ಈ ಆದೇಶ ನೀಡಿದೆ.

ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಕಾಯಿದೆ, 2021 ರ ನಿಬಂಧನೆಗಳು ಅಸಂವಿಧಾನಿಕ ಎಂಬ ಘೋಷಣೆಯ ಕುರಿತಂತೆ ಪರಿಹಾರ ಕೋರಿ ರಿಟ್ ಅರ್ಜಿಯನ್ನು ಸಲ್ಲಿಸಿದೆ. ಅರ್ಜಿದಾರರು ಮಾರ್ಚ್ 30, 2021ರ ಡಿಲಿಮಿಟೇಶನ್ ಅಧಿಸೂಚನೆ ಮತ್ತು ಜುಲೈ 1, 2021 ದಿನಾಂಕದ ಮೀಸಲಾತಿ ಅಧಿಸೂಚನೆಗೆ ಅನುಗುಣವಾಗಿ ಎಲ್ಲಾ ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಚುನಾವಣೆಯ ಪ್ರಕ್ರಿಯೆಯನ್ನು ಪ್ರಾರಂಭಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನವನ್ನು ಕೋರಿದ್ದರು.

ಕಾರ್ಯ ಪೂರ್ಣಗೊಂಡಿಲ್ಲ: ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ, ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಕ್ಷೇತ್ರಗಳ ವಿಂಗಡಣೆ ಮತ್ತು ಮೀಸಲು ನಿಗದಿ ಕೆಲಸ ಪೂರ್ಣಗೊಳಿಸಲು ರಾಜ್ಯ ಸರ್ಕಾರಕ್ಕೆ 12 ವಾರ ಕಾಲಾವಕಾಶ ನೀಡಿ ಮೇ 24ರಂದು ಹೈಕೋರ್ಟ್ ಆದೇಶಿಸಿತ್ತು. ಆದರೆ, ಕ್ಷೇತ್ರ ಮರು ವಿಂಗಡಣೆ ಕೆಲಸ ಪೂರ್ಣಗೊಳಿಸಲು ಹೈಕೋರ್ಟ್‌ನಿಂದ ಮತ್ತೆ ಕಾಲಾವಕಾಶ ಪಡೆಯಲು ಮರು ವಿಂಗಡಣೆ ▶ 9ನೇ ಪುಟಕ್ಕೆ



ಮೈಸೂರು ದಸರಾ ದೀಪಾಲಂಕಾರ ಉಪಸಮಿತಿ ಅಧ್ಯಕ್ಷ ಟಿ.ರಮೇಶ್ ಅವರನ್ನು ಮುಖಂಡರಾದ ಶರಾವತಿ ವೆಂಕಟೇಶ್, ಮೈ ಟಾರ್ಪಾಲಿಯನ್ಸ್ ಮಾಲೀಕರಾದ ಪ್ರದೀಪ್‌ಸಿಂಗ್, ಪ್ಲೈವುಡ್ ಮಹದೇವಣ್ಣ, ಮಧುಸ್ ಟೈರ್ ಹೌಸ್ ಮಾಲೀಕರಾದ ಮಧು, ಆಡಿಟರ್ ಪ್ರಸಾದ್, ಪದ್ಮಾಂಭ ಟ್ರೇಡರ್ಸ್ ಮಾಲೀಕರಾದ ಪಾರ್ಶ್ವನಾಥ್ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.

ಪತ್ರಕರ್ತರ ಭವನಕ್ಕೆ ನುಗ್ಗಿ ವ್ಯಕ್ತಿ ದಾಂಧಲೆ



ಡಾ.ಕೆ.ಮಹದೇವ್ ಸುದ್ದಿಗೋಷ್ಠಿ ನಡೆಸುತ್ತಿದ್ದ ವೇಳೆ, ಪತ್ರಕರ್ತರ ಭವನದೊಳಗೆ ಅತಿಕ್ರಮ ಪ್ರವೇಶಿಸಿ, ಗೋಷ್ಠಿಗೆ ಅಡ್ಡಿಪಡಿಸುತ್ತಿರುವುದು.

ಮೈಸೂರು, ಸೆ.27(ಆರ್‌ಕೆಬಿ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ವಿದ್ಯಾಶಂಕರ್ ಅವರ ವಿರುದ್ಧ ಮೈಸೂರು ವಿವಿ ಯೋಜನಾ ಮಂಡಳಿ ಸದಸ್ಯ ಡಾ.ಕೆ.ಮಹದೇವ್ ಅವರು ಸುದ್ದಿಗೋಷ್ಠಿ ನಡೆಸುತ್ತಿದ್ದ ವೇಳೆ, ಕೆಎಸ್‌ಒಯು ಮಂಡ್ಯ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಡಾ.ಸುಧಾಕರ ಹೊಸಳ್ಳಿ ಗುಂಪು ಕಟ್ಟಿಕೊಂಡು ಪತ್ರಕರ್ತರ ಭವನದೊಳಗೆ ಅತಿಕ್ರಮ ಪ್ರವೇಶ ಮಾಡಿದ್ದಲ್ಲದೆ, ದಾಂಧಲೆ ನಡೆಸಿ, ಪತ್ರಿಕಾಗೋಷ್ಠಿಗೆ ಅಡ್ಡಿಪಡಿಸಿದ ಪ್ರಸಂಗ ನಡೆಯಿತು.

ಜೋರು ದನಿಯಲ್ಲಿ ಡಾ.ಕೆ.ಮಹದೇವ್ ಅವರ ಮೇಲೆ ಮುಗಿಬಿದ್ದು, ಪತ್ರಿಕಾಗೋಷ್ಠಿ ನಡೆಸದಂತೆ ಹಾಗೂ ಮುಕ್ತ ವಿವಿ ಕುಲಪತಿ ವಿರುದ್ಧದ ಆಡಿಯೋ ಧ್ವನಿಯನ್ನು ಕೇಳಿಸಬೇಡಿ ಎಂದು ತಾಕೀತು ಮಾಡಿದರು. ಈ ವೇಳೆ ಪತ್ರಕರ್ತರು ಆತನ ವಿರುದ್ಧ ಹರಿಹಾಯ್ದು, ಅತಿಕ್ರಮ ಪ್ರವೇಶ ಮಾಡಿದ್ದ ಬಗ್ಗೆ ಆಕ್ಷೇಪಿಸಿ ಹೊರ ಕಳಿಸಿದರು. ಈ ವೇಳೆ ವಿಷಯ ತಿಳಿದು ಸ್ಥಳಕ್ಕೆ ಪೊಲೀಸರು ಆಗಮಿಸುತ್ತಿದ್ದಂತೆ ವ್ಯಕ್ತಿ ಅಲ್ಲಿಂದ ಹೊರ ನಡೆದರು. ಸುದ್ದಿಗೋಷ್ಠಿ ವೇಳೆ ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ಉಪಸ್ಥಿತರಿದ್ದರು.

ದಾಂಧಲೆ ನಡೆಸಿದ ವ್ಯಕ್ತಿ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಳ್ಳಿ

ಸಾಹಿತಿ, ಪತ್ರಕರ್ತ ಬನ್ನೂರು ರಾಜು ಒತ್ತಾಯ

ಮೈಸೂರು, ಸೆ.27– ಮೈಸೂರು ಜಿಲ್ಲಾ ಪತ್ರಕರ್ತರ ಭವನಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದಲ್ಲದೆ, ಗೂಂಡಾಗಿರಿ ಮಾಡಿ ಗಲಾಟೆ ಎಬ್ಬಿಸಿ, ಗಣ್ಯರ ಹಾಗೂ ವರದಿಗಾರರ ಮೇಲೆ ಹಲ್ಲೆಗೆ ಯತ್ನಿಸಿದ ಕರ್ನಾಟಕ ಮುಕ್ತ ವಿವಿ ನೌಕರ ಸುಧಾಕರ್ ಹೊಸಳ್ಳಿ ಎಂಬ ವ್ಯಕ್ತಿಯ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಪತ್ರಕರ್ತ, ಸಾಹಿತಿ ಬನ್ನೂರು ಕೆ.ರಾಜು ಒತ್ತಾಯಿಸಿದ್ದಾರೆ.

ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ಮತ್ತು ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯರೂ ಆದ ಮೈಸೂರು ವಿವಿಯ ಪಿಎಂಇ ಬೋರ್ಡ್ ಸದಸ್ಯ ಡಾ.ಕೆ.ಮಹದೇವ್, ಜಂಟಿ ಪತ್ರಿಕಾಗೋಷ್ಠಿ ನಡೆಸುತ್ತಿದ್ದ ವೇಳೆ, ಕರ್ನಾಟಕ ಮುಕ್ತ ವಿವಿ ಉದ್ಯೋಗಿ ಸುಧಾಕರ್ ಹೊಸಳ್ಳಿ ಎಂಬುವರು ಏಕಾಏಕಿ ಗೂಂಡಾ ರೀತಿ ಪತ್ರಕರ್ತರ ಭವನಕ್ಕೆ ನುಗ್ಗಿ, ಹಲ್ಲೆಗೆ ಯತ್ನಿಸಿದ್ದಾರೆ. ಆತನನ್ನು ಕೂಡಲೇ ಗೂಂಡಾ ಕಾಯ್ದೆಯಡಿ ಬಂಧಿಸಬೇಕು. ಮುಕ್ತ ವಿವಿ ತ್ವರಿತವಾಗಿ ಕ್ರಮ ತೆಗೆದುಕೊಂಡು ಆತನನ್ನು ಕೆಲಸದಿಂದ ವಜಾ ಮಾಡಬೇಕು. ಹಾಗೆಯೇ ಜಿಲ್ಲಾ ಪತ್ರಕರ್ತರ ಸಂಘವು ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡು ಪತ್ರಕರ್ತರ ಮತ್ತು ಪತ್ರಿಕಾಗೋಷ್ಠಿ ನಡೆಸುವವರ ರಕ್ಷಣೆಗೆ ಮುಂದಾಗಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ವಹಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಶರನ್ನವರಾತ್ರಿ ಮಹೋತ್ಸವ



ಮೈಸೂರು,ಸೆ.27–ಮೈಸೂರಿನ ರಾಜೇಶ್ವರಿನಗರದಲ್ಲಿರುವ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಸೆ.26ರಿಂದ ಅ.5 ರವರೆಗೆ ಶರನ್ನವರಾತ್ರಿ ಮಹೋತ್ಸವ ನಡೆಯಲಿದೆ. ಪ್ರತಿದಿನ ಸಂಜೆ 5.30ರಿಂದ 6.30ರವರೆಗೆ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿಯವರಿಂದ ಲಲಿತಾ ಸಹಸ್ರನಾಮ, ಪ್ರತಿದಿನ ಸಂಜೆ 6.30 ರಿಂದ 8 ರವರೆಗೆ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಸೆ.26ರಂದು ಅರಿಶಿನ ಅಲಂಕಾರ ಮತ್ತು ಸೆ.27ರಂದು ಕುಂಕುಮಾಲಂಕಾರದಲ್ಲಿ ಕಂಗೊಳಿಸಿದ ದೇವಿಯನ್ನು ನೂರಾರು ಭಕ್ತರು ದರ್ಶನ ಪಡೆದರು. ಸೆ.28ರಂದು ಹೂವುಗಳಿಂದ ಅಲಂಕಾರ, ಪ್ರತಿಪದ ಭಜನಾ ಮಂಡಳಿಯವರಿಂದ ಭಜನೆ. ಸೆ.29ರಂದು ಶಾಖಾಂಬರಿ ತರಕಾರಿಗಳಿಂದ ಅಲಂಕಾರ, ಶ್ರೀ ಶಾರದಾದೇವಿ ಮಹಿಳಾ ಮಂಡಳಿಯವರಿಂದ ಭಕ್ತಿಗೀತೆ ಮತ್ತು ಭಜನೆ. ಸೆ.30ರಂದು ಗಂಧಾಲಂಕಾರ, ರಂಜನಿ ಗಾನ ಕಲಾ ಶಾಲೆಯವರಿಂದ ಸಂಗೀತ ಕಾರ್ಯಕ್ರಮ. ಅ.1ರಂದು ಹೂವುಗಳಿಂದ ಅಲಂಕಾರ, ಶ್ರೀಮತಿ ಸ್ವರ್ಣ ನಾಗರಾಜ್ ಮತ್ತು ವೃಂದದವರಿಂದ ಭಕ್ತಿ ಸಂಗೀತ. ಅ.2ರಂದು ಸರಸ್ವತಿ ಅಲಂಕಾರ, ವಿದುಷಿ ಲಕ್ಷ್ಮಿ ಎನ್.ಎಸ್. ಅವರ ನೃತ್ಯಾನ್ವೇಷಣ ನೃತ್ಯ ಶಾಲೆಯವರಿಂದ ಭರತನಾಟ್ಯ. ಅ.3ರಂದು ಕಾಳರಾತ್ರಿ/ದುರ್ಗ ಅಲಂಕಾರ, ವಿದುಷಿ ಶುಭ ರಾಘವೇಂದ್ರ ಶಿಷ್ಯ ವೃಂದದಿಂದ ದೇವರನಾಮ ಮತ್ತು ಶಾಸ್ತ್ರೀಯ ಸಂಗೀತ. ಅ.4ರಂದು ಆಯುಧ ಪೂಜಾ–ಫಲ ಪುಷ್ಪಗಳಿಂದ ಅಲಂಕಾರ, ಶ್ರೀಮತಿ ವಿಜಯ ಸುದರ್ಶನ್ ತಂಡದವರಿಂದ ಭಜನೆ, ಅ.5ರಂದು ಸರ್ವಾಭರಣ ಅಲಂಕಾರ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ವಿಶ್ವ ಪ್ರವಾಸೋದ್ಯಮ ದಿನಾಚರಣೆ ಪ್ರಯುಕ್ತ ಮೃಗಾಲಯದಲ್ಲಿ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಪ್ರವಾಸಿಗರಿಗೆ ಗುಲಾಬಿ ಹೂ ಹಾಗೂ ಸಿಹಿ ವಿತರಿಸಿದರು. ಈ ವೇಳೆ ಸದಸ್ಯರಾದ ಗೋಕುಲ್ ಗೋವರ್ಧನ್, ರೇಚಣ್ಣ, ನಗರಪಾಲಿಕೆ ಸದಸ್ಯ ಜಗದೀಶ್, ದಸರಾ ಸಾಹಸ ಕ್ರೀಡೆಗಳ ಸಮಿತಿ ಉಪಾಧ್ಯಕ್ಷ ಶಿವರಾಜ್ ಇನ್ನಿತರರು ಉಪಸ್ಥಿತರಿದ್ದರು.

ದಸರಾ ಉದ್ಘಾಟನೆ ವೇಳೆ ಮೇಯರ್‌ಗೆ ಅಪಮಾನ ಆರೋಪ

ಪಾಲಿಕೆ ವಿಶೇಷ ಕೌನ್ಸಿಲ್ ಸಭೆ ಕರೆದು ಖಂಡನಾ ನಿರ್ಣಯ ಕೈಗೊಳ್ಳಲು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಸಲಹೆ

ಮೈಸೂರು, ಸೆ.27(ಆರ್‌ಕೆಬಿ)– ಈ ಬಾರಿಯ ದಸರಾ ಮಹೋತ್ಸವ ಉದ್ಘಾಟನೆಯ



ಚಾಮುಂಡಿಬೆಟ್ಟದ ಕಾರ್ಯಕ್ರಮ ವೇಳೆ ಪ್ರಥಮ ಪ್ರಜೆ ಮೇಯರ್ ಶಿವಕುಮಾರ್ ಅವರನ್ನು ವೇದಿಕೆ ಕೆಳಗೆ ಕೂರಿಸಿದ್ದನ್ನು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಆಕ್ಷೇಪಿಸಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಯರ್ ಅವರ ಹೆಸರು ವೇದಿಕೆಯಲ್ಲಿರುವ ಪಟ್ಟಿಯಲ್ಲಿ ಇಲ್ಲದ ಮೇಲೆ ಮೇಯರ್ ಅವರು ಹೋಗಲೇ ಬಾರದಿತ್ತು. ಇನ್ನು ರಾಷ್ಟ್ರಪತಿಗಳಾಗಲೀ, ಪ್ರಧಾನಿಗಳಾಗಲೀ ನಗರಕ್ಕೆ ಭೇಟಿ ನೀಡಿದ ವೇಳೆ ಅವರನ್ನು ಸ್ವಾಗತಿಸುವವರು ಮೇಯರ್ ಅವರೇ ಆಗಿರುತ್ತಾರೆ. ಹೀಗಿದ್ದೂ ದಸರಾ ಉದ್ಘಾಟನಾ ಸಮಾರಂಭದಲ್ಲಿ ಅವರಿಗೆ ಸ್ಥಾನ ನೀಡದಿದ್ದುದು ಸರಿಯಲ್ಲ. ಇದು ಮೈಸೂರಿನ ಪ್ರಥಮ ಪ್ರಜೆಗೆ ಅಪಮಾನ ಮಾಡಿದಂತೆ ಎಂದು ಬೇಸರ ವ್ಯಕ್ತಪಡಿಸಿದರು. ಹೀಗಾಗಿ ಪಾಲಿಕೆ ವಿಶೇಷ ಕೌನ್ಸಿಲ್ ಸಭೆ ಕರೆದು ಖಂಡನಾ ನಿರ್ಣಯ ಅಂಗೀಕರಿಸಲು ಸಲಹೆ ನೀಡಿದರು.

ನಿಧನ

ಡಾ.ಎಂ.ಪಿ.ರಾಜಣ್ಣ



ಮೈಸೂರು: ಮಂಡ್ಯ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕ ಡಾ.ಎಂ.ಪಿ.ರಾಜಣ್ಣ ಅವರು ಇಂದು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರಿಗೆ 58 ವರ್ಷ ವಯಸ್ಸಾಗಿತ್ತು. ಮೃತರು ಮೈಸೂರು ನಿವಾಸಿಯಾಗಿದ್ದು, ಪತ್ನಿ ಶ್ರೀಮತಿ ಶೋಭ, ಮಕ್ಕಳು ಶ್ರೇಯಸ್, ಸ್ಫೂರ್ತಿಯನ್ನು ಅಗಲಿದ್ದಾರೆ. ಇವರು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುವಾಗ ಹಲವಾರು ಭತ್ತದ ತಳಿಗಳನ್ನು ಅಭಿವೃದ್ಧಿಪಡಿಸಿ ರೈತರ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದರು. ಅಂತ್ಯಕ್ರಿಯೆ ನಾಳೆ (ಬುಧವಾರ) ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ಟಿ.ನರಸೀಪುರ ತಾಲೂಕು ಮಾವಿನಹಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಾಗ್ಯಲಕ್ಷ್ಮಿ



ಮೈಸೂರು ಪೊಲೀಸ್ ಲೇಔಟ್ ನಿವಾಸಿ ಟಿ.ಎಸ್.ಸಿದ್ದಪ್ಪಾಜಿ ಅವರ ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ (49) ಅವರು ಇಂದು ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಲಲಿತಾದ್ರಿಪುರ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿಜೆಪಿ ವಿರುದ್ಧ ರಾಜ್ಯದ ಜನರಲ್ಲಿ ಭ್ರಮನಿರಸನ

ಕಾಂಗ್ರೆಸ್‌ಗೆ ಅಧಿಕಾರ ಖಚಿತ: ಕಾಂಗ್ರೆಸ್ ಒಬಿಸಿ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ



ಮೈಸೂರು, ಸೆ.26(ಆರ್‌ಕೆಬಿ)– ಇಂದು ದೇಶದಲ್ಲಿ ರೈತರ ಪರಿಸ್ಥಿತಿ ಹದಗೆಟ್ಟಿದೆ. ಗೊಬ್ಬರದ ಜೊತೆಗೆ ಇನ್ನಿತರ ವರ್ಗದ ಜನರು ಸಹ ಬೆಲೆಯೇರಿಕೆ, ಭ್ರಷ್ಟಾಚಾರದಿಂದ ಬಳಲುತ್ತಿದ್ದಾರೆ. ಹೀಗಾಗಿ ದೇಶ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ರಾಹುಲ್ ಗಾಂಧಿ ಅವರು ಭಾರತ್ ಜೋಡೋ ಪಾದಯಾತ್ರೆ ಕೈಗೊಂಡಿದ್ದಾರೆ ಎಂದು ಕಾಂಗ್ರೆಸ್ ಅತೀ ಹಿಂದುಳಿದ ವರ್ಗ ಘಟಕದ ಅಧ್ಯಕ್ಷ ಮಧು ಬಂಗಾರಪ್ಪ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 40 ಪರ್ಸೆಂಟ್ ಕಮಿಷನ್ ಅವ್ಯವಹಾರ ನಡೆಯುತ್ತಿದೆ. ಎಲ್ಲ ನೇಮಕಾತಿಗಳಲ್ಲೂ ಭ್ರಷ್ಟಾಚಾರ ನಡೆದಿದೆ. ಹೀಗಾಗಿ ಈ ಕುರಿತು ವಿರೋಧ ಪಕ್ಷಗಳು ಧ್ವನಿಯೆತ್ತಿದರೂ ಬಿಜೆಪಿ ಮಾನ, ಮರ್ಯಾದೆ ಬಿಟ್ಟು ಅಧಿಕಾರದಲ್ಲಿ ಮುಂದುವರಿದಿದೆ ಎಂದು ಲೇವಡಿ ಮಾಡಿದರು.

ದೇಶವನ್ನು ಜಾತಿ, ಮತ, ಧರ್ಮದ ಆಧಾರದ ಮೇಲೆ ಛಿದ್ರಗೊಳಿಸಲಾಗುತ್ತಿದೆ. ಹೀಗಾಗಿ ರಾಹುಲ್ ಗಾಂಧಿ ಅವರು ಕೈಗೊಂಡಿರುವ 'ಭಾರತ್ ಜೋಡೋ' ಪಾದಯಾತ್ರೆಗೆ ಅಭೂತಪೂರ್ವ ಬೆಂಬಲ ದೊರೆತಿದೆ. ಹಿಂದುಳಿದ ವರ್ಗದವರು ಅಪಾರ ಸಂಖ್ಯೆಯಲ್ಲಿ ಪಾದಯಾತ್ರೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಹೇಳಿದರು. ರಾಜ್ಯಾದ್ಯಂತ ಇರುವ ಮಾಜಿ ಮುಖ್ಯಮಂತ್ರಿ ದಿವಂಗತ ಬಂಗಾರಪ್ಪ ಅವರ ಅಭಿಮಾನಿಗಳನ್ನು ಪಕ್ಷ ಹಾಗೂ ಪಾದಯಾತ್ರೆಗೆ ಸೆಳೆಯುವ ಜವಾಬ್ದಾರಿಯನ್ನು ತಾವು ಹೊತ್ತಿರುವುದಾಗಿ ತಿಳಿಸಿದರು. ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಹಾಕಿ, ಸಿಮ್ ನೀಡುವುದಾಗಿ ಹೇಳುತ್ತಿದ್ದಾರೆ. ರೈತರು ಒಮ್ಮೆ ಒಪ್ಪಿದಲ್ಲಿ ಈ ಹಿಂದೆ ಜನರ ಮೊಬೈಲ್‌ಗಳಿಗೆ ಉಚಿತ ಸಿಮ್ ನೀಡಿ, ನಂತರ ಸುಲಿಗೆ ಮಾಡುತ್ತಿರುವ ರೀತಿಯಲ್ಲಿಯೇ ರೈತರು ಒಂದು ಪಂಪ್‌ಸೆಟ್‌ಗೆ ವರ್ಷಕ್ಕೆ ಸುಮಾರು 60ರಿಂದ 70 ಸಾವಿರ ರೂ. ಪಾವತಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ವಾಸು, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಗೋವಿಂದರಾಜು, ಕಾಂಗ್ರೆಸ್ ಓಬಿಸಿ ಪದಾಧಿಕಾರಿಗಳಾದ ಶಿವಮಲ್ಲು, ಮಾರುತಿ, ಶಿವಣ್ಣ, ಉಪಸ್ಥಿತರಿದ್ದರು.



ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮೈಸೂರು ತಾಲೂಕು ಇಲವಾಲ ಹೋಬಳಿಯ ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ಮೈಸೂರು ಪುರಭವನದಲ್ಲಿ ನಡೆದ ದಕ್ಷಯಜ್ಞ ನಾಟಕದಲ್ಲಿ ದಕ್ಷಬ್ರಹ್ಮನ ಪಾತ್ರ ಅಭಿನಯಿಸಿದ ಹುಯಿಲಾಳು ರಾಮಸ್ವಾಮಿ ಅವರನ್ನು ದಸರಾ ಸಾಂಸ್ಕೃತಿಕ ಉಪಸಮಿತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮಹೇಶ್, ಸತೀಶ್, ಮಧುಪ್ರಕಾಶ್, ಹರೀಶ್‌ರೆಡ್ಡಿ, ಗೋಪಾಲಗೌಡ, ಬೋರಲಿಂಗೇಗೌಡ, ಸುನೀಲ್, ರಾಚಪ್ಪ, ಅಶೋಕ್‌ಗೌಡ, ಮಂಜುನಾಥ್‌ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಥಳೀಯ ವೃತ್ತಿ ಕಲಾವಿದರ ಕಡೆಗಣನೆ

ಕಲಾವಿದರ ಸಮಿತಿಯ ಎಂ.ಪುಟ್ಟಸ್ವಾಮಿ ಆರೋಪ

ಮೈಸೂರು,ಸೆ.27(ಆರ್‌ಕೆಬಿ)– ದಸರಾ ಸಾಂಸ್ಕೃತಿಕ ಕಾರ್ಯಕ್ರಮ ವೇಳೆ ಮೈಸೂರಿನ ಸ್ಥಳೀಯ ವೃತ್ತಿ ಕಲಾವಿದರನ್ನು ಕಡೆಗಣಿಸಲಾಗಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಸಾಂಸ್ಕೃತಿಕ ವೃತ್ತಿ ಕಲಾವಿದರ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ಪುಟ್ಟಸ್ವಾಮಿ ಆರೋಪಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಸರಾ ಸಂದರ್ಭದಲ್ಲಿ 9 ದಿನಗಳ ಕಾಲ ವಿವಿಧ ಕಾರ್ಯಕ್ರಮಗಳ ಪಟ್ಟಿ ಪ್ರಕಟಿಸಲಾಗಿದೆ. ಆದರೆ ಈ ವೇಳೆ ಯಾವುದೇ ಸೂಕ್ತ ಮಾನದಂಡ ಅನುಸರಿಸದೆ ಅಧಿಕಾರಿಗಳು ತಮಗೆ ಬೇಕಾದವರನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ದೂರಿದರು.

ಕೊರೊನಾ ವೇಳೆ ಯಾವುದೇ ಕಾರ್ಯಕ್ರಮವಿಲ್ಲದೇ ಕಲಾವಿದರು ಸಂಕಷ್ಟದಲ್ಲಿದ್ದರು. ಈಗಲೂ ಅವರ ಜೀವನ ದುಸ್ಥಿತಿಯಲ್ಲಿದೆ. ಹೀಗಿರುವಾಗ ಈ ರೀತಿಯ ನಿರ್ಲಕ್ಷ್ಯ ಸರಿಯಲ್ಲ. ಆದ್ದರಿಂದ ಈಗಲಾದರೂ ಕ್ರಮ ಕೈಗೊಂಡು ನೈಜ ಕಲಾವಿದರಿಗೆ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಬಿ.ಶ್ರೀಕಂಠ ರಾವ್, ಆರ್.ಲಕ್ಷ್ಮಣ್, ಚಿಕ್ಕಪ್ಪಾಜಿ, ವಿನ್ಸೆಂಟ್, ಶಿವಕುಮಾರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.09.2022 ಬುಧವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ತೃತೀಯ, ನಕ್ಷತ್ರ : ಚಿತ್ತ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಪಾರ್ಕಿನ್‌ಸನ್ಸ್ ಕಾಯಿಲೆಯ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಶ್ರೀಮಾತಾ ರಮಾನಂದ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಅದಮ್ಯ ರಮಾನಂದ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟ, ಸ್ಥಳ: ಶ್ರೀ ಗಾಯತ್ರಿ ಲಕ್ಷ್ಮೀನರಸಿಂಹ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6 ರಿಂದ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಚಿತ್ರ ಮತ್ತು ಛಾಯಾಚಿತ್ರ ಕಲಾವಿದ ಬಿ.ಎಸ್. ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ ಏಕವ್ಯಕ್ತಿ ಛಾಯಾಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

ದಸರಾ ಕಾರ್ಯಕ್ರಮಗಳು



■ **ಯೋಗ ಸಂಭ್ರಮ:** ಉದ್ಘಾಟನೆ: ಶಾಸಕ ಎಸ್.ಎ.ರಾಮದಾಸ್, ಸ್ಥಳ: ಅರಮನೆ ಆವರಣ, ಬೆಳಗ್ಗೆ 6ಕ್ಕೆ.

■ **ದಸರಾ ದರ್ಶನ:** ಉದ್ಘಾಟನೆ : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 9.30ಕ್ಕೆ.

■ **ಕವಿಗೋಷ್ಠಿ :** ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 11.30ಕ್ಕೆ.

■ **ವೈದ್ಯಕೀಯ ವಸ್ತುಪ್ರದರ್ಶನ :** ಸ್ಥಳ: ಮೈಸೂರು ಮೆಡಿಕಲ್ ಕಾಲೇಜು, ಬೆಳಗ್ಗೆ 11ಕ್ಕೆ.

■ **ಯುವ ದಸರಾ :** ಸ್ಥಳ: ಮಹಾರಾಜ ಕಾಲೇಜು ಮೈದಾನ, ಸಂಜೆ 6ಕ್ಕೆ.

■ **ಫಲಪುಷ್ಪ ಪ್ರದರ್ಶನ:** ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಫಲಪುಷ್ಪ ಪ್ರದರ್ಶನ, ಸ್ಥಳ: ಅರಮನೆ ಆವರಣ, ಸಂಜೆ 5.30ಕ್ಕೆ.

■ **ದೀಪಾಲಂಕಾರ:** ದಸರಾ ವಿದ್ಯುತ್ ದೀಪಾಲಂಕಾರ, ಸ್ಥಳ: ಹಸಿರು ಮಂಟಪ, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಜೆ 6.30ಕ್ಕೆ

■ **ಅರಮನೆ ಆವರಣ :** ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು, ಕರ್ನಾಟಕ ಕಲಾಶ್ರೀ ವಿದ್ವಾನ್ ಸಿ. ರಾಮದಾಸ್ ಅವರಿಂದ ಹಾರ್ಮೋನಿಯಂ, ಪಂಡಿತ್ ಗಣಪತಿ ಭಟ್ ಹಾಸಣಗಿ ಅವರಿಂದ ದಾಸರ ಪದ, ಕರ್ನಾಟಕ ಕಲಾಶ್ರೀ ಸತ್ಯನಾರಾಯಣರಾಜು ಮತ್ತು ತಂಡದಿಂದ ಭರತನಾಟ್ಯ, ಉಸ್ತಾದ್ ಫಜಲ್ ಖುರೇಷಿ ಅವರಿಂದ ತಬಲ ವಾದನ, ಸ್ಥಳ: ಅರಮನೆ ಆವರಣ, ಸಂಜೆ 6 ಗಂಟೆಗೆ.

■ **ಮೈಸೂರು ಬೊಂಬೆ ರಂಗಮಂದಿರ :** ಬೊಂಬೆ ಆಟ ಪ್ರದರ್ಶನ, ಸ್ಥಳ: ಮೈಸೂರು ಬೊಂಬೆ ರಂಗಮಂದಿರ, ಸಂಜೆ 5 ರಿಂದ.

ಜಗನ್ಮೋಹನ ಅರಮನೆ

ಸಂಜೆ 6 ರಿಂದ	:	ಶ್ರೀರಾಮ ಜನಪದ ಕಲಾ ಸಂಘ, ಕಾರ್ಕಳ ಅವರಿಂದ ಕಾಂಗಿಲು ನೃತ್ಯ
ಸಂಜೆ 6.45 ರಿಂದ	:	ಮೈಸೂರಿನ ಕೈದಿಗಳಿಂದ ದೇಶಭಕ್ತಿ ಗೀತೆ
ಸಂಜೆ 7.30 ರಿಂದ	:	ಆಂಧ್ರಪ್ರದೇಶದ ಸಂಪತ್ ಕುಮಾರ್ ಮತ್ತು ಸಂಕೀರ್ತಿ ಕುಮಾರ್ ಅವರಿಂದ ವಯೋಲಿನ್ ದ್ವಂದ್ವ ವಾದನ
ರಾ. 8.30 ರಿಂದ	:	ಹರ್ಷಿಕಾ ಮತ್ತು ತಂಡದಿಂದ ಮಹಿಷಾಸುರ ಮರ್ಧಿನಿ ನೃತ್ಯರೂಪಕ

ಕಲಾಮಂದಿರ

ಸಂಜೆ 6 ರಿಂದ	:	ಶಿವಮೊಗ್ಗ ರಾಮೇಶ್ವರ ಡೊಳ್ಳು ಕಲಾ ಟ್ರಸ್ಟ್‌ನಿಂದ ಡೊಳ್ಳು ಕುಣಿತ
ಸಂಜೆ 6.45 ರಿಂದ	:	ಅಂಗಡಿ ವಾಮದೇವ ಕಲಾತಂಡದಿಂದ ಸುಗಮ ಸಂಗೀತ
ರಾ. 7.30ರಿಂದ	:	ಧಾರವಾಡದ ನಯನ ತಾರ ಭಾರತ ತಂಡದಿಂದ ನೃತ್ಯರೂಪಕ
ರಾ. 8.30 ರಿಂದ	:	ಚಾರು ಸಾಂಸ್ಕೃತಿಕ ಪ್ರತಿಷ್ಠಾನದಿಂದ ರಂಗ ಗೀತೆಗಳು

ಗಾನಭಾರತಿ

ಸಂಜೆ 6 ರಿಂದ	:	ಬೆಂಗಳೂರಿನ ಪದ ತಂಡದಿಂದ ಜಾನಪದ ಗೀತೆಗಳು
ಸಂಜೆ 6.45 ರಿಂದ	:	ಎಸ್.ಎನ್. ಲೋಕೇಶ್ ಅವರಿಂದ ಸುಗಮ ಸಂಗೀತ
ರಾ. 7.30 ರಿಂದ	:	ಡಾ. ಉಮಾಕುಮಾರ್ ಮತ್ತು ತಂಡದಿಂದ ಕರ್ನಾಟಕ ಸಂಗೀತ
ರಾ. 8.30 ರಿಂದ	:	ಗುರು ಉಮಾತಪಸ್ಯಾನಂದ ಮತ್ತು ತಂಡದಿಂದ ನೃತ್ಯ ಕಾರ್ಯಕ್ರಮ

ಶ್ರೀ ನಾದಬ್ರಹ್ಮ ಸಂಗೀತ ಸಭಾ

ಸಂಜೆ 6 ರಿಂದ	:	ಸದಾಶಿವ ತಿಪ್ಪಣ್ಣ ಮುಲೆ ತಂಡದವರಿಂದ ಸೆಹನಾಯ್ ವಾದನ
ಸಂಜೆ 6.45 ರಿಂದ	:	ಅಲ್ಫಿ ಮತ್ತು ತಂಡದಿಂದ ಘಜಲ್
ರಾ. 7.30 ರಿಂದ	:	ವಿದುಷಿ ಸರಸ್ವತಿ ಅವರಿಂದ ಕರ್ನಾಟಕ ಸಂಗೀತ
ರಾ. 8.30 ರಿಂದ	:	ಮೈಸೂರಿನ ನಿತ್ಯ ನಿರಂತರ ಸಾಂಸ್ಕೃತಿಕ ಟ್ರಸ್ಟ್‌ನ ವಿಶೇಷ ಮಕ್ಕಳಿಂದ ಜಾನಪದ ನೃತ್ಯ

ಚಿಕ್ಕಗಡಿಯಾರ

ಸಂಜೆ 5.30 ರಿಂದ	:	ಶಂಕರಣ್ಣ ಶಂಕಣ್ಣನವರ್ ತಂಡದಿಂದ ಜೋಗತಿ ನೃತ್ಯ, ಶ್ರೀ ಅಕ್ಕಮಹಾದೇವಿ ಜಾನಪದ ಮಹಿಳಾ ಕಲಾ ಸಂಘದಿಂದ ಜಾನಪದ ಗೀತೆಗಳು.
ಸಂಜೆ 6.30 ರಿಂದ	:	ಅಭಯಾಂಜನೇಯ ಮುರಳಿ ಕೋಲಾ ಭಜನಾ ಮಂಡಳಿಯಿಂದ ಜಾನಪದ ಗೀತೆಗಳು.
ರಾ. 7 ರಿಂದ	:	ಶ್ರೀ ಸಿದ್ದಲಿಂಗೇಶ್ವರ ಜಾನಪದ ಕಲಾ ತಂಡದಿಂದ ಲಾವಣಿ ಪದ/ಗೀಗೀ ಪದಗಳು
ರಾ. 8 ರಿಂದ	:	ಮೈಸೂರಿನ ಮಹದೇವ ಮತ್ತು ತಂಡದಿಂದ ತಂಬೂರಿ ಪದ

ಪುರಭವನ

ಬೆಳಗ್ಗೆ 10.30 ರಿಂದ	:	ಬೆಳಗಾವಿ ಗಜಾನನ ನಾಟ್ಯ ಸಂಘದಿಂದ ಕಂಠೀರವ ಸಂಗೊಳ್ಳಿ ರಾಯಣ್ಣ ಐತಿಹಾಸಿಕ ನಾಟಕ
ಮ. 3 ರಿಂದ	:	ಶ್ರೀ ಮಹದೇಶ್ವರ ಕಲಾ ತಂಡದಿಂದ ರಾಧಾಳ ಮದುವೆ ಸಾಮಾಜಿಕ ನಾಟಕ
ಸಂಜೆ 6 ರಿಂದ	:	ಬೆಂಗಳೂರಿನ ಶಿರಿಕಲಾ ಮೇಳದಿಂದ ಯಕ್ಷಗಾನ

ಕಿರು ರಂಗಮಂದಿರ, ಕಲಾಮಂದಿರ

ಮ. 2 ರಿಂದ	:	ಹನುಮಂತ ಕುಮಾರ್ ಬೋರಗಿ, ರಾಯಚೂರು ಅವರಿಂದ ವಚನ ಗಾಯನ
ಮ. 3 ರಿಂದ	:	ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘದಿಂದ ಸ್ಮಶಾನ ಕುರುಕ್ಷೇತ್ರ
ರಾ. 7 ರಿಂದ	:	ಬೆಂಗಳೂರಿನ ದೃಶ್ಯ ಕಲಾ ತಂಡದಿಂದ ದ್ರಾಕ್ಷಾಯಿಣಿ

ಮಹಾರಾಜ ಕಾಲೇಜು ಮೈದಾನ

ಯುವ ದಸರಾ	:	ಉದ್ಘಾಟನೆ : ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಖ್ಯಾತ ನಟ ಡಾ. ಶಿವರಾಜ್‌ಕುಮಾರ್, ಸಂಜೆ 6ಕ್ಕೆ ಅಪ್ಪು ನಮನ–ಗುರುಕಿರಣ್, ವಿಜಯ್ ಪ್ರಕಾಶ್ ಮತ್ತು ಕುನಾಲ್ ಗಾಂಜಾವಾಲ ಅವರಿಂದ ಸಂಗೀತ ಸಂಜೆ

ಅರಮನೆ ಮಾಳ, ಆರ್.ಪಿ. ರಸ್ತೆ, ನಂಜನಗೂಡು

ಸಂಜೆ 5.30 ರಿಂದ	:	ವಿಸ್‌ಡಮ್ ಶಾಲೆಯವರಿಂದ ಯೋಗ ಮತ್ತು ಭರತನಾಟ್ಯ
ಸಂಜೆ 6 ರಿಂದ	:	ಕೇಶಪ್ಪ ಶಿಳ್ಳೆಕ್ಯಾತರ, ಕೊಪ್ಪಳ ಅವರಿಂದ ಬೊಂಬೆ ಪ್ರದರ್ಶನ
ಸಂಜೆ 7 ರಿಂದ	:	ರಾಮುಲು ವಿ. ಗದಗಿ ಅವರಿಂದ ಶಾಸ್ತ್ರೀಯ ಸಂಗೀತ
ರಾ. 8 ರಿಂದ	:	ಮೈಸೂರಿನ ಇ.ಎಂ. ಮಂಜುಳ ಅವರಿಂದ ಸುಗಮ ಸಂಗೀತ


ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ದಸರಾ ವಿಶೇಷ ಗೀತಾರಾಧನ, 6.35 ನಖ ಶಿಖಾಂತ–ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ –ಡಾ.ಕೇಶವ ಕೊರಸೆ, 6.40 ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜಮಾರ್ಗ–ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ' ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 9.15 'ಹರಿಕೇಶಾಂಗಿ ಮಾತಂಗಿ' ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, ಪ್ರಸ್ತುತಿ– ಮೈಸೂರು ಎಸ್. ರಾಜಲಕ್ಷ್ಮಿ, 10.00 ಶ್ರೀ ಕಮಲಾಂಬ ಜಯಂತಿ–ನವರಾತ್ರಿ ಸಂದರ್ಭದಲ್ಲಿ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಗೀತೆಗಳನ್ನಾಧರಿಸಿದ ವಿಶೇಷ ಸರಣಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ–ಬೆಂಗಳೂರು ಸಹೋದರಿಯರು, ಸಂಗೀತಾ ಕಟ್ಟಿ, 12.45 ಲಾಕ್‌ಡೌನ್ ಕಥಾ ನಾಟಕ–ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್, 1.20 ಜಂಬೂ ಸವಾರಿ–ಮೈಸೂರು ದಸರಾ ಆನೆ ಸ್ಟೋರಿ, ದಸರಾ ಸಂದರ್ಭದಲ್ಲಿ ವಿಶೇಷ ಬಾನುಲಿ ಸರಣಿ, ಪ್ರಸ್ತುತಿ–ಅಬ್ದುಲ್ ರಶೀದ್ ಹಾಗೂ ಡಾ. ಮೈಸೂರು ಉಮೇಶ್, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ–ಮೈಸೂರು ಸಂಸ್ಥಾನದಲ್ಲಿ ಸಂಗೀತ ಮತ್ತು ಲಯ ವಾದ್ಯಗಳ ಪರಂಪರೆ, ನಿರೂಪಣೆ– ಡಾ.ಜ್ಯೋತಿ ಶಂಕರ್, ಪ್ರಸ್ತುತಿ–ಹೆಚ್.ಎಲ್. ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಮನಸ್ವಿನಿ ಮಹಿಳಾ ಸಂಘದ ಸದಸ್ಯರಿಂದ ಕಾರ್ಯಕ್ರಮ ವೈವಿಧ್ಯ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45 ಹಿಂದಿ ಪಾಠ–ಕಿಶೋರ್ ಕಾಕಡೆ, 5.30 ಚಾಮುಂಡಿ ಹಬ್ಬ–ಜನಪದ ನಾಲಗೆಯಲ್ಲಿ ಮೈಸೂರ ದೇವತೆ, ಲೇಖನ ಡಾ– ಪಿ.ಕೆ. ರಾಜಶೇಖರ್, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.50 ಕಿಸಾನ್‌ವಾಣಿ–ಕೃಷಿಯಲ್ಲಿ ತಂತ್ರಜ್ಞಾನದ ಯಶಸ್ವೀ ಅಳವಡಿಕೆ ಕುರಿತು ಜೆ.ಎಂ. ಕುಮಾರ್ ಅವರೊಂದಿಗೆ ಮಾತುಕತೆ, 10.00 ಹಳ್ಳಿಹಾಡು–ನಿಟ್ರೆ ಗ್ರಾಮದ ಮಹದೇವಯ್ಯ ಮತ್ತು ಸಂಗಡಿಗರು

ಶರನ್ನವರಾತ್ರಿ ಕಾರ್ಯಕ್ರಮ



■ **ತ್ರಯೀನ್ಯಾಸ್:** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಶ್ರೀ ಕೂಷ್ಮಾಂಡದೇವಿ, ಶ್ರೀ ವಿದ್ಯಾ ಶಬರಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ ಮತ್ತು ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30 ರಿಂದ ಶ್ರೀ ಮಹಾವಿಷ್ಣು ದಶಾವತಾರಹೋಮ, ಮಹಾ ಧನ್ವಂತರಿ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ :** ಶ್ರೀ ಶಾರದಾಶರನ್ನವರಾತ್ರೋತ್ಸವ, ಶ್ರೀ ರುದ್ರೈಕಾರಶಿನೀ ಹೋಮ, ಕೌಮಾರೀ ಮಯೂರ ವಾಹಿನಿ ಅಲಂಕಾರ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ಕೌಮಾರೀ ಮಯೂರ ವಾಹಿನಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಅಶೋಕ ರಸ್ತೆ, ಸಂಜೆ 6 ಗಂಟೆಯಿಂದ.

■ **ಶ್ರೀ ಶಾರದ ಪ್ರತಿಷ್ಠಾನ ಟ್ರಸ್ಟ್:** ಶರನ್ನವರಾತ್ರಿ ಸಂಗೀತೋತ್ಸವ, ವಿದ್ವಾನ್ ಆರ್.ಕೆ. ಪದ್ಮನಾಭ ಮತ್ತು ತಂಡದಿಂದ ವೀಣಾ ವಾದನ, ಸ್ಥಳ: ಶ್ರೀ ರಾಮ ಮಂದಿರ, ಸಂಜೆ 6 ಗಂಟೆಗೆ.

■ **ಶ್ರೀ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ರೇಣುಕದೇವಿ ಅಲಂಕಾರ, ಸಂಜೆ 7 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದ್ವಾನ್ ಶಿವಶ್ರೀ ಸ್ಕಂದಪ್ರಸಾದ್ ಅವರಿಂದ ಕರ್ನಾಟಕ ಸಂಗೀತ ಗಾಯನ ಮತ್ತು ಭಜನೆ, ಮ. 12ಕ್ಕೆ ಅನ್ನಾರ್ಚನೆ, ದುರ್ಗಿಲಕ್ಷ್ಮೀ ಪೂಜೆ, ಹೋಮ ಪೂರ್ಣಾಹುತಿ, ಮ. 3.30ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಶ್ರೀ ಗಾಯತ್ರಿ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 8 ಗಂಟೆಗೆ.

■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ಸಾಂಸ್ಕೃತಿಕ ಕಾರ್ಯಕ್ರಮ, ಕುಮಾರಿ ವಿ. ನಾಗಶ್ರೀ ವೆಂಕಟಕೃಷ್ಣ ಅವರಿಂದ ದೇವರನಾಮ, ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.


■ **ರಂಗಾಯಣ:** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ರಂಗೋತ್ಸವ–2022, ಬೆಂಗಳೂರಿನ ಕೈವಲ್ಯ ಕಲಾಕೇಂದ್ರದಿಂದ ಮಾಧವಿ ನಾಟಕ ಪ್ರದರ್ಶನ, ರಚನೆ : ಸುಧಾ ಆಡುಕಳ, ನಿರ್ದೇಶನ : ಶ್ರೀಪಾದ ಭಟ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ವಿದ್ವಾನ್ ಬೇ.ನಾ. ವಿಜಯೇಂದ್ರಚಾರ್ಯರಿಂದ ಶ್ರೀ ರಾಘವೇಂದ್ರ ವಿಜಯ ಕುರಿತು ಪ್ರವಚನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಮೈಸೂರು ಗುಜರಾತಿ ಸಮಾಜ :** ನವರಾತ್ರಿ ಉತ್ಸವ, ಸ್ಥಳ: ಸಮಾಜದ ಭವನ, ಯಾದವಗಿರಿ, ಸಂಜೆ 7.30 ರಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಪ್ರತಿನಿತ್ಯ ಬೆಳಗ್ಗೆ 10 ರಿಂದ ಹೋಮ, ಮ. 1 ಗಂಟೆಗೆ ಪ್ರಸಾದ ವಿನಿಯೋಗ, ಶ್ರೀ ಆದಿತ್ಯಾದಿ ನವಗ್ರಹ ಹೋಮ, ಸ್ಥಳ: ರಾಮಮಂದಿರ, ಜಯನಗರ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ಶರನ್ನವರಾತ್ರಿ ಮಹೋತ್ಸವ, ಹೂವುಗಳಿಂದ ಅಲಂಕಾರ, ಪ್ರತಿಪದ ಭಜನಾ ಮಂಡಳಿ ಶ್ರೀರಾಂಪುರ ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ.



ಮೈಸೂರು ದಸರಾ ಮಹೋತ್ಸವ - 2022



ಮೈಸೂರು ಅರಮನೆ ಆವರಣದಲ್ಲಿ ಮೇಳೈಸಿದ

ಜಾನಪದ, ಶಾಸ್ತ್ರೀಯ ಸಂಗೀತ, ನೃತ್ಯರೂಪಕ

ಬೆಳಕಿನ ಸೊಬಗಿನಲ್ಲಿ ಸಂಗೀತ ಸವಿದ ಕಲಾ ಪ್ರೇಮಿಗಳು



ಭಕ್ತಿಗೀತೆಗಳ ಮೂಲಕ ಹೃನ್ಮನ ತಣಿಸಿದ ಚಿಲ್ಕುಂದ ಸಹೋದರಿಯರಾದ ಇಂದೂ ಹಾಗೂ ಲಕ್ಷ್ಮೀ.



ಲಯಾಭಿನಯ ಕಲ್ಚರಲ್ ಫೌಂಡೇಷನ್ ತಂಡದ ಆಕರ್ಷಕ ಲಲಿತಾರ್ಣವ ನೃತ್ಯರೂಪಕ.

ಮೈಸೂರು, ಸೆ.27(ಎಸ್‌ಬಿಡಿ)– ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಧಾನ ವೇದಿಕೆಯಲ್ಲಿ ಮಂಗಳವಾರ ಜಾನಪದ, ಶಾಸ್ತ್ರೀಯ ಸಂಗೀತ, ನೃತ್ಯರೂಪಕದ ಸಮ್ಮಿಳಿತ, ಕಲಾಪ್ರೇಮಿಗಳ ಹೃನ್ಮನ ತಣಿಸಿತು.

ವಿದ್ಯುತ್ ದೀಪಾಲಂಕಾರದ ಹೊಂಬೆಳಕಲ್ಲಿ ಕಂಗೊಳಿಸುತ್ತಿದ್ದ ಅಂಬಾವಿಲಾಸ ಅರಮನೆ ಅಂಗಳದ ಆಕರ್ಷಕ ವೇದಿಕೆಯಲ್ಲಿ ಕಂಸಾಳೆ ಜಾನಪದ ಝೇಂಕಾರ, ಭಕ್ತಿಗೀತೆಗಳ ಸಿಂಚನ, ಶಾಸ್ತ್ರೀಯ ಸಂಗೀತದ ವೈಭವ ಮೇಳೈಸಿತು.

ಮೊದಲಿಗೆ ಕಂಸಾಳೆ ಮಹೇಶ್ ಹಾಗೂ ಸಹ ಕಲಾವಿದರು ಕಂಸಾಳೆ ಸದ್ದಿನೊಂದಿಗೆ ಗ್ರಾಮೀಣ ಸೊಗಡಿನ ಗಾಯನ ಹಾಗೂ ನೃತ್ಯ ಪ್ರದರ್ಶಿಸಿ ಭಕ್ತಿ ಸಂಚಲನ ಉಂಟು ಮಾಡಿದರು. ಅಯ್ಯಾ ಮಲೆಗಳ ನೋಡಯ್ಯ, ಅಯ್ಯಾ ಗಿರಿಗಳ ನೋಡಯ್ಯ...', ತಾಯಿ ಚಾಮುಂಡೇಶ್ವರಿ ಸ್ತುತಿ 'ತಂದನ್ನ ತಾನಾನಾ...', 'ಮಂಗಳ ಮಹಿಮಾ ಲಿಂಗದ ರೂಪು ಸಂಗಮೇಶ್ವರ ಮಹದೇವ...' ಹೀಗೆ ಚಾಮುಂಡೇಶ್ವರಿ ಹಾಗೂ ಮಲೆ ಮಾದೇಶ್ವರರ ಕುರಿತ ಹಲವು ಜಾನಪದ ಗೀತೆಗಳನ್ನು ಪ್ರಸ್ತುತಪಡಿಸಿದರು. ಇದೇ ವೇಳೆ ಬೀಸು ಕಂಸಾಳೆ ನೃತ್ಯವನ್ನೂ ಅಮೋಘವಾಗಿ ಪ್ರಸ್ತುತಪಡಿಸಿದರು. ಮಹದೇಶ್ವರರ ವರ್ಣಿಸುವ 'ವಾಲಿಗವ್ರೋ ನಿಮ್ಮ ವಾಲಿಗವ್ರೋ ಶಿವನ್ ಮಾದೇವನ ವಾಲಿಗವ್ರೋ...' ಹಿನ್ನೆಲೆ ಗೀತೆಗೆ ಕಲಾವಿದ ರಘು ಏಕಾಂಗಿ ಕಂಸಾಳೆ ಪ್ರದರ್ಶಿಸಿದರೆ, ಚೆಂಗಾಳ್ವರ ದೊರೆ ವೀರರಾಜ ಹಾಗೂ ಮೈಸೂರಿನ ದಳವಾಯಿಗೂ ನಡೆದ ಪಿರಿಯಾಪಟ್ಟಣ ಕಾಳಗ ವನ್ನು ತಿಳಿಸುವ ಹಾಡಿಗೆ ಮತ್ತಿಬ್ಬರು ಕಲಾವಿದರು ಕಂಸಾಳೆ ನೃತ್ಯ ಮಾಡಿದರು.

ಸಹೋದರಿಯರ ಸಂಗೀತ: ಶಾಸ್ತ್ರೀಯ, ಸುಗಮ, ಜಾನಪದ ಸಂಗೀತ, ಭಕ್ತಿಗೀತೆ, ಚಿತ್ರಗೀತೆ, ಹೀಗೆ ಎಲ್ಲಾ ಬಗೆಯ ಗಾಯನದಲ್ಲೂ ಸಂಗೀತ ಪ್ರಿಯರ ಮನಗೆದ್ದು, ಚಿಲ್ಕುಂದ ಸಹೋದರಿಯರು ಎಂದೇ ಖ್ಯಾತರಾಗಿರುವ ಮೈಸೂರಿನ ಇಂದೂ ನಾಗರಾಜು ಹಾಗೂ ಲಕ್ಷ್ಮೀ ನಾಗರಾಜು ಸಹೋದರಿಯರು ಅರಮನೆ ವೇದಿಕೆಯಲ್ಲಿ ಭಕ್ತಿ ಸುಧೆ ಹರಿಸಿದರು. ವಿದ್ವಾನ್ ರವಿಶಂಕರ್, ಕೇಶವ್ ದತ್, ಮಂಜುನಾಥ್ ಮತ್ತಿತ ರರ ಪಕ್ಕವಾದ್ಯ ಸಹಕಾರದೊಂದಿಗೆ 'ಶ್ರೀ ಸರಸ್ವತಿ ನಮೋಸ್ತುತೆ ವರ ದೇವತೆಯೇ..', 'ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ...', 'ಬಾರೋ ಕೃಷ್ಣಯ್ಯಾ... ನಿನ್ನ ಭಕ್ತರ ಮನೆಗೆ ಬಾ ಕೃಷ್ಣಯ್ಯಾ...', 'ಶ್ರೀ ಚಾಮುಂಡೇಶ್ವರಿ ಪಾಲಯಮಾ...' ಸೇರಿದಂತೆ ಹಲವು ಭಕ್ತಿಪ್ರಧಾನ ಕೃತಿಗಳನ್ನು ಶಾಸ್ತ್ರೀಯ ಶೈಲಿಯಲ್ಲಿ ಪ್ರಸ್ತುತಪಡಿಸಿ ನೆರೆದಿದ್ದವರ ಮೆಚ್ಚುಗೆ ಪಡೆದರು.

ವಿಶಿಷ್ಟ ನೃತ್ಯ ರೂಪಕ: ಬೆಂಗಳೂರಿನ ಲಯಾಭಿನಯ ಕಲ್ಚರಲ್ ಫೌಂಡೇಷನ್ ತಂಡದ ಕಲಾವಿದರು ಪ್ರಸ್ತುತಪಡಿಸಿದ 'ಲಲಿತಾರ್ಣವ ನೃತ್ಯರೂಪಕ' ವಿಶಿಷ್ಟ ಹಾಗೂ ಅತ್ಯಾಕರ್ಷಕವಾಗಿತ್ತು. 'ಶಿವನ ಮೂರನೇ ಕಣ್ಣಿನ ದೃಷ್ಟಿಯಿಂದ ಮನ್ಮಥ ಸುಟ್ಟು ಭಸ್ಮವಾದಾಗ ಅದರಲ್ಲಿ ಚಿತ್ರಕರ್ಮ ಪುರುಷಾಕೃತಿ ನಿರ್ಮಿಸುತ್ತಾನೆ. ಶಿವನ ದೃಷ್ಟಿ ಬಿದ್ದಾಗ ಆ ಆಕೃತಿಗೆ ಜೀವ ಪಡೆಯುತ್ತದೆ. ನಂತರ ಚಿತ್ರಕರ್ಮನಿಂದ ಶತರುದ್ರ ಮಂತ್ರಾನುಷ್ಠಾನದ ಉಪದೇಶ ಪಡೆದು, ರುದ್ರನನ್ನು ಪೂಜಿಸಿ ಅರವತ್ತು ಸಾವಿರ ವರ್ಷಗಳವರೆಗೆ ಚಕ್ರವರ್ತಿಯಾಗುವಂತೆ ವರ ಪಡೆದು 'ಭಂಡ' ಎಂದು ಪ್ರಸಿದ್ಧನಾಗುತ್ತಾನೆ. ಶೋಣಿತಪುರವನ್ನು ಆಳುತ್ತಿದ್ದ ಭಂಡ, ದೇವತೆಗಳಿಗೆ ಉಪಟಳ ನೀಡುತ್ತಿರುತ್ತಾನೆ. ಸಹಿಸಿಕೊಳ್ಳಲಾಗದೆ ದೇವತೆಗಳು ಹಿಮಗಿರಿಯ ತಪ್ಪಲಲ್ಲಿ ನಡೆಸಿದ ಯಜ್ಞ ಕುಂಡದಿಂದ ಅವತರಿಸಿದ 'ಶ್ರೀ ಲಲಿತಾಂಬೆ' ಭಂಡಾಸುರನ ಸಂಹರಿಸುತ್ತಾಳೆ.' ಈ ಕಥಾಹಂದರವನ್ನು 'ಲಲಿತಾರ್ಣವ ನೃತ್ಯರೂಪಕ'ದ ಮೂಲಕ ಕಲಾವಿದರು ಕಣ್ಣಿಗೆ ಕಟ್ಟಿದರು.

ಕರೆದರೆ ಬರಬಾರದೆ: ಚೆನ್ನೈನ ವಿದ್ವಾನ್ ಸಂದೀಪ್ ನಾರಾಯಣ್ ಕರ್ನಾಟಕ ಶಾಸ್ತ್ರೀಯ ಸಂಗೀತದ ರಸದೌತಣ ಉಣಬಡಿಸಿದರು. 'ಶರಣೆಂಬೆ ವಾಣಿ ಪೊರೆಯೇ ಕಲ್ಯಾಣಿ...' ಪುರಂದರದಾಸರ ರಚನೆಯ 'ತಂಬೂರಿ ಮೀಟಿದವ ಭವಾಬ್ಧಿ ದಾಟಿದವ...', 'ಕರೆದರೆ ಬರಬಾರದೆ ಗುರುವೇ...', 'ಪಾರ್ವತಿಯೇ... ದೇವಿಯೇ...', ಹೀಗೆ ಹಲವು ಕೃತಿಗಳನ್ನು ಭಾವಪ್ರಧಾನವಾಗಿ ಪ್ರಸ್ತುತಪಡಿಸಿದರು. ಪಕ್ಕವಾದ್ಯ ಕಲಾವಿದರು ಸಂದೀಪ್ ನಾರಾಯಣ್ ಗಾಯನಕ್ಕೆ ಉತ್ತಮ ಸಾಥ್ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸೇರಿ ಹಲವು ಗಣ್ಯರು ಹಾಗೂ ಸಾವಿರಾರು ಪ್ರೇಕ್ಷಕರು ಸಂಗೀತ ಲೋಕದಲ್ಲಿ ವಿಹರಿಸಿದರು.

ರಸ್ತೆ ಸಾರಿಗೆ ಸಂಸ್ಥೆಯ ವಿಶೇಷ ಪ್ಯಾಕೇಜ್ ಪ್ರವಾಸ



ಮೈಸೂರು, ಸೆ.27– ಈ ಸಾಲಿನ ದಸರಾ ಮಹೋತ್ಸವದ ಅಂಗವಾಗಿ ರಾಜ್ಯ ಹಾಗೂ ದೇಶದ ವಿವಿಧ ಕಡೆಗಳಿಂದ ದಸರಾ ವೀಕ್ಷಣೆಗೆ ಮೈಸೂರು ನಗರಕ್ಕೆ ಬರುವ ಪ್ರವಾಸಿಗರ ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, ರಾಜಹಂಸ, ಐರಾವತ, ಐರಾವತ ಕ್ಲಬ್ ಕ್ಲಾಸ್ (ಮಲ್ಟಿ ಆಕ್ಸಲ್) ಹಾಗೂ ಅಂಬಾರಿ ಕ್ಲಬ್ ಕ್ಲಾಸ್ ಸಾರಿಗೆ ಸೇವೆಗಳ ಜೊತೆಗೆ ವಿಶೇಷ ಪ್ಯಾಕೇಜ್ ಸಾರಿಗೆ ಸೇವೆಗಳ ಸೌಲಭ್ಯವನ್ನು ಒದಗಿಸುತ್ತಿದೆ.

ಮೈಸೂರಿಗೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಕರ್ನಾಟಕ ಸಾರಿಗೆ ವಾಹನಗಳಿಂದ ಒಂದು ದಿನದ ವಿಶೇಷ ಪ್ರವಾಸದ ವ್ಯವಸ್ಥೆ ಮಾಡಲಾಗಿದೆ.

ಗಿರಿದರ್ಶಿನಿ: ಬಂಡೀಪುರ, ಗೋಪಾಲಸ್ವಾಮಿ ಬೆಟ್ಟ, ಬಿಳಗಿರಿರಂಗನ ಬೆಟ್ಟ, ನಂಜನಗೂಡು ಮತ್ತು ಚಾಮುಂಡಿ ಬೆಟ್ಟ (ಪ್ರಯಾಣ ದರ ವಯಸ್ಕರಿಗೆ: ರೂ.400/– ಮತ್ತು ಮಕ್ಕಳಗೆ: ರೂ.250/–)

ಜಲದರ್ಶಿನಿ: ಗೋಲ್ಡನ್ ಟೆಂಪಲ್ (ಬೈಲಕುಪ್ಪೆ), ದುಬಾರೆ ಅರಣ್ಯ ನಿಸರ್ಗಧಾಮ, ರಾಜಾಸೀಟ್, ಹಾರಂಗಿ ಜಲಾಶಯ ಮತ್ತು ಕೆ.ಆರ್.ಎಸ್. (ಪ್ರಯಾಣ ದರ ವಯಸ್ಥರಿಗೆ: ರೂ.450/– ಮತ್ತು ಮಕ್ಕಳಗೆ: ರೂ.250/–)

ದೇವದರ್ಶಿನಿ: ನಂಜನಗೂಡು, ಆಘ್, ಮುಡುಕುತೊರೆ, ತಲಕಾಡು, ಸೋಮನಾಥಪುರ, ಶ್ರೀರಂಗಪಟ್ಟಣ (ಪ್ರಯಾಣ ದರ ವಯಸ್ಕರಿಗೆ: 300 ರೂ. ಮತ್ತು ಮಕ್ಕಳಿಗೆ: 175 ರೂ.)

ಮೈಸೂರು ನಗರ ದೀಪಾಲಂಕಾರ ದರ್ಶನ: ನಗರ ಬಸ್ ನಿಲ್ದಾಣದಿಂದ ಅರಮನೆ ರಸ್ತೆ, ಮೈಸೂರು ಕೇಂದ್ರೀಯ ಬಸ್ ನಿಲ್ದಾಣ ರಸ್ತೆ, ಎಲ್.ಐ.ಸಿ ವೃತ್ತ ಬಂಬೂ ಬಜಾರ್ ರಸ್ತೆ, ರೈಲ್ವೆ ನಿಲ್ದಾಣ ವೃತ್ತ, ಜೆ.ಎಲ್.ಬಿ ರಸ್ತೆ(ಮೂಡ ಕಛೇರಿ ರಸ್ತೆ) ಮತ್ತು ನಗರ ಬಸ್ ನಿಲ್ದಾಣ (ಪ್ರಯಾಣ ದರ ವಯಸ್ಕರಿಗೆ: 200 ರೂ. ಮತ್ತು ಮಕ್ಕಳಗೆ: 150 ರೂ.) ನಗರ ವೋಲ್ವೋ ವಾಹನಗಳಿಂದ–ಸಂಜೆ 6.00 ಕ್ಕೆ ನಿರ್ಗಮನ

ಮೈಸೂರು ದರ್ಶಿನಿ: ನಗರ ವೋಲ್ವೋ ವಾಹನಗಳಿಂದ ನಂಜನಗೂಡು, ಚಾಮುಂಡಿಬೆಟ್ಟ, ಮೃಗಾಲಯ, ಅರಮನೆ, ಶ್ರೀರಂಗಪಟ್ಟಣ, ಕೆ.ಆರ್.ಎಸ್ (ಪ್ರಯಾಣ ದರ ವಯಸ್ಕರಿಗೆ: 400 ರೂ. ಮತ್ತು ಮಕ್ಕಳಿಗೆ: 200 ರೂ.)

ಇದಲ್ಲದೆ ಮೈಸೂರಿಗೆ ಬರುವ ಪ್ರವಾಸಿಗರಿಗೆ ಐರಾವತ ಕ್ಲಬ್ ಕ್ಲಾಸ್ ವಾಹನಗಳಲ್ಲಿ ಒಂದು ದಿನದ ವಿಶೇಷ ಪ್ರವಾಸ ಪ್ಯಾಕೇಜ್ ವ್ಯವಸ್ಥೆ ಮಾಡಲಾಗಿದೆ.

ಮಡಿಕೇರಿ ಪ್ಯಾಕೇಜ್: ನಿಸರ್ಗಧಾಮ–ಗೋಲ್ಡನ್ ಟೆಂಪಲ್–ಹಾರಂಗಿ ಜಲಾಶಯ–ರಾಜಾ ಸೀಟ್–ಅಬ್ಬಿಫಾಲ್ಸ್ (ಪ್ರಯಾಣ ದರ ವಯಸ್ಕರಿಗೆ: ರೂ.1200/– ಮತ್ತು ಮಕ್ಕಳಿಗೆ: ರೂ.1000/–)

ಊಟಿ ಪ್ಯಾಕೇಜ್: ಊಟಿ ಬಟಾನಿಕಲ್ ಗಾರ್ಡನ್–ಇಟಾಲಿಯನ್ & ರೋಸ್ ಗಾರ್ಡನ್–ಬೋಟ್ ಹೌಸ್ (ಪ್ರಯಾಣ ದರ ವಯಸ್ಕರಿಗೆ: ರೂ.1600/– ಮತ್ತು **ಮಕ್ಕಳಿಗೆ:** ರೂ.1200/–) ಪ್ಯಾಕೇಜ್ ಸಾರಿಗೆಗಳು(ಮೈಸೂರು ನಗರ ದೀಪಾಲಂಕಾರ ದರ್ಶನ ಹೊರತುಪಡಿಸಿ) ಬೆಳಗ್ಗೆ ಮೈಸೂರಿನಿಂದ ಹೊರಟು ಮೇಲ್ಕಂಡ ವಿವಿಧ ಸ್ಥಳಗಳನ್ನು ಸಂದರ್ಶಿಸಿದ ನಂತರ ಸಾಯಂಕಾಲ ಮೈಸೂರಿಗೆ ವಾಪಸ್ಸಾಗುತ್ತವೆ.

ಈ ಪ್ಯಾಕೇಜುಗಳನ್ನು ಅಕ್ಟೋಬರ್ 1 ರಿಂದ 10 ರವರೆಗೆ ಕಾರ್ಯಾಚರಿಸಲಾಗುವುದು. ಇ–ಟಿಕೆಟ್ ಬುಕಿಂಗ್ ಅನ್ನು www.ksrtc.karnataka.gov.in ವೆಬ್‌ಸೈಟ್ ಮುಖಾಂತರ, ಮೊಬೈಲ್ ಬುಕಿಂಗ್ ಹಾಗೂ ಬುಕಿಂಗ್ ಕೌಂಟರ್‌ಗಳ ಮೂಲಕ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸಬಹುದಾಗಿದೆ ಎಂದು ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆತ್ತವರಿಗೆ ಹೆಗ್ಗಣ ಮುದ್ದು...!

ವಿವಿ ಕ್ರಾಫರ್ಡ್ ಭವನದ ಕಾಟಾಚಾರದ ದೀಪಾಲಂಕಾರಕ್ಕೆ ಕುಲಪತಿಗಳ ಸಮರ್ಥನೆ



ಮೈಸೂರು, ಸೆ.27(ಪಿಎಂ)– ಕಣ್ಣಿಗೆ ರಾಚುವಂತೆ ಮೈಸೂರು ವಿವಿ ಕಾರ್ಯಸೌಧಕ್ಕೆ ಮಾಡಿರುವ ವಿದ್ಯುತ್ ದೀಪಾಲಂಕಾರದ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ಅಸಮಾಧಾನ ವ್ಯಕ್ತವಾದರೂ ವಿವಿ ಆಡಳಿತ, ನಾವು ಮಾಡಿದ್ದೇ ಸರಿ ಎಂಬ ಧೋರಣೆಯೊಂದಿಗೆ 'ಹೆತ್ತವರಿಗೆ ಹೆಗ್ಗಣ ಮುದ್ದು' ಎಂಬ ಗಾದೆಗೆ ಮಾರುಹೋಗಿದೆ.

ವಿವಿ ಕ್ರಾಫರ್ಡ್ ಭವನಕ್ಕೆ (ವಿವಿ ಕಾರ್ಯಸೌಧ) ದೀಪಾಲಂಕಾರ ಮಾಡುವ ಭರದಲ್ಲಿ ನಾನಾ ಬಣ್ಣದ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಇದು ಸದರಿ ಪಾರಂಪರಿಕ ಕಟ್ಟಡಕ್ಕೆ ಪೂರಕವಾಗಿಲ್ಲ ಎಂಬುದು ಪ್ರಜ್ಞಾವಂತ ನಾಗರಿಕರ ಅಭಿಮತ. ಈ ನಾಗರಿಕರ ಕಳಕಳಿಯಂತೆ 'ಮೈಸೂರು ಮಿತ್ರ' 'ಮೈಸೂರು ವಿವಿ ಕಾರ್ಯಸೌಧಕ್ಕೆ ಕಾಟಾಚಾರದ ದೀಪಾಲಂಕಾರ!' ಶೀರ್ಷಿಕೆಯಡಿ ಸುದ್ದಿ (ಸೆ.26ರ ಸಂಚಿಕೆ ಮುಖಪುಟ) ಪ್ರಕಟಿಸಿ ವಿವಿ ಆಡಳಿತದ ಗಮನ ಸೆಳೆದಿತ್ತು.

ಇಷ್ಟಾದರೂ ಬದಲಾವಣೆಗೆ ಕ್ರಮ ವಹಿಸದಿರುವುದು ನೋಡಿದರೆ ಈಗಿರುವುದೇ ಚಂದ, ನಾವು ಮಾಡಿದ್ದೆ ಸರಿ ಎಂಬ ಭ್ರಮೆಯಲ್ಲಿ ಇದ್ದಾರೇನೋ ಅನ್ನಿಸದೇ ಇರದು. ಈ ಸಂಬಂಧ ಮಂಗಳವಾರ ರಾತ್ರಿ ಪ್ರತಿಕ್ರಿಯಿಸಿದ ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ಮೊನ್ನೆ ಎರಡು ಲೈನ್ ವರ್ಕ್ ಆಗುತ್ತಿರಲಿಲ್ಲ. ಈಗ ಅದನ್ನು ಸರಿಪಡಿಸಿದ್ದು, ಆಕರ್ಷಣೀಯವಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಕಳೆದ ವರ್ಷದ ರೀತಿಯಲ್ಲಿಯೇ ಇರುವುದು ಬೇಡ. ಬದಲಾವಣೆ ಜೊತೆಗೆ ಹೆಚ್ಚು ಆಕರ್ಷಣೆ ಆಗಿಯೂ ಕಾಣಲೆಂದು ವರ್ಣರಂಜಿತವಾಗಿ ದೀಪಾಲಂಕಾರ ಮಾಡಲಾಗಿದೆ ಎಂದರು.

ಕಳೆದ ವರ್ಷ ಒಂದೇ ಬಣ್ಣದ (ಹಸಿರು) ಲೈಟ್ ಹಾಕಲಾಗಿತ್ತು. ಈಗಿರುವುದನ್ನು ಬಹುತೇಕರು ಚೆನ್ನಾಗಿದೆ ಎನ್ನುತ್ತಿದ್ದಾರೆ. ಕಳೆದ ಬಾರಿಯ ಲೈಟ್‌ಗಳನ್ನೇ ಹಾಕಿದ್ದೇವೆ. ಬಣ್ಣಗಳು ಹೆಚ್ಚಿವೆ ಅಷ್ಟೇ. ಈಗ ಮತ್ತೆ ಬದಲಾಯಿಸಿ ಕಳೆದ ಬಾರಿಯಂತೆ ಮಾಡಲು ಕಷ್ಟಸಾಧ್ಯ ಎನ್ನಿಸುತ್ತದೆ. ಈಗ ನಾನು ಕಾರ್ಯನಿಮಿತ್ತ ದೆಹಲಿಯಲ್ಲಿದ್ದೇನೆ. ನಾಳೆ ಮೈಸೂರಿಗೆ ಆಗಮಿಸಿದ ಬಳಿಕ ಪರಿಶೀಲಿಸಿ ಸೂಕ್ತ ಕ್ರಮ ವಹಿಸುತ್ತೇನೆ ಎಂದು ಹೇಳಿದರು.

ದಸರಾ ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ ಮೇಯರ್, ಕ್ಷೇತ್ರದ ಶಾಸಕರಿಗೆ ಅವಕಾಶ ನೀಡದೇ ಶಿಷ್ಟಾಚಾರ ಉಲ್ಲಂಘನೆ

ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಬೇಸರ



ಮೈಸೂರು, ಸೆ.27(ಪಿಎಂ)– ರಾಷ್ಟ್ರದ ಪ್ರಥಮ ಪ್ರಜೆ, ಆದಿವಾಸಿ ಸಮುದಾಯದ ಕಣ್ಮಣಿಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಬಾರಿ ದಸರಾ ಉದ್ಘಾಟಿಸಿರುವುದು ಸ್ವಾಗತಾರ್ಹ. ಆದರೆ ಅವರೊಂದಿಗೆ ವೇದಿಕೆ ಹಂಚಿಕೊಳ್ಳಲು ನಗರದ ಪ್ರಥಮ ಪ್ರಜೆ ಮೇಯರ್ ಹಾಗೂ ಕ್ಷೇತ್ರದ ಶಾಸಕರಿಗೆ ಅವಕಾಶ ನೀಡಬೇಕಿತ್ತು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಅಭಿಪ್ರಾಯಪಟ್ಟಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಂತಹ ಗಣ್ಯರು ವೇದಿಕೆಯಲ್ಲಿರುವಾಗ ಸ್ಥಳೀಯ ಆಡಳಿತ ವ್ಯವಸ್ಥೆಯ ಶಿಷ್ಟಾಚಾರ ಪಾಲಿಸುವುದು ರಾಜ್ಯ ಸರ್ಕಾರದ ಕರ್ತವ್ಯ. ರಾಷ್ಟ್ರಕ್ಕೆ ರಾಷ್ಟ್ರಪತಿ ಪ್ರಥಮ ಪ್ರಜೆ ಹೇಗೋ ಅದೇ ರೀತಿ ಮೈಸೂರು ನಗರಕ್ಕೆ 'ಮೇಯರ್' ಕೂಡ ಪ್ರಥಮ ಪ್ರಜೆ ಹಾಗೂ ಸ್ಥಳೀಯ ಶಾಸಕರೂ ಮುಖ್ಯ. ಇಂತಹ ಪ್ರಾಮುಖ್ಯತೆ ಅರಿಯುವಲ್ಲಿ ಜಿಲ್ಲಾಡಳಿತ, ರಾಜ್ಯ ಸರ್ಕಾರ ವಿಫಲವಾಗಿದ್ದು, ಭದ್ರತೆ ಕಲ್ಪಿಸುವ ಭರದಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆಯ ಶಿಷ್ಟಾಚಾರ ಮರೆಯಬಾರದಿತ್ತು.

ಈ ಬಾರಿ ರಾಷ್ಟ್ರದ ಪ್ರಥಮ ಪ್ರಜೆಯಾದ ದ್ರೌಪದಿ ಮುರ್ಮು ನಾಡಹಬ್ಬವನ್ನು ಉದ್ಘಾಟಿಸಿ ಮೈಸೂರಿಗೆ ಕೀರ್ತಿ ತಂದಿದ್ದಾರೆ. ದಸರಾ ಉದ್ಘಾಟಕರನ್ನು ಆಯ್ಕೆ ಮಾಡುವಾಗ ಆಯಾಯ ಸರ್ಕಾರಗಳು ಬುದ್ಧಿವಂತಿಕೆಯಿಂದಲೇ ಮುಂದುವರೆಯುತ್ತವೆ. ಈಗಿನ ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿ ರಾಷ್ಟ್ರದ ಪ್ರಥಮ ಪ್ರಜೆಯಿಂದಲೇ ದಸರಾಗೆ ಚಾಲನೆ ಕೊಡಿಸಿದೆ. ಶಿಷ್ಟಾಚಾರದಂತೇ ಹೇಳುವುದಾದರೆ ದಸರಾ ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ ಮೈಸೂರಿನ ಮೇಯರ್ ಶಿವಕುಮಾರ್ ಅವರಿಗೆ ಸ್ಥಾನ ಕಲ್ಪಿಸಿ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರಿಗೆ ಅಧ್ಯಕ್ಷತೆ ಸ್ಥಾನ ಕಲ್ಪಿಸಬೇಕಿತ್ತು. ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಹಾಗೂ ಸ್ಥಳೀಯ ಶಾಸಕರು, ಎಂಎಲ್ಸಿಗಳಿಗಾದರೂ ವೇದಿಕೆಯಲ್ಲಿ ಆಸನ ವ್ಯವಸ್ಥೆ ಮಾಡಬೇಕಿತ್ತು. 9 ದಿನಗಳ ನಾಡಹಬ್ಬ ಈಗಷ್ಟೇ ಆರಂಭ ವಾಗಿದೆ. ಇನ್ನೂ ದಿನಗಳು ಬಾಕಿ ಇರುವ ಹಬ್ಬದ ದಿನಗಳಂದು, ನಡೆಯುವ ಕಾರ್ಯಕ್ರಮಗಳಲ್ಲಿ ಸ್ಥಳೀಯ ಜನಪ್ರತಿನಿಧಿಗಳಿಗೆ ಅವಮಾನವಾಗದಂತೆ ಜಿಲ್ಲಾಡಳಿತ ಶಿಷ್ಟಾಚಾರ ಪಾಲಿಸಬೇಕು. ತಪ್ಪಿದ್ದಲ್ಲಿ ಪ್ರಜ್ಞಾವಂತ ನಾಗರಿಕರೇ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.



ಮೈಸೂರು ದಸರಾ ಹಿನ್ನೆಲೆಯಲ್ಲಿ ಗಜಪಡೆಯ ಜೊತೆ ಆಗಮಿಸಿರುವ ಮಾವುತರು, ಕಾವಾಡಿಗಳ ಕುಟುಂಬದ ಮಹಿಳೆಯರಿಗೆ ಸೀರೆ, ಅರಿಸಿನ, ಕುಂಕುಮ ಹಾಗೂ ಮಕ್ಕಳಿಗೆ ಸಮಾಜ ಸೇವಕಿಯರಾದ ಶ್ರೀಮತಿ ಶಶಿಕಲಾ ಸುರೇಂದರ್, ಡಾ.ರೇಖಾ ಮತ್ತು ಗಿರಿಜಾಂಬ.ಸ್ಲೇಟ್, ಪುಸ್ತಕ, ಲೇಖನಿ ಸಾಮಗ್ರಿಗಳನ್ನು ನೀಡಿದರು.

ಇಂದು ನೌಕಪಡೆಯಿಂದ ಸಂಗೀತ ಸಂಜೆ

ಮೈಸೂರು, ಸೆ.27– ಮೈಸೂರು ಅರಮನೆ ಮಂಡಳಿ ವತಿಯಿಂದ ನಾಡಹಬ್ಬ



ಮೈಸೂರು ದಸರಾ–2022ರ ಮಹೋತ್ಸವದ ಪ್ರಯುಕ್ತ ಅರಮನೆ ಮುಂಭಾಗದ ವೇದಿಕೆಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಸೆ.28 ರಂದು ಸಂಜೆ 4 ರಿಂದ 5.30 ಗಂಟೆವರೆಗೆ ಸಂಗೀತ ಕಾರ್ಯಕ್ರಮವನ್ನು Air Warriors Symphony Orchestra team under the aegis of Training Command HQ and Air Force Station Jalahalli, Bengaluru ರವರು ಸಂಗೀತ ಕಾರ್ಯಕ್ರಮವನ್ನು ನಡೆಸಲಿದ್ದಾರೆ ಎಂದು ಮೈಸೂರು ಅರಮನೆ ಮಂಡಳಿಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಳೇ ಕಟ್ಟಡಗಳ ಮೇಲೆ ನಿಂತು ದಸರಾ ಮೆರವಣಿಗೆ ವೀಕ್ಷಣೆಗೆ ನಿರ್ಬಂಧ

ಮೈಸೂರು, ಸೆ.27– ಅಕ್ಟೋಬರ್ 5 ರಂದು ನಡೆಯಲಿರುವ ದಸರಾ ಮೆರವಣಿಗೆ (ಜಂಬೂಸವಾರಿ) ವೀಕ್ಷಣೆಗೆ ಸ್ಥಳೀಯ, ದೇಶ, ವಿದೇಶಗಳಿಂದ ಜನರು ಆಗಮಿಸುವ ಕಾರಣ ಅತಿಯಾದ ಜನ ದಟ್ಟಣೆಯನ್ನು ನಿರೀಕ್ಷಿಸಲಾಗಿದೆ.



ಈ ವೇಳೆಯಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿ ಜನರು ದಸರಾ ಮೆರವಣಿಗೆಯನ್ನು ವೀಕ್ಷಿಸಲು ಎರಡು ಬದಿಯಲ್ಲಿ ಇರುವ ಹಳೆಯ ಶಿಥಿಲ ಕಟ್ಟಡಗಳ ಮೇಲೆ, ಅಗತ್ಯಕ್ಕಿಂತ ಹೆಚ್ಚು ಜನರು ನಿಂತು, ಜನದಟ್ಟಣೆ ಹೆಚ್ಚಾಗಿ ಅನಾಹುತಗಳಾಗದಿರುವುದನ್ನು ತಡೆಯಲು ಮತ್ತು ಜನರ ಸುರಕ್ಷತೆಯ ಹಿನ್ನೆಲೆಯಲ್ಲಿ ಕರ್ನಾಟಕ ಮುನ್ಸಿಪಲ್ ಕಾಯ್ದೆ 1986 ಅನುಚ್ಛೇದ 322(1) ಅನ್ವಯ ಹಳೆಯ ಕಟ್ಟಡಗಳ ಮೇಲೆ ನಿಂತು ದಸರಾ ಮೆರವಣಿಗೆ ವೀಕ್ಷಣೆ ಮಾಡುವುದನ್ನು ನಿರ್ಬಂಧಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಹ್ವಾನಿಸಿದರೆ ದಸರಾಗೆ ಕನ್ನಡ ಚಲನಚಿತ್ರ ಕಲಾವಿದರು ಬಂದೇ ಬರುತ್ತಾರೆ

ರಾಜ್ಯ ಸಭಾ ಸದಸ್ಯರೂ ಆದ ಚಲನಚಿತ್ರ ನಟ ಜಗ್ಗೇಶ್ ಸಮರ್ಥನೆ

ಮೈಸೂರು,ಸೆ.27(ಜಿಎ)–ದಸರಾ ಮಹೋತ್ಸವಕ್ಕೆ ಯಾವ ಚಲನಚಿತ್ರ ಕಲಾವಿದರನ್ನು ಆಹ್ವಾನಿಸಿದರೆ ಬರುತ್ತಾರೆ. ಆದರೆ, ಅವರನ್ನು ಆಹ್ವಾನಿಸಬೇಕು ಅಷ್ಟೇ. ಕಲಾವಿದರು ಬಂದಿಲ್ಲ ಎಂದರೆ ದಸರಾ ವಿಫಲ ಎಂದು ಭಾವಿಸಬಾರದು ಎಂದು ನಟ ಹಾಗೂ ರಾಜ್ಯಸಭಾ ಸದಸ್ಯ ಜಗ್ಗೇಶ್ ಹೇಳಿದರು.

'ತೋತಾಪುರಿ' ಚಿತ್ರದ ಪ್ರಚಾರಕ್ಕಾಗಿ ಬೆಂಗಳೂರಿನ ಯಶವಂತಪುರದಿಂದ ಮೈಸೂರಿಗೆ ರೈಲಿನಲ್ಲಿ ಆಗಮಿಸಿದ ಅವರು ರೈಲ್ವೆ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದರು. ಮೈಸೂರಿನಲ್ಲಿ ನನ್ನ ಚಿತ್ರಗಳಿಗೆ ಉತ್ತಮ ಪ್ರತಿಕ್ರಿಯೆ ಜೊತೆಗೆ ಗಳಿಕೆಯನ್ನು ತಂದು ಕೊಟ್ಟಿದೆ. ಕಳೆದ ಎರಡು ವರ್ಷಗಳ ಹಿಂದೆ 'ಕಾಳಿದಾಸ ಕನ್ನಡ ಮೇಷ್ಟ್ರು', '8ಎಂಎಂ' ಮತ್ತು 'ಪ್ರೀಮಿಯರ್ ಪದ್ಮಿನಿ' ಚಿತ್ರಗಳು ಯಶಸ್ಸು ಕಂಡಿದ್ದವು. ಕೊರೊನಾ ನಂತರ ಯಾವುದೇ ಚಿತ್ರ ಬಿಡುಗಡೆಯಾಗಿಲ್ಲ. ನಗುವಿಗೆ ಬರವಿರುವ ಕಾಲದಲ್ಲಿ ನಗಿಸಲು 'ತೋತಾಪುರಿ' ಚಿತ್ರ ಸೆ.30ರಂದು ಬಿಡುಗಡೆಯಾಗಲಿದೆ ಎಂದರು.

ಸಾಮಾನ್ಯವಾಗಿ ಚಿತ್ರದ ಪ್ರಚಾರ ಎಂದರೆ, ಸೀಮಿತ ಮಟ್ಟದಲ್ಲಿ ಪ್ರಚಾರ ಮಾಡುವುದಾಗಿತ್ತು. ಆದರೆ, ನಮ್ಮ ನಿರ್ಮಾಪಕರ ಐಡಿಯಾದಿಂದ ಇದೇ ಮೊಟ್ಟ ಮೊದಲ ಬಾರಿಗೆ ಸಂಪೂರ್ಣ ಒಂದು ರೈಲಿನ ಎಲ್ಲಾ ಬೋಗಿಗಳಿಗೂ ಚಿತ್ರದ ಪೋಸ್ಟರ್‌ಗಳನ್ನು ಅಂಟಿಸಿ ವಿಭಿನ್ನವಾಗಿ ಪ್ರಚಾರ ಆರಂಭಿಸಲಾಗಿದೆ. ನಾನು ಕಳೆದ 22 ವರ್ಷಗಳಿಂದ ರೈಲಿನಲ್ಲಿ ಪ್ರಯಾಣ ಮಾಡಿರಲಿಲ್ಲ. ಇದು ನನಗೆ ವಿಶೇಷ ಅನುಭವ ನೀಡಿದ್ದು, ಮುಂದಿನ ದಿನಗಳಲ್ಲಿ ಪ್ರಯಾಣಕ್ಕೆ ರೈಲನ್ನು ಆಯ್ಕೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದರು.

ತೋತಾಪುರಿ ಚಿತ್ರವನ್ನು ಕುಟುಂಬ ಸಮೇತ ನೋಡಬಹುದಾಗಿದ್ದು, ಚಿತ್ರವು ಹಾಸ್ಯದ ಜೊತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡಲಿದೆ. ಹಿಂದೆ 'ನೀರ್‌ದೋಸೆ' ಚಿತ್ರವನ್ನು ನಿರ್ದೇಶನ ಮಾಡಿದ ವಿಜಯ್ ಪ್ರಸಾದ್ ಅವರೇ



ಇದನ್ನು ನಿರ್ದೇಶನ ಮಾಡಿದ್ದಾರೆ, ಚಿತ್ರೀಕರಣ ಪೂರ್ಣಗೊಂಡಿದ್ದು, ಬಿಡುಗಡೆಗೆ ನಿಮ್ಮ ಮುಂದೆ ಬಂದಿದ್ದೇವೆ. ಚಿತ್ರ ಎರಡು ಚಾಪ್ಟರ್‌ಗಳಲ್ಲಿ ತೆರೆಕಾಣಲಿದ್ದು, ಮೊದಲ ಚಾಪ್ಟರ್ ಸೆಪ್ಟೆಂಬರ್ 30ರಂದು ಕರ್ನಾಟಕದಾದ್ಯಂತ ಬಿಡುಗಡೆಯಾಗಲಿದೆ ಎಂದರು.

ದಸರಾ ಹಬ್ಬಕ್ಕೂ ನನಗೂ ಅವಿನಾಭಾವ ಸಂಬಂಧವಿದ್ದು, ಈ ಹಿಂದೆ ಎರಡು ಚಿತ್ರಗಳಿಗೆ ಮಾತ್ರ ದಸರಾದಲ್ಲಿ ಅವಕಾಶ ದೊರೆತ್ತಿತು. ದಸರಾದ ದಿನಗಳು ಸುಂದರವಾದ ದಿನಗಳಾಗಿದ್ದು, ಚಾಮುಂಡಿ ಶಕ್ತಿಯೇ ಅನನ್ಯ ಆಕೆ ಆಶೀರ್ವಾದ ಇದ್ದರೆ, ಎಲ್ಲವೂ ಯಶಸ್ಸಾಗುತ್ತದೆ. ಈ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡಿ ದರ್ಶನ ಮಾಡುತ್ತೇವೆ. ಹಿಂದೂ ಧರ್ಮದ ಪ್ರಕಾರ ಈ 9 ದಿನಗಳು ಬಹಳ ಶ್ರೇಷ್ಠ ಎಂದರು.

ಮೈಸೂರು ದಸರಾ ಮಹೋತ್ಸವಕ್ಕೆ ಚಿತ್ರ ಕಲಾವಿದರು ಹಿಂದೇಟು ಹಾಕುತ್ತಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸರ್ಕಾರಗಳು ಡಾ.ರಾಜ್‌ಕುಮಾರ್ ಅವರು ಇದ್ದಾಗ ಅವರೊಂದಿಗೆ ಚರ್ಚಿಸಿ ದಸರಾ ಮೆರವಣಿಗೆಯಲ್ಲಿ ಭಾಗವಹಿಸುವಂತೆ ಆಹ್ವಾನ ನೀಡುತ್ತಿದ್ದರು. ಅದರಂತೆ ಅಣ್ಣಾವ್ರ ನೇತೃತ್ವದಲ್ಲಿ ನಾವೆಲ್ಲರೂ ಒಟ್ಟಾಗಿ ಮೈಸೂರಿಗೆ ಬಂದು ಪ್ರತ್ಯೇಕ ಒಂದು ವಾಹನದಲ್ಲಿ ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದೇವು, ಜನರಿಗೆ ಅದು ಸಂತಸದ ವಿಚಾರವಾಗಿತ್ತು. ನಾನು ಆ ಮೆರವಣಿಗಳಲ್ಲಿ ಭಾಗವಹಿಸಿದ್ದೇನೆ ಎಂದು ಅಂದಿನ ದಿನವನ್ನು ಮೆಲುಕು ಹಾಕಿದರು. ನನ್ನ ಆತ್ಮೀಯ ಮಿತ್ರರಾದ ಎಸ್.ಟಿ.ಸೋಮಶೇಖರ್ ಮೈಸೂರಿನ ಉಸ್ತುವಾರಿ ಸಚಿವರಾಗಿದ್ದಾರೆ. ಅವರೊಡನೆ ಈಗಾಗಲೇ ಮಾತನಾಡಿದ್ದು, ಈ ಪದ್ಧತಿಯನ್ನು ಮತ್ತೆ ಆರಂಭಿಸಬೇಕು ಎಂಬ ಚರ್ಚೆ ನಡೆದಿದೆ. ಪ್ರತಿಯೊಂದು ಕಾರ್ಯಕ್ರಮಕ್ಕೂ ಆಯೋಜಕರು ಇರುತ್ತಾರೆ. ಅವುಗಳಿಗೆ ಪ್ರತ್ಯೇಕ ಸಮಿತಿಗಳು ಸಹ ಇರಲಿವೆ. ಕಲಾವಿದರನ್ನು ಆಹ್ವಾನ ಮಾಡಿದರೆ ಎಲ್ಲರೂ ಬರುತ್ತಾರೆ, ಯಾರು ಹಿಂದೇಟು ಹಾಕುವುದಿಲ್ಲ ಎಂದು ಸಮರ್ಥಿಸಿಕೊಂಡರು. ನಟಿ ಅದಿತಿ ಪ್ರಭುದೇವ, ನಿರ್ದೇಶಕ ವಿಜಯ್ ಪ್ರಸಾದ್, ನಿರ್ಮಾಪಕ ಕೆ. ಸುರೇಶ್ ಈ ವೇಳೆ ಇದ್ದರು.

ನಕ್ಕರೆ ಅದೇ ಸ್ವರ್ಗ

ಗುರುಗಳು : ಸುಮ್ಮನೆ ಕುಳಿತರೆ ಯಾವ ಕೆಲಸವೂ ಆಗುವುದಿಲ್ಲ ಕಣಯ್ಯಾ

ವಿದ್ಯಾರ್ಥಿ : ಯಾಕೆ ಆಗೋಲ್ಲ ಸಾರ್. ಮೊಟ್ಟೆಯ ಮೇಲೆ ಕೋಳಿ ಸುಮ್ಮನೆ ಕುಳಿತಿರುತ್ತೆ. ಅವು ಮರಿಯಾಗಿ ಬಿಡುತ್ತವೆಯಲ್ಲಾ!

ಮೈಸೂರು ಮಿತ್ರ

ಬುಧವಾರ, 28 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸಮಸ್ಯೆಗಳೇ ಮಹತ್ವದ ಸಾಧನೆಗಳನ್ನು, ಮಹತ್ತರ ವಿಷಯಗಳನ್ನು ತಂದು ಕೊಡುತ್ತದೆ. – ಜಾನ್ ಕೆನಡಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ರಾಮ ಅನ್ನೋ ಕಾಲದಲ್ಲಿ ರಾವಣ ಬುದ್ಧಿ

ನಿಮ್ಮ ಪತ್ರಗಳು

ಜೆ.ಪಿ.ನಗರ–ಗೆಜ್ಜಗಳ್ಳಿ ರಸ್ತೆಯ ದುರವಸ್ಥೆ



ಮಾನ್ಯರೆ,

ಮೈಸೂರಿನ ಜೆ.ಪಿ. ನಗರದ ರಿಂಗ್ ರಸ್ತೆಯಿಂದ ಗೆಜ್ಜಗಳ್ಳಿಗೆ ಸಂಪರ್ಕಿಸುವ ರಸ್ತೆಯು ಬಹಳ ಹದಗೆಟ್ಟಿದ್ದು, ರಿಂಗ್ ರಸ್ತೆಯಿಂದ ಗೆಜ್ಜಗಳ್ಳಿಯ ಕಡೆಗೆ ಹೋಗುವ ಎಲ್ಲಾ ವಾಹನ ಸವಾರರು, ಮುಖ್ಯವಾಗಿ ಶಾಲಾ ಕಾಲೇಜಿಗೆ ತೆರಳಲು ಮಕ್ಕಳಿಗೆ ನಗರ ಸಾರಿಗೆ ಬಸ್ಸುಗಳು ಸಂಚರಿಸಲು ತುಂಬಾ ತೊಂದರೆಯಾಗಿದೆ. ಇನ್ನು ರಾತ್ರಿ ವೇಳೆಯಲ್ಲಿ ಈ ರಸ್ತೆಯಲ್ಲಿ ಓಡಾಟ ಆ ದೇವರಿಗೆ ಪ್ರೀತಿ. ಈ ರಸ್ತೆಯನ್ನು ರಿಪೇರಿ ಮಾಡಲು ಕಳೆದ ಜುಲೈ ತಿಂಗಳಲ್ಲಿ ಭೂಮಿಪೂಜೆ ನೆರವೇರಿಸಲಾಗಿದ್ದು, ಎರಡು ತಿಂಗಳಾದರೂ ಈ ರಸ್ತೆಗೆ ರಿಪೇರಿ ಭಾಗ್ಯವಂತೂ ಇನ್ನೂ ಬಂದಿಲ್ಲ. ಯಾರೋ ಪುಣ್ಯಾತ್ಮರು ಈ ರಸ್ತೆಯ ಮಧ್ಯದಲ್ಲೇ ಒಳಚರಂಡಿ ಪೈಪ್ ಅಳವಡಿಸಲು ಗುಂಡಿ ತೋಡಿ ಅದನ್ನು ಸರಿಯಾಗಿ ಮುಚ್ಚಿಸಿಲ್ಲ. ಅದು ದೊಡ್ಡ ಹಳ್ಳವೇ ಆಗಿದೆ. ಭಾರೀ ವಾಹನಗಳು ಸಂಚರಿಸಲು ತೊಂದರೆಯಾಗಿದೆ. ಒಟ್ಟಿನಲ್ಲಿ ಈ ರಸ್ತೆಯಲ್ಲಿ ಯಾರಾದರೂ ಬಿದ್ದು ಕೈಯೋ, ಕಾಲೋ ಅಥವಾ ಸೊಂಟವೋ ಮುರಿದರೆ ತಾಯಿ ಚಾಮುಂಡೇಶ್ವರಿಯೇ ಗತಿ.

ಇನ್ನೊಂದು ಸಂಗತಿಯೆಂದರೆ ಗೆಜ್ಜಗಳ್ಳಿಯವರು ಈ ಹಿಂದೆ ರಾಜರ ಅರಮನೆಯಲ್ಲಿ ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆ ಮಾಡುತ್ತಿದ್ದರು. ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆ ಮಾಡುತ್ತಿದ್ದವರ ಊರಿನ ಜನಕ್ಕೆ ಈ ಭಾಗದಲ್ಲಿ ಜೆ.ಪಿ.ನಗರಕ್ಕೆ ಬಂದು ಹೋಗಲು ಒಳ್ಳೆಯ ರಸ್ತೆಯೇ ಇಲ್ಲವೆಂದರೆ, ಆ ಆದಿಶಕ್ತಿ ಚಾಮುಂಡೇಶ್ವರಿಯೇ ಈ ರಸ್ತೆಯ ರಿಪೇರಿಗೆ ಸಂಬಂಧಪಟ್ಟವರಿಗೆ ಒಳ್ಳೆಯ ಬುದ್ಧಿ ಕೊಡಲಿ ಎಂದು ಪ್ರಾರ್ಥಿಸುವೆ.

– ಆರ್. ಮಂಜುನಾಥ, ಗೆಜ್ಜಗಳ್ಳಿ

ಮಾರ್ಗಸೂಚಿ ಫಲಕ ಸರಿಪಡಿಸಿ



ಮಾನ್ಯರೆ,

ಮೈಸೂರು ನಗರದ ಜೆ.ಪಿ.ನಗರದ 7ನೇ ತಿರುವು, 17ನೇ ಮುಖ್ಯ ರಸ್ತೆ, 'ಇ' ಬ್ಲಾಕ್, 'ಸಿ' ವಲಯ ಸಾಯಿಬಾಬಾ ದೇವಸ್ಥಾನದ ಹಿಂಭಾಗದ ರಸ್ತೆಯಲ್ಲಿ ಅಳವಡಿಸಿರುವ ಮಾರ್ಗಸೂಚಿ ಫಲಕ ಮುರಿದು ಗಿಡಗಳ ಮಧ್ಯೆ ಬಿದ್ದಿದೆ. ಸಂಬಂಧಪಟ್ಟವರು ಇತ್ತ ಗಮನಹರಿಸಿ ಆದಷ್ಟು ಶೀಘ್ರ ಸದರಿ ಮಾರ್ಗ ಸೂಚಿ ಫಲಕವನ್ನು ಸರಿಪಡಿಸಿ ಸ್ವಸ್ಥಾನದಲ್ಲಿ ಅಳವಡಿಸಬೇಕೆಂದು ಈ ಮೂಲಕ ಮನವಿ.

–ಕೆ.ಎನ್. ಅಶ್ವತ್ಥನಾರಾಯಣ, ಮೈಸೂರು.

'ಸಾರ್ವಜನಿಕ ರುದ್ರಭೂಮಿ' ಸರ್ಕಾರ ಶೀಘ್ರ ಕಾರ್ಯರೂಪಕ್ಕೆ ತರಲಿ

ಮಾನ್ಯರೆ,

ರಾಜ್ಯದ ಪ್ರತಿಯೊಂದು ಗ್ರಾಮ/ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಎಲ್ಲಾ ಜಾತಿ, ಧರ್ಮದ ಬಾಂಧವರಿಗಾಗಿ "ಮನುಷ್ಯ ಜಾತಿ ತಾನೊಂದೆ ವಲಂ" ಎಂಬಂತೆ "ಸಾರ್ವಜನಿಕ ರುದ್ರಭೂಮಿ" ಹೆಸರಿನಲ್ಲಿ ಸ್ಮಶಾನ ನಿರ್ಮಾಣ ಮಾಡಲು ಸರ್ಕಾರ ಶೀಘ್ರ ಮುಂದಾಗಲಿ. ಸಾಕಷ್ಟು ಹಳ್ಳಿಗಳಲ್ಲಿ ವಿಪರೀತವಾಗಿ ಜಾತಿ ಭೇದ ಭಾವ ದಲಿತರ ಸ್ಮಶಾನವಿದ್ದರೇ ಅದರ ಹಾಸು ಪಾಸು ಇನ್ನಿತರರ ಸವರ್ಣೀಯರ ಜಮೀನಿನಲ್ಲಿ ಹಾದು ಹೋಗಬಾರದು ಎನ್ನುವ ದಬ್ಬಾಳಿಕೆಯ ಕಟ್ಟಪ್ಪಣೆ. ಮಳೆ ಬಂದರೆ ಮೂಲ ಸೌಕರ್ಯ ವ್ಯವಸ್ಥೆ ಇಲ್ಲದೆ ಇನ್ನಷ್ಟೂ ಪಜೀತಿ ಪದೇ ಪದೆ ಇಂತಹ ಪ್ರಕರಣಗಳು ಆಗಾಗ ವರದಿಯಾಗುತ್ತಿವೆ. ಈ ಸಂಬಂಧ ಹೈಕೋರ್ಟ್ 2019ರಲ್ಲೇ ಆದೇಶ ನೀಡಿದ್ದರೂ ರಾಜ್ಯ ಸರ್ಕಾರ ಪಾಲಿಸದೆ ಹೈಕೋರ್ಟ್‌ನ ತರಾಟೆಗೆ ಒಳಗಾಗಿತ್ತು. ಸದ್ಯ, ಕೆಲವು ತಿಂಗಳ ಹಿಂದೆ ರಾಜ್ಯದಲ್ಲಿ ಸರಿ ಸುಮಾರು ಒಂದು ಸಾವಿರ ಗ್ರಾಮಗಳಲ್ಲಿ ಸ್ಮಶಾನ ಭೂಮಿ ಇಲ್ಲ ಎಂಬುದು ವರದಿಯಾಗಿದ್ದು ಜಿಲ್ಲಾಧಿಕಾರಿಗಳಿಗೆ ಜಮೀನು ಖರೀದಿಗೆ ಪ್ರಸ್ತಾವನೆ ಸಲ್ಲಿಸಲು ಕಂದಾಯ ಇಲಾಖೆ ಆದೇಶ ನೀಡಿರುತ್ತದೆ ವಿನಃ ಅದರ ಕಾರ್ಯ ಪ್ರಗತಿ ಏನು? ಉತ್ತರವಿಲ್ಲದ ಪ್ರಶ್ನೆ. ಸದ್ಯ, 12 ದಿನಗಳ ಕಾಲ ವಿಧಾನಸಭಾ ಕಲಾಪ ನಡೆದರೂ ಚಿಂತಕರ ಚಾವಡಿಯಲ್ಲಿ ಈ ವಿಷಯವನ್ನು ಯಾವೊಬ್ಬ ಜನಪ್ರತಿನಿಧಿ ಪ್ರಸ್ತಾಪ ಮಾಡದೆ ಇದ್ದದ್ದು ನಮ್ಮಿಂದ ಆಯ್ಕೆ ಆಗಿರುವವರ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಇನ್ನಾದರೂ ಮೂಲಭೂತವಾಗಿ ತೀರಾ ಅಗತ್ಯತೆ ಇರುವುದನ್ನು ತಡ ಮಾಡದೇ ಸರ್ಕಾರವೂ ಸಾರ್ವಜನಿಕರ ಒಳಿತಿಗಾಗಿ ಕಾರ್ಯರೂಪಕ್ಕೆ ತರಬೇಕಿದೆ.

– ಅನಿಲ್ ಕುಮಾರ್, ನಂಜನಗೂಡು.

ಪೌರಕಾರ್ಮಿಕರ ಬಾಳಿಗೆ ಬೆಳಕು...

ಮಾನ್ಯರೆ,

ನಗರಸಭೆ, ಪುರಸಭೆ ಮತ್ತು ಇತರ ಪಟ್ಟಣ ಸ್ಥಳೀಯ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ 11,133 ಪೌರಕಾರ್ಮಿಕರ ವಿಶೇಷ ನೇಮಕಾತಿ ನಿಯಮಗಳ ಅಡಿಯಲ್ಲಿ ಸರ್ಕಾರಿ ನೌಕರರೆಂದು ನೇಮಕಾತಿ ಮಾಡುವ ಪ್ರಸ್ತಾವನೆಗೆ ಮುಖ್ಯಮಂತ್ರಿಗಳ ನೇತೃತ್ವದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿರುವುದು ಪೌರಕಾರ್ಮಿಕರ ದುಡಿಮೆಗೆ ನ್ಯಾಯ ಒದಗಿಸುವ ಮೂಲಕ ಅವರ ಬಾಳಿಗೆ ಬೆಳಕನ್ನು ನೀಡಿದಂತಾಗಿದೆ.

ಈ ನೌಕರರು ಈಗ ರೂ 17,000–28,980 ವೇತನ ಶ್ರೇಣಿ ಅಡಿಯಲ್ಲಿ ಸೇವೆ ಸಲ್ಲಿಸುವ ಅವಕಾಶ ಕಲ್ಪಿಸಲಾಗಿದೆ. ಪೌರಕಾರ್ಮಿಕರ ಖಾಯಮಾತಿ ರಾಜ್ಯದ ಇತಿಹಾಸದಲ್ಲಿಯೇ ಇದು ಮೊದಲ ಬಾರಿಯಾಗಿದೆ. ಇದರಿಂದ ದೀರ್ಘ ಕಾಲದ ಪೌರಕಾರ್ಮಿಕರ ಹೋರಾಟಕ್ಕೆ ಬಿಜೆಪಿ ಸರ್ಕಾರ ನ್ಯಾಯ ಒದಗಿಸಿದೆ. ಈ ಮೂಲಕ ಬಿಜೆಪಿ ಸರ್ಕಾರ ಬಡವರು, ನೊಂದವರು, ದಲಿತರ ಪರ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಮತ್ತು ಅವರ ಸಚಿವ ಸಂಪುಟ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

–ಪರಮಾನಂದ.ಎಂ.ಎಸ್, ರಾಜ್ಯ ಕಾರ್ಯದರ್ಶಿ, ಎಸ್‌ಸಿ ಮೋರ್ಚಾ, ಬಿಜೆಪಿ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಪ್ರಾಕೃತ ಭಾಷಾ ಕಾರ್ಯಾಗಾರ

ಮೈಸೂರು ವಿಶ್ವವಿದ್ಯಾನಿಲಯವು ನಹಿ ಜ್ಞಾನೇನ ಸದೃಶಂ (ಜ್ಞಾನಕ್ಕೆ ಸಮಾನವಾದುದು ಇನ್ನೊಂದಿಲ್ಲ) ಎಂಬ ತನ್ನ ಧ್ಯೇಯಕ್ಕೆ ಅನುಗುಣವಾಗಿ ಜ್ಞಾನಪ್ರಸಾರದಲ್ಲಿ ತೊಡಗಿಕೊಂಡು ಮಾಡಿದ ಒಂದು ಉತ್ತಮ ಕಾರ್ಯ ಪ್ರಾಕೃತ ಭಾಷಾ ಕಾರ್ಯಾಗಾರ. ಮಾನಸಗಂಗೋತ್ರಿಯಲ್ಲಿರುವ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನದ ಭವನದಲ್ಲಿ ಈ ಕಾರ್ಯಾಗಾರವು ದಿನಾಂಕ 22.9.2022 ರಿಂದ 24.9.2022ರವರೆಗೆ, ಎಂದರೆ ಮೂರು ದಿನ ನಡೆಯಿತು. ಇದರಲ್ಲಿ ನಾನು ಕಳೆದ ಕಾಲ ನಿಜವಾಗಿ ಸಾರ್ಥಕವೆಂದು ನನಗೆ ಮನದಟ್ಟಾಯಿತು. ಈ ಶಿಬಿರದಲ್ಲಿ ಸುಮಾರು ಅರವತ್ತು ಜನ ಜಿಜ್ಞಾಸುಗಳು ಭಾಗವಹಿಸಿದ್ದರು. ಅವರಲ್ಲಿ ಅನೇಕ ತರುಣರೂ, ಮಧ್ಯ ವಯಸ್ಕರೂ, ವೃದ್ಧರೂ ಇದ್ದರು. ಎಲ್ಲರಿಗೂ ಜ್ಞಾನದ ಹಸಿವು ಇತ್ತು. ಪ್ರಾಕೃತ ಭಾಷೆಯ ನಾನಾ ರೂಪಗಳನ್ನು ಆಯಾಮಗಳನ್ನೂ ಅರಿತುಕೊಳ್ಳುವ ಹಂಬಲ ಎಲ್ಲರಲ್ಲೂ ಇತ್ತು. ಅದಕ್ಕೆ ಸಮನಾಗಿ ಲಭ್ಯವಾಗಿದ್ದ ಅಲ್ಪ ಕಾಲದಲ್ಲಿ ಆದಷ್ಟು ಹೆಚ್ಚು ವಿಷಯಗಳನ್ನು ತಿಳಿಸಿಕೊಡಬೇಕೆಂಬ ಕುತೂಹಲ ಮತ್ತು ಆಕಾಂಕ್ಷೆ ಪ್ರತಿಯೊಬ್ಬ ಸಂಪನ್ಮೂಲ ವ್ಯಕ್ತಿಗಳಿಗೂ ಇತ್ತು. ಇಂತಹ ವಿದ್ಯಾರ್ಥಿಗಳ ಮತ್ತು ಗುರುಗಳ ಅಪೂರ್ವ ಸಮಾಗಮ ಜ್ಞಾನಪರಂಪರೆಯ ಅನುಸ್ಯೂತತೆಗೆ ಅನುಕೂಲವಾಗಿತ್ತು.

ಪ್ರಾಕೃತ ಪ್ರಕೃತಿ ಜನ್ಯವಾದ, ಸಹಜ ಗುಣಗಳುಳ್ಳ, ಮಧುರ ಧ್ವನಿಯ ಭಾಷೆ. ಎರಡು ಸಾವಿರದ ಐದುನೂರು ವರ್ಷಗಳ ಹಿಂದೆ ಮಗಧ ರಾಜ್ಯದಲ್ಲಿ ಜನರು ಆಡುತ್ತಿದ್ದ ಭಾಷೆ ಮಾಗಧೀ ಪ್ರಾಕೃತ ಎನಿಸಿತು. ಇದನ್ನು ಅವಲಂಬಿಸಿ ಭಗವಾನ್ ಬುದ್ಧನು ಜನರಿಗೆ ಉಪದೇಶ ಮಾಡಿದನು. ಅದನ್ನು ಈಗ ಪಾಲೀ ಎಂದು ಕರೆಯುತ್ತಾರೆ. ಭಗವಾನ್ ಮಹಾವೀರ ತೀರ್ಥಂಕರರು ಮಗಧ ದೇಶದಲ್ಲಿ ಆಡುತ್ತಿದ್ದ, ಸ್ವಲ್ಪ ಭಿನ್ನವಾದ ಅರ್ಧ ಮಾಗಧೀ ಭಾಷೆಯನ್ನು ಆಶ್ರಯಿಸಿ ತಮ್ಮ ಪವಿತ್ರ ಉಪದೇಶಗಳನ್ನಿತ್ತರು. ಹೀಗೆ ಪ್ರಾಕೃತ ಭಾಷೆ ನಾನಾ ರೂಪಗಳಲ್ಲಿತ್ತು. ಇದರ ಶೌರಸೇನೀ ಎಂಬ ಪ್ರಕಾರವು ಹೆಚ್ಚು ಜನಪ್ರಿಯವಾಗಿ ನಾಟಕಗಳಲ್ಲಿ ಪ್ರಯುಕ್ತವಾಗುತ್ತಿತ್ತು. ಮಹಾರಾಷ್ಟ್ರದಲ್ಲಿ ಪ್ರಾಕೃತ ಭಾಷೆಯ ಸುಂದರ ರೂಪ ಪ್ರಯೋಗದಲ್ಲಿತ್ತು. ಇದನ್ನು ಮಹಾರಾಷ್ಟ್ರೀ ಎಂದು ಕರೆಯುತ್ತಿದ್ದರು. 'ಷಡ್ ಭಾಷಾ ಚಂದ್ರಿಕಾ' ಎಂಬ ಪ್ರಾಕೃತ ವ್ಯಾಕರಣದಲ್ಲಿ ಆರು ಪ್ರಾಕೃತ ಭಾಷೆಗಳನ್ನು ನಿಯಮಪೂರ್ವಕವಾಗಿ ವಿವರಿಸಲಾಗಿದೆ. ಇದರಿಂದ ನಾವು ಅರಿತುಕೊಳ್ಳಬೇಕಾದುದೇನೆಂದರೆ ಪ್ರಾಕೃತವು ಒಂದು ಭಾಷಾ ವೃಕ್ಷವಾಗಿದ್ದು, ಅದರಲ್ಲಿ ಅನೇಕ ಕೊಂಬೆಗಳೂ ರೆಂಬೆಗಳೂ ಇವೆ ಎಂಬುದು.

ಕರ್ನಾಟಕ ಪ್ರದೇಶದಲ್ಲಿ ಮೊದಲು ಸಾಹಿತ್ಯದ ರಚನೆಯಾದದ್ದು ಪ್ರಾಕೃತ ಭಾಷೆಯಲ್ಲೇ. ಆ ಸಾಹಿತ್ಯ ಆಧ್ಯಾತ್ಮಿಕ ಮತ್ತು ದಾರ್ಶನಿಕ ರೂಪದಲ್ಲಿತ್ತು. ಭಗವಾನ್ ಮಹಾವೀರರು ಲೋಕಕ್ಕೆ ಅನುಗ್ರಹಿಸಿದ ಅನೇಕಾಂತವಾದ, ಆತ್ಮಾಸ್ತಿತ್ವ ಪ್ರತಿಪಾದನೆ, ಅಹಿಂಸಾತತ್ತ್ವದ ನಿರೂಪಣೆ ಜಗತ್ತಿಗೆ ಎಲ್ಲ ಕಾಲಗಳಲ್ಲಿ ಹಿತವನ್ನು ತರುವ ತತ್ತ್ವಗಳು. ಕರ್ನಾಟಕದವರೇ ಆಗಿದ್ದ ಕುಂದಕುಂದರು ಈ ದರ್ಶನಕ್ಕೆ ತರ್ಕಬದ್ಧತೆಯನ್ನೂ, ವಿಶ್ವಮಾನ್ಯತೆಯನ್ನೂ ತಂದು ಕೊಡುವ ಮಹತ್ತೂ ಬೃಹತ್ತೂ ಆದ ಸಾಹಿತ್ಯವನ್ನು ಪ್ರಾಕೃತದಲ್ಲಿ ರಚಿಸಿದರು. ಅವರ ಸಮಯಸಾರ, ಪ್ರವಚನಸಾರ ಮುಂತಾದ ಗ್ರಂಥಗಳು ವಿಶ್ವ ಸಾಹಿತ್ಯದಲ್ಲಿ ಪ್ರಥಮ ಪಂಕ್ತಿಯಲ್ಲಿ ಕಾಣಿಸಿಕೊಳ್ಳಲು ಅರ್ಹವಾದವು. ಪ್ರಾಕೃತ ಸಾಹಿತ್ಯದ ವೈಶಾಲ್ಯ ಎಷ್ಟಿದೆಯೆಂದರೆ ಅದನ್ನು ಅರಿತುಕೊಳ್ಳಲು ಒಂದು ಪುರುಷಾಯುಷ (ನೂರು ವರ್ಷಗಳ ಮಾನವ ಜೀವಿತಾವಧಿ) ಏನೇನೂ ಸಾಲದು ಎಂಬುದು ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳ ಉಪನ್ಯಾಸಗಳಿಂದ ವೇದ್ಯವಾಯಿತು.

ಪ್ರಾಕೃತ ಜೈನ ಮತಕ್ಕೆ ಸೀಮಿತವಲ್ಲ

ಪ್ರಾಕೃತ ಭಾಷೆ ಜನರ ನುಡಿ. ಅದನ್ನು ಎಲ್ಲರೂ ಬಳಸುತ್ತಿದ್ದರು. ಎಲ್ಲರೂ ಅದರಲ್ಲಿ ಸಾಹಿತ್ಯದ ರಚನೆಯನ್ನು ಮಾಡಿದರು. ಕಾಳಿದಾಸನ ನಾಟಕಗಳಲ್ಲಿ ಎಲ್ಲಾ ಸ್ತ್ರೀ ಪಾತ್ರಗಳು ಮಾತನಾಡುವುದು ಪ್ರಾಕೃತದಲ್ಲೇ. ಕಾಳಿದಾಸ ಮಾತ್ರವಲ್ಲ, ನಾಟಕಗಳನ್ನು ರಚಿಸಿದ ಎಲ್ಲಾ ಸಂಸ್ಕೃತ ನಾಟಕಕಾರರು ಪ್ರಾಕೃತದಲ್ಲೂ ಪರಿಣತರಾಗಿದ್ದು, ತಮ್ಮ ನಾಟಕಗಳಲ್ಲಿ ಅದನ್ನು ಬಳಸಿದ್ದಾರೆ. ಸಂಪೂರ್ಣ ಪ್ರಾಕೃತದಲ್ಲೇ ರಚಿತವಾಗಿರುವ ಕರ್ಪೂರಮಂಜರೀ ಎಂಬ ಸಟ್ಟಕವನ್ನು ರಚಿಸಿದ ರಾಜಶೇಖರನು ಜೈನನಲ್ಲ. ಹನ್ನೆರಡನೆಯ ಶತಮಾನದಲ್ಲಿ ಕಾಶ್ಮೀರದಲ್ಲಿ ಜನಿಸಿದ ಬಿಲ್ಹಣನೆಂಬ ಸಂಸ್ಕೃತ ಕವಿ 'ಕಾಶ್ಮೀರದ ಪ್ರತಿಯೊಂದು ಮನೆಯಲ್ಲೂ ಹೆಂಗಸರು, ಗಂಡಸರು, ಮಕ್ಕಳು ದೇಶಭಾಷೆ, ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ಪರಿಣತರು' (ಯತ್ರ ಸ್ತ್ರೀಣಾಮಪಿ ಕಿಮಪರಂ ಜನ್ಮ ಭಾಷಾವದೇವ ಪ್ರತ್ಯಾವಾಸಂ ವಿಲಸತಿ ವಚಃ ಸಂಸ್ಕೃತಂ ಪ್ರಾಕೃತಂ ಚ) ಎಂದು ಹೇಳಿದ್ದಾನೆ. ಹೀಗೆ ಪ್ರಾಕೃತ ಎಲ್ಲ ಜನರ ಭಾಷೆ. ಅದರಿಂದಲೇ ಕಾಲಾಂತರದಲ್ಲಿ ಅಪಭ್ರಂಶವೂ, ಅದರಿಂದ ಮತ್ತೆ ಆಧುನಿಕ ಭಾರತದ ಭಾಷೆಗಳಾದ ಹಿಂದೀ, ಗುಜರಾತೀ, ಮರಾಠೀ ಇತ್ಯಾದಿ ಭಾಷೆಗಳೂ ಹುಟ್ಟಿದುವು. ಜೈನರು ಪ್ರಾಕೃತವನ್ನು ಪವಿತ್ರ ಭಾಷೆಯನ್ನಾಗಿ ಸ್ವೀಕರಿಸಿ ಧರ್ಮ–ದರ್ಶನಗಳನ್ನು ವಿಶದೀಕರಿಸಲು ಅದನ್ನೇ ಬಳಸಿದರು ಮತ್ತು ಬೆಳೆಸಿದರು ಎಂಬುದು ಸತ್ಯ. ಆದರೆ ಭಾಷೆಗೂ ಮತಕ್ಕೂ ಗಂಟು ಹಾಕುವುದು ಅನವಶ್ಯಕ. ಭಾರತದ ಪರಂಪರೆಯನ್ನು ಅರಿತುಕೊಳ್ಳಲು ಸಂಸ್ಕೃತ, ಪಾಲೀ ಮತ್ತು ಪ್ರಾಕೃತ ಎಂಬ ಮೂರು ಭಾಷೆಗಳ ಜ್ಞಾನವೂ ಅಪೇಕ್ಷಿತ ಎಂಬುದು ಸುಸ್ಪಷ್ಟ.

ಪ್ರಾಕೃತ ಭಾಷೆಯ ಕಾವ್ಯಗಳು

ಕಾರ್ಯಾಗಾರಕ್ಕೆ ಬಂದಿದ್ದ ಸಂಪನ್ಮೂಲ ವ್ಯಕ್ತಿಗಳು ಪ್ರಾಕೃತ ಭಾಷೆಯಲ್ಲಿ ರಚಿತವಾಗಿರುವ ಕಾವ್ಯಗಳ ಪರಿಚಯವನ್ನು ಮಾಡಿಕೊಟ್ಟರು. ಮಹಾರಾಜ ಹಾಲನು ಗಾಹಾಸತ್ತ ಸಈ (ಗಾಥಾ ಸಪ್ತಶತೀ) ಎಂಬ ಸುಭಾಷಿತ ಗ್ರಂಥವನ್ನು ರಚಿಸಿದ್ದಾನೆ. ಪ್ರವರ ಸೇನನೆಂಬ ಕವಿ ಸೇತು ಬಂಧ ಎಂಬ ಪ್ರಾಕೃತ ಮಹಾಕಾವ್ಯವನ್ನು ಬರೆದಿದ್ದಾನೆ. ರಾಮನು ಸೇತುವೆಯನ್ನು ಕಟ್ಟಿದ್ದು ಇದರ ಕಥಾವಸ್ತು. ಈ ಕಾವ್ಯವನ್ನು ಸಂಸ್ಕೃತದ ಶ್ರೇಷ್ಠ ಕವಿಗಳಾದ ಬಾಣಾ, ದಂಡಿ ಮುಂತಾದವರೂ ಮುಕ್ತಕಂಠದಿಂದ ಹೊಗಳಿದ್ದಾರೆ. ಪ್ರಾಕೃತದಲ್ಲಿರುವ ವಜ್ಜಾಲಗ್ಗ ಎಂಬ ಸೂಕ್ತಿಸಂಗ್ರಹವನ್ನು ಜಯವಲ್ಲಭನು ರಚಿಸಿದ್ದಾನೆ. ಪುಮಚರಿಯು (ಪದ್ಮ ಚರಿತ) ರಾಮಾಯಣದ ಕಥೆಯನ್ನು ಜೈನಪ್ರಕಾರವಾಗಿ ಹೇಳುವ ಸವಿಸ್ತರ ಕಾವ್ಯ.

ಪ್ರಾಕೃತ ಭಾಷೆಯನ್ನು ಜನರು ಆಡುವ ಕಾಲ ಮುಗಿದು ಹಲವು ಶತಮಾನಗಳು ಕಳೆದರೂ ಅದರ ಅಧ್ಯಯನವನ್ನು ಜತನದಿಂದ ಮಾಡುವ, ಅದರಲ್ಲಿ ಕವಿತೆಯನ್ನು ರಚಿಸುವ ಕವಿಗಳು ನಮ್ಮ ದೇಶದಲ್ಲಿದ್ದರು. (ಇದ್ದಾರೆ). ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿದ್ದ ವೇದಾಂತ ದೇಶಿಕರು ಅಚ್ಯುತ ಶತಕವನ್ನು ಪ್ರಾಕೃತದಲ್ಲಿ ರಚಿಸಿದರು. ಹದಿನೇಳನೆಯ ಶತಮಾನದಲ್ಲಿ ಕೇರಳದಲ್ಲಿ ಪ್ರಾಕೃತ ಭಾಷಾಕಾವ್ಯವನ್ನು ಕೆಲವರು ರಚಿಸಿದರು. ಕಂಸವಹೋ ಮುಂತಾದ ಖಂಡಕಾವ್ಯಗಳೂ ಪ್ರಾಕೃತದಲ್ಲಿವೆ.

ಕಥಾ ಸಾಹಿತ್ಯದಲ್ಲೂ ಪ್ರಾಕೃತ ಭಾಷೆ ಮುಂಚೂಣಿಯಲ್ಲಿತ್ತು. ಗುಣಾಢ್ಯನು ಪೈಶಾಚೀ ಎಂಬ ಪ್ರಾಕೃತ ಭಾಷೆಯಲ್ಲಿ ಬೃಹತ್ಕಥಾ ಎಂಬ ಕಥೆಗಳ ಸಂಗ್ರಹವನ್ನು ಬರೆದಿದ್ದನಂತೆ. ಅದು ಈಗ ಉಪಲಬ್ಧವಾಗಿಲ್ಲ. ಅದರ ಸಂಸ್ಕೃತಾನುವಾದವೇ ಆಗಿರುವ ಕಥಾಸರಿತ್‌ಸಾಗರ ಈಗ ಉಪಲಬ್ಧವಾಗಿದೆ. ತರಂಗವಈಕಹಾ, ತರಂಗಲೋಲಾ, ವಸುದೇವಹಿಂಡೀ ಮುಂತಾದ ಅನೇಕ ಕಥಾ ಗ್ರಂಥಗಳು ಓದುಗರನ್ನು ಆಕರ್ಷಿಸುತ್ತವೆ. ಕಹಾರಯಣಕೋಸೋ (ಕಥಾರತ್ನ ಕೋಶ) ಎಂಬುದನ್ನು ದೇವಭದ್ರ ಸೂರಿಯು ರಚಿಸಿದ್ದಾನೆ. ಇದರಲ್ಲಿ ಐವತ್ತು ಕಥೆಗಳಿವೆ.

ಪ್ರಾಕೃತ ಭಾಷೆಯು ಗ್ರಂಥಸ್ಥ ಭಾಷೆಯಾದ ಮೇಲೆ ಅದರ ವ್ಯಾಕರಣ ಬೇಕಾಯಿತು. ಅದನ್ನು ಅನೇಕರು ರಚಿಸಿದ್ದಾರೆ. ಕಲಿಕಾಲ ಸರ್ವಜ್ಞನೆಂದು ಪ್ರಸಿದ್ಧನಾಗಿದ್ದ ಆಚಾರ್ಯ ಹೇಮಚಂದ್ರನು ತನ್ನ ಶಬ್ದಾನುಶಾಸನದಲ್ಲಿ ಮೊದಲು ಸಂಸ್ಕೃತ ವ್ಯಾಕರಣವನ್ನು ತದನಂತರ ಪ್ರಾಕೃತ ವ್ಯಾಕರಣವನ್ನು ರಚಿಸಿದ್ದಾನೆ. ಇಂತಹ ಇತರ ಶಾಸ್ತ್ರ ಗ್ರಂಥಗಳೂ ಪ್ರಾಕೃತದಲ್ಲಿವೆ.

ಪ್ರಾಕೃತ ಭಾಷಾ ಕಾರ್ಯಾಗಾರದಲ್ಲಿ ವಿದ್ವಾಂಸರು ದೇಶದಲ್ಲೂ, ವಿದೇಶಗಳಲ್ಲೂ ಪ್ರಾಕೃತ ಭಾಷಾಧ್ಯಯನ ಮತ್ತು ಜೈನಧರ್ಮದ ಅಧ್ಯಯನ ಹೇಗೆ ನಡೆಯುತ್ತಿದೆ ಎಂದು ವಿವರಿಸಿದ್ದರು. ಪ್ರಾಕೃತ ಶಾಸನಗಳು ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿವೆ ಎಂದು ಸಚಿತ್ರವಾಗಿ ವಿವರಿಸಿದರು.

ಒಟ್ಟು ಹೇಳಬೇಕೆಂದರೆ ಪ್ರಾಕೃತ ಭಾಷೆಯ ವರ್ಣಮಾಲೆಯಿಂದ ಆರಂಭಿಸಿ ಅದರ ಕಥಾ ಸಾಹಿತ್ಯದವರೆಗೆ ಮತ್ತು ಮುಂದಿನ ಸಾಹಿತ್ಯಾಧ್ಯಯನದವರೆಗೆ ಅನೇಕಾಂಶಗಳು ನಮಗೆ (ಶಿಬಿರದಲ್ಲಿ ಭಾಗವಹಿಸಿದವರಿಗೆ) ದೊರಕಿದವು. ಪ್ರಾಕೃತದ ಪದ್ಯಗಳ ಸವಿಯೂ ಸ್ವಲ್ಪಮಟ್ಟಿಗೆ ಲಭ್ಯವಾಯಿತು. ಇನ್ನೂ ಕೇಳೋಣ ಎಂದು ಅನಿಸುತ್ತಿದ್ದಾಗಲೇ ಕಾರ್ಯಾಗಾರ ಮುಗಿದು ಹೋಯಿತೆಂದು ಬೇಸರವಾಯಿತು.

ಕಾರ್ಯಾಗಾರದ ಸೂತ್ರಧಾರರಾಗಿ ಶ್ರವಣಬೆಳಗೊಳ ಕ್ಷೇತ್ರದಲ್ಲಿರುವ ಬಾಹುಬಲಿ ಪ್ರಾಕೃತ ವಿದ್ಯಾಪೀಠದ ನಿರ್ದೇಶಕ ಪ್ರೊ. ಜಯಕುಮಾರ ಉಪಾಧ್ಯೆ ಪ್ರಶಂಸನೀಯ ಕಾರ್ಯವನ್ನು ಮಾಡಿದರು. ಅವರು ಸಮಯೋಚಿತವಾಗಿ ಮಾಡುತ್ತಿದ್ದ ಕೆಲವು ಟಿಪ್ಪಣಿಗಳು ಅತ್ಯಂತ ಉಪಯುಕ್ತವಾಗಿದ್ದವು. ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನದ ಅಧ್ಯಕ್ಷರಾದ ಡಾ. ವಿಜಯಕುಮಾರಿ ಕರಿಕಲ್ ಅವರು ತಮ್ಮ ಹಲವಾರು ಜವಾಬ್ದಾರಿಗಳ ನಡುವೆ ಕಾರ್ಯಾಗಾರದ ಸಫಲತೆಗಾಗಿ ಪಾದರಸದಂತೆ ಓಡಾಡಿ ಶ್ರಮಿಸಿದ ರೀತಿ ಪ್ರಶಂಸನೀಯವಾಗಿತ್ತು. ಶ್ರವಣ ಬೆಳಗೊಳದ ಪರಮಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳ ಅನುಗ್ರಹ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳ ಪ್ರೋತ್ಸಾಹ ಈ ಕಾರ್ಯಾಗಾರವನ್ನು ಸಫಲವನ್ನಾಗಿ ಮಾಡಿತು. ಕರ್ನಾಟಕದಲ್ಲಿ ಪ್ರಾಕೃತ, ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳ ಅಂಕುರಾರ್ಪಣ ನಡೆದದ್ದು ಜೈನರಿಂದಲೇ ಎಂಬುದು ವಿವಾದಾತೀತ. ಅವರ ಕೊಡುಗೆ ಅಪ್ರತಿಮ. ಜೈನದರ್ಶನದ ಒಳನೋಟಗಳನ್ನು ಪಡೆಯಲು ಮತ್ತು ಪ್ರಾಕೃತ ಸಾಹಿತ್ಯದ ಅಂದ ಚಂದಗಳನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸೋಣ ಎಂಬ ಸಂಕಲ್ಪವನ್ನು ಮಾಡಲು ಇದು ಸುಸಮಯ. ಮೈಸೂರು ವಿಶ್ವವಿದ್ಯಾನಿಲಯ ಇಂತಹ ಕಾರ್ಯಾಗಾರಗಳಿಂದ ತನ್ನ ಹೆಸರನ್ನು ಸಾರ್ಥಕವಾಗಿ ಮಾಡಿಕೊಂಡಿದೆ ಎಂದರೆ ತಪ್ಪಿಲ್ಲ.

ಮೈಸೂರಿನ ಪ್ರಮುಖ ಐತಿಹಾಸಿಕ ದ್ವಾರಗಳು

ನಾಡಹಬ್ಬ ಎಂದೇ ಖ್ಯಾತಿಯಾದ ದಸರಾ ಮಹೋತ್ಸವವು ಕ್ರಿಸ್ತಪೂರ್ವ ಕಾಲದಲ್ಲಿ ಬರುವ ಗುಪ್ತ ಸಾಮ್ರಾಜ್ಯದ ದೊರೆ ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಮೊಟ್ಟ ಮೊದಲ ಬಾರಿಗೆ ಶುರುವಾಯಿತು ಎಂದು ಹಯವದನ ರಾವ್ ಅವರು "ಮೈಸೂರಿನ ದಸರಾ; ಮೂಲ ಮತ್ತು ಮಹತ್ವ" (The Dasara in Mysore: Its Origin and Significance) ಪ್ರಸಿದ್ಧ ಪುಸ್ತಕದಲ್ಲಿ ಬರೆದಿದ್ದಾರೆ.

1610ರಂದು ಮೊಟ್ಟ ಮೊದಲ ಬಾರಿಗೆ ಮೈಸೂರಿನಲ್ಲಿ ದಸರಾ ಮಹೋತ್ಸವವನ್ನು ಅಂದಿನ ಯದುವಂಶದ ದೊರೆ ಶ್ರೀ ರಾಜ ಒಡೆಯರು ಆರಂಭಿಸಿದರು. ಸಿಂಹಾಸನವು ವಿಜಯನಗರದ ಕಂಪಿಲರಾಯನಿಂದ ಬಂದಿದೆ ಎಂದು ಸಿಂಹಾಸನದ ಮೇಲಿರುವ ಬಿರಡಿ ಹಲಗೆಯ ಶಾಸನದಲ್ಲಿ ಕೆತ್ತಿರುವುದನ್ನು ಕಾಣಬಹುದು. 1800ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ರಾಜ್ಯಭಾರ ಮಾಡುವ ಕಾಲದಲ್ಲಿ ವಜ್ರ ವೈಡೂರ್ಯ ರತ್ನಖಚಿತ ಆಭರಣಗಳಿಂದ ಸಿಂಹಾಸನವನ್ನು ಸಿಂಗಾರ ಮಾಡಿಸಿದರು. ನಂತರ ಅದನ್ನು ಇನ್ನಷ್ಟು ಸುಂದರೀಕರಣ ಮಾಡಿದವರು ನಾಲ್ವಡಿ ಕೃಷ್ಣರಾಜ ಒಡೆಯರು.


7 ಅರಮನೆಯ ಪ್ರಮುಖ ದ್ವಾರಗಳು

ಜಯ ಮಾರ್ತಾಂಡ ದ್ವಾರ




ಮೈಸೂರು ಅರಮನೆಯ ಪೂರ್ವ ದಿಕ್ಕು ಹಾಗೂ ದೊಡ್ಡಕೆರೆ ಮೈದಾನದ ಎದುರಿನಲ್ಲಿರುವ ಪ್ರಮುಖ ದ್ವಾರ. ಈ ದ್ವಾರದಲ್ಲಿ ಸಾರ್ವಜನಿಕರಿಗೆ ದಸರಾ ಮಹೋತ್ಸವದ ಸಂದರ್ಭದಲ್ಲಿ ಮಾತ್ರ ಪ್ರವೇಶವಿರುತ್ತದೆ.

ವರಾಹ ದ್ವಾರ




ಅರಮನೆಯ ದಕ್ಷಿಣ ದಿಕ್ಕಿನಲ್ಲಿದೆ ಈ ದ್ವಾರ. ದ್ವಾರದ ಬಲ ಭಾಗದಲ್ಲಿನ ಶ್ವೇತವರಾಹ ಸ್ವಾಮಿ ದೇಗುಲವಿದೆ. ರಣಧೀರ ಕಂಠೀರವ ನರಸಿಂಹರಾಜ ಒಡೆಯರು ತಿರುಚಿನಾಪಳ್ಳಿಗೆ ತೆರಳಿ ಮಲ್ಲಯುದ್ಧದಲ್ಲಿ ಜಟ್ಟಿಗಳನ್ನು ಸೋಲಿಸಿ ಸಂಹರಿಸಿದ ಕಾರಣಕ್ಕೆ ಅಲ್ಲಿನ ದೊರೆ ಅವಮಾನದಿಂದ, ಅಪಮಾನವನ್ನು ಸಹಿಸಲಾರದೆ ಮೈಸೂರು ಮಹಾರಾಜರನ್ನು ಕೊಲ್ಲಲು ಇಪ್ಪತ್ತೊಂದು ಜನ ಹಾಗೂ ಒಂದು ಹೆಣ್ಣನ್ನು ಕಳುಹಿಸಿದನು. ಅಂತಃಪುರದಲ್ಲಿ ರಣಧೀರ ಕಂಠೀರವ ನರಸಿಂಹರಾಜ ಒಡೆಯರು ತಿರುಚಿನಾಪಳ್ಳಿಯಿಂದ ಬಂದ ಹೆಣ್ಣಿನ ಜೊತೆ ಚರ್ಚೆಯಲ್ಲಿರುವಾಗ, ಉಳಿದವರು ಅವರ ಮೇಲೆರಗಿದರು. ನಂತರ ರಣಧೀರ ಕಂಠೀರವ ತನ್ನ ಉಡಿಯಲ್ಲಿದ್ದ ವರಹ ಸಿಂಹ ಎಂಬ ಬಾಕುವಿನಿಂದ ಕತ್ತು ಸೀಳಿ ಸಾಯಿಸಿದ ವಿಷಯ ತಿರುಚಿನಾಪಳ್ಳಿಯ ಅರಸನಿಗೆ ತಿಳಿದು ಅಹಂಕಾರವೆಲ್ಲ ಇಳಿದು, ಸೋಲೊಪ್ಪಿಕೊಂಡು ನೆನಪಾರ್ಥವಾಗಿ ಶ್ವೇತವರಹಸ್ವಾಮಿ ವಿಗ್ರಹವನ್ನು ಅರ್ಪಿಸುತ್ತಾನೆ. ಅಂದು ತಿರುಚನಾಪಳ್ಳಿಯ ಅರಸ ಕೊಟ್ಟ ವಿಗ್ರಹವೇ ಈ ವರಾಹಸ್ವಾಮಿ ದೇಗುಲದಲ್ಲಿನ ವಿಗ್ರಹ.

ಅಂಬಾವಿಲಾಸ ದ್ವಾರ



ಮೈಸೂರು ಅರಮನೆ ಕಚೇರಿಯ ಮುಂಭಾಗದಲ್ಲಿ ಈ ದ್ವಾರವಿದೆ.ಈ ದ್ವಾರದಲ್ಲಿ ಯಾವ ಸಾರ್ವಜನಿಕರಿಗೂ ಪ್ರವೇಶವಿರುವುದಿಲ್ಲ. ಈ ದ್ವಾರವು ನೇರವಾಗಿ ಅರಮನೆಯಲ್ಲಿ ಖಾಸಗಿ ದರ್ಬಾರ್ ನಡೆಯುವ ಜಾಗಕ್ಕೆ ತಲುಪುತ್ತದೆ. ಅಂದಿನ ಕಾಲದಿಂದಲೂ ರಾಜರಿಂದ ಖಾಸಗಿ ದರ್ಬಾರನ್ನು ನೋಡಲು ಅನುಮತಿ ಇರುವವರಿಗೆ ಮಾತ್ರ ಓಡಾಡಲು ನಿರ್ಮಿಸಿರುವ ದ್ವಾರ.

ಬ್ರಹ್ಮಪುರಿ ದ್ವಾರ



ಇಂದಿನ ಮಹಾನಗರ ಪಾಲಿಕೆಯ ಮುಂಭಾಗದಲ್ಲಿ ಈ ದ್ವಾರವಿದೆ. ಅಂದಿನ ಕಾಲದಲ್ಲಿ ಮಹಾರಾಜರು ರಾಜಗುರು ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠಕ್ಕೆ ಸಂಚರಿಸುತ್ತಿದ್ದ ದಾರಿ. ಮಠದಿಂದ ಪೂಜ್ಯ ಗುರುಗಳು ಮಹಾರಾಜರನ್ನು ನೋಡಬೇಕಿದ್ದರೆ ಅಥವಾ ಮಹಾರಾಜರು ಮಠಕ್ಕೆ ಹೋಗಬೇಕಿದ್ದರೆ ಓಡಾಡುತ್ತಿದ್ದ ದ್ವಾರವಾಗಿತ್ತು.

ಕರಿಕಲ್ಲು ತೊಟ್ಟಿ ದ್ವಾರ



ಈ ದ್ವಾರವನ್ನು ಮೋತಿಖಾನೆ ದ್ವಾರ ಎಂದು ಕರೆಯುತ್ತಾರೆ. ಈ ದ್ವಾರದ ಹಿಂಭಾಗದಲ್ಲಿ ಅಂದಿನ ಕಾಲದಲ್ಲಿ ಮೋತಿಖಾನೆ ಇತ್ತು. ಅಲ್ಲಿಂದ ಅರಮನೆಗೆ ಬೇಕಾದ ದಿನಸಿ ಸಾಮಗ್ರಿಗಳು ಪೂರೈಕೆಯಾಗುತ್ತಿತ್ತು. ಪ್ರಸ್ತುತ ಈ ದ್ವಾರದ ಹಿಂಭಾಗದಲ್ಲಿ ಜನತಾ ಬಜಾರ್, ಬನುಮಯ್ಯಾಸ್ ಇದೆ.

ಜಯರಾಮ ದ್ವಾರ



ಮೈಸೂರು ಅರಮನೆಯ ಉತ್ತರ ದಿಕ್ಕಿನಲ್ಲಿ ಈ ದ್ವಾರವಿದೆ. ಈ ದ್ವಾರದ ಬಳಿ ಕೋಟೆ ಆಂಜನೇಯನ ದೇಗುಲವಿದೆ. ದಸರಾ ಮಹೋತ್ಸವದ ಸಂದರ್ಭದಲ್ಲಿ ಮಾತ್ರ ಈ ದ್ವಾರ ತೆರೆಯುತ್ತದೆ.

ಬಲರಾಮ ದ್ವಾರ



14 ವರ್ಷ ಸತತವಾಗಿ ಚಿನ್ನದ ಅಂಬಾರಿ ಹೊತ್ತ ಬಲರಾಮ ಎಂಬ ಆನೆಯ ನೆನಪಾರ್ಥವಾಗಿ ಇಡಲಾದ ಹೆಸರು. ಈ ದ್ವಾರವು ಹಾಗೂ ಜಯರಾಮ ದ್ವಾರವು ಅಕ್ಕಪಕ್ಕದಲ್ಲಿದೆ. ಈ ದ್ವಾರದಲ್ಲಿ ಕಣ್ಮನ ಸೆಳೆಯುವ ಜಂಬೂಸವಾರಿಯ ದಿನದಂದು ಮುಖ್ಯಮಂತ್ರಿ, ಸಚಿವರು ಹಾಗೂ ಅಧಿಕಾರಿಗಳು ಚಿನ್ನದ ಅಂಬಾರಿ ಹೊತ್ತ ಆನೆಗೆ ಹಾಗೂ ಅಂಬಾರಿಯಲ್ಲಿರುವ ನಾಡದೇವತೆ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ದ್ವಾರವಾಗಿದೆ. ಈ ದ್ವಾರದ ಸಮೀಪದಲ್ಲೇ ಕೋಟೆ ಗಣಪತಿ ದೇವಸ್ಥಾನವಿದೆ.

ಮೈಸೂರಿನ ಇತರೆ ಐತಿಹಾಸಿಕ ದ್ವಾರ

ಸಬರ್ಬನ್ ದ್ವಾರ



ಈ ದ್ವಾರವು ಬೆಂಗಳೂರು–ನೀಲಗಿರಿ ರಸ್ತೆಯಲ್ಲಿರುವ ಸಬರ್ಬನ್ ಬಸ್ಸು ನಿಲ್ದಾಣದ ಬಳಿ ಇದೆ. 1805 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು, ಲಕ್ಷ್ಮಿ ಅಮ್ಮಣ್ಣಿ, ದಿವಾನ್ ಪೂರ್ಣಯ್ಯ ಅವರ ಕಾಲದಲ್ಲಿ ಬ್ರಿಟಿಷ್ ಅಧಿಕಾರಿಗಳು ನಿರ್ಮಿಸಿದರು, ಮೈಸೂರಿನ ಪ್ರಾಚೀನ ದ್ವಾರ ಎಂದು ಪ್ರಸಿದ್ಧಿಯಾಗಿದೆ. ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಗಳು ಮಹಾರಾಜರನ್ನು ಭೇಟಿ ಮಾಡಲು ಓಡಾಡುತ್ತಿದ್ದ ದ್ವಾರವಿದು.

ಜೇಮ್ಸ್ ಗಾರ್ಡನ್ ದ್ವಾರ



ಜಿಲ್ಲಾಧಿಕಾರಿ ಕಚೇರಿ ಅಥವಾ ಅಠಾರ ಕಚೇರಿ ಹಿಂಭಾಗದಲ್ಲಿರುವ ದ್ವಾರ ಇದಾಗಿದೆ. ಅಂದು ರೆಸಿಡೆಂಟ್ ಆಗಿದ್ದ ಜೇಮ್ಸ್ ಗಾರ್ಡನ್ ಓಡಾಡುತ್ತಿದ್ದ ದ್ವಾರ. ಈಗಿನ ಜನ ಆ ದ್ವಾರವನ್ನು ಜಿಲ್ಲಾಧಿಕಾರಿ ಕಚೇರಿ ಆರ್ಚ್ ಎಂದು ಕರೆಯುತ್ತಾರೆ.

ವೀರನಗೆರೆ ಬುರ್ಜ್ ದ್ವಾರ



ಪೈಲೆಟ್ ವೃತ್ತ ಮುಂಭಾಗದಲ್ಲಿ ಸಿಗುವ ದ್ವಾರ. 1610ರಲ್ಲಿ ಮೈಸೂರು ಹಾಗೂ ವೀರನಗೆರೆ ನಡುವೆ ಯುದ್ಧ ನಡೆದ ಸಂದರ್ಭದಲ್ಲಿ ನಿರ್ಮಿಸಿದ ದ್ವಾರವಾಗಿದೆ.

● ಮಣಿಕಂಠ ತ್ರಿಶಂಕರ್, ಮೈಸೂರು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಉಸ್ತುವಾರಿ ಸಚಿವ ಸೋಮಶೇಖರ್ ನಗರ ಪ್ರದಕ್ಷಿಣೆ: ಸ್ವಚ್ಛತಾ ಕಾರ್ಯನಿರತ ಪೌರಕಾರ್ಮಿಕರ ಕಾರ್ಯ ವೈಖರಿಗೆ ಶ್ಲಾಘನೆ

ಪೌರಬಾಂಧವರೊಂದಿಗೆ ಚಹ ಸೇವಿಸಿ ಕುಶಲೋಪರಿ





ಮೈಸೂರು ನಗರದ ಸ್ವಚ್ಛತೆಗೆ ಪೌರಕಾರ್ಮಿಕರು ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ದಸರಾ ಹಿನ್ನೆಲೆಯಲ್ಲಿ ಮುಂಜಾನೆ 3 ಗಂಟೆಯವರೆಗೆ ಶ್ರಮಿಸುತ್ತಿದ್ದಾರೆ. ದಸರಾ ಉತ್ಸವದಲ್ಲಿ ಇವರ ಸೇವೆ ಪ್ರಶಂಸನೀಯ. ಹಾಗಾಗಿ ಇಂದು ನಗರ ಪ್ರದಕ್ಷಿಣೆ ಮಾಡಿ, ಸ್ವಚ್ಛತೆ ಪರಿಶೀಲಿಸುವುದರ ಜೊತೆಗೆ ಪೌರ ಕಾರ್ಮಿಕರ ಪರಿಶ್ರಮಕ್ಕೆ ಧನ್ಯವಾದ ತಿಳಿಸಿದ್ದೇವೆ.
-ಸಚಿವ ಎಸ್.ಟಿ.ಸೋಮಶೇಖರ್

ಮೈಸೂರು, ಸೆ.27(ಎಸ್‌ಬಿಡಿ)- ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ಮಂಗಳವಾರ ರಾತ್ರಿ 'ನಗರ ಪ್ರದಕ್ಷಿಣೆ' ನಡೆಸಿ, ಸ್ವಚ್ಛತಾ ಕಾರ್ಯವನ್ನು ಪರಿಶೀಲಿಸಿದರು.

ಅರಮನೆ ಮುಂಭಾಗದ ವೇದಿಕೆಯಲ್ಲಿ 2ನೇ ದಿನದ ಸಾಂಸ್ಕೃತಿಕ ಕಾರ್ಯಕ್ರಮ ಸಂಪನ್ನಗೊಂಡ ಬಳಿಕ ನಗರ ಪಾಲಿಕೆಯಿಂದ ರಾಜಮಾರ್ಗದುದ್ದಕ್ಕೂ ಸ್ವಚ್ಛತೆ ನಿರ್ವಹಣೆಯನ್ನು ಖುದ್ದು ಪರಿಶೀಲನೆ ನಡೆಸಿದರು. ಆಯುರ್ವೇದ ಆಸ್ಪತ್ರೆ ವೃತ್ತ, ಹೈವೇ ವೃತ್ತ, ಮಿಲೇನಿಯಂ ವೃತ್ತದ ಸುತ್ತಮುತ್ತ ಸ್ವಚ್ಛತೆಯಲ್ಲಿ ನಿರತರಾಗಿದ್ದ ಪೌರಕಾರ್ಮಿಕರೊಂದಿಗೆ ಮಾತನಾಡಿ, ಅವರ ಕುಂದುಕೊರತೆ ಆಲಿಸಿದರಲ್ಲದೆ ದಸರಾ ಯಶಸ್ಸಿಗೆ ನಿಮ್ಮ ಸಹಕಾರ ಬಹಳ ಮುಖ್ಯ ಎಂದು ಪ್ರಶಂಸಿಸಿದರು. ರಸ್ತೆ ಸ್ವಚ್ಛಗೊಳಿಸುವ ವಾಹನದ ಕಾರ್ಯ ನಿರ್ವಹಣೆ ಬಗ್ಗೆಯೂ ಇದೇ ವೇಳೆ ಮಾಹಿತಿ ಪಡೆದುಕೊಂಡರು.

ಪೌರ ಬಂಧುಗಳೊಂದಿಗೆ ಚಹಾ: ಹೈವೇ ವೃತ್ತದಲ್ಲಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದ ಪೌರ ಕಾರ್ಮಿಕರು, ದಿಢೀರ್ ಭೇಟಿ ನೀಡಿದ ಸಚಿವ ಎಸ್.ಟಿ.ಸೋಮಶೇಖರ್ ಅವರ ಬಳಿ ಹೋಗಿ ನಮಸ್ಕರಿಸಿದರು. ಪ್ರತಿವಂದನೆ ತಿಳಿಸಿದ ಸಚಿವರು, ಕೆಲ ಕಾಲ ಅವರೊಂದಿಗೆ ಮಾತನಾಡಿದರು. ಇದೇ ವೇಳೆ ವೃತ್ತದ ಬಳಿಯಿರುವ ಹೋಟೆಲ್ ಹೊರಾಂಗಣದಲ್ಲಿ ಪೌರ ಕಾರ್ಮಿಕರೊಂದಿಗೆ ಚಹಾ ಸೇವಿಸಿ, ಕುಶಲೋಪರಿ ನಡೆಸಿದರು.

ಆರೋಗ್ಯ ಮೇಳಕ್ಕೆ ಭೇಟಿ: ನಗರ ಪ್ರದಕ್ಷಿಣೆ ವೇಳೆ ಸಚಿವರು ಆಹಾರ ಮೇಳಕ್ಕೂ ಭೇಟಿ ನೀಡಿ, ಒಂದು ಸುತ್ತು ಹಾಕಿದರು. ರಾತ್ರಿ 11 ಗಂಟೆಯಾಗಿದ್ದರೂ ಅಲ್ಲಿ ಜನದಟ್ಟಣೆ ಇರುವುದನ್ನು ಕಂಡು ಆಶ್ಚರ್ಯ ಭಾವದಿಂದಲೇ ಆಹಾರ ಮೇಳದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಆಗಾಗ್ಗೆ ಸೂಕ್ತ ರೀತಿಯಲ್ಲಿ ತ್ಯಾಜ್ಯ ವಿಲೇವಾರಿಗೆ ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

25 ಸಾವಿರ ಮಂದಿ ಭೇಟಿ: ಈ ವೇಳೆ ಕಸ ವಿಲೇವಾರಿ ಬಗ್ಗೆ ಸಚಿವರಿಗೆ ವಿವರಿಸಿದ ಅಧಿಕಾರಿಗಳು, ಆಹಾರ ಮೇಳ ಆಯೋಜಿಸಿರುವ ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ಲಲಿತ ಮಹಲ್ ಹೋಟೆಲ್ ಸಮೀಪದ ಮೈದಾನದಲ್ಲಿ ಸ್ವಚ್ಛತೆ ನಿರ್ವಹಣೆ ಜೊತೆಗೆ ಕಸ ವಿಲೇವಾರಿಗೂ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಇಂದು ಸುಮಾರು 25 ಸಾವಿರ ಜನ ಆಹಾರ ಮೇಳಕ್ಕೆ ಭೇಟಿ ನೀಡಿದ್ದಾರೆ ಎಂದು ತಿಳಿಸಿದರು.

ಮೇಯರ್ ಎಂ.ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷ ಅಪ್ಪಣ್ಣ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮುಖಂಡರಾದ ಮೈ.ವಿ.ರವಿಶಂಕರ್, ಮಹೇಶ್, ಕುಸ್ತಿ ಉಪಸಮಿತಿ ಅಧ್ಯಕ್ಷ ದೇವರಾಜು, ಪಾಲಿಕೆ ಆರೋಗ್ಯಾಧಿಕಾರಿ ಡಾ.ನಾಗರಾಜು ಸೇರಿದಂತೆ ಅನೇಕ ಮುಖಂಡರು ಹಾಗೂ ಅಧಿಕಾರಿಗಳು ಸಚಿವರ ಜೊತೆಯಲ್ಲಿದ್ದರು.

ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ನಗರದ ಹೃದಯ ಭಾಗದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿದ್ದು, ಪೌರ ಕಾರ್ಮಿಕರನ್ನು ಪಾಳಿಯಲ್ಲಿ ನಿಯೋಜಿಸಲಾಗಿದೆ. ದಸರಾ ಕಾರ್ಯಕ್ರಮಗಳು ಹಾಗೂ ದೀಪಾಲಂಕಾರ ವೀಕ್ಷಣೆಗೆ ಜನ ಅಪಾರ ಸಂಖ್ಯೆಯಲ್ಲಿ ಆಗಮಿಸುವುದರಿಂದ ಅರಮನೆ ಸುತ್ತಮುತ್ತ, ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸ್ತೆ, ಅಶೋಕ ರಸ್ತೆ ಇನ್ನಿತರ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ತ್ಯಾಜ್ಯ ಉತ್ಪತ್ತಿಯಾಗುವುದರಿಂದ ಈ ಸ್ಥಳಗಳಲ್ಲಿ ನಿರಂತರವಾಗಿ ಸ್ವಚ್ಛತಾ ಕಾರ್ಯ ನಡೆಸಲಾಗುತ್ತಿದೆ.

ದಾರಿಪುರ, ಜಯಪುರದಲ್ಲಿ ನಾಳೆ ಗ್ರಾಮೀಣ ದಸರಾ ಉತ್ಸವ

ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಸಿದ್ಧತೆ



ಮೈಸೂರು, ಸೆ.27(ಎಂಕೆ)- ಮೈಸೂರು ದಸರಾ ಮಹೋತ್ಸವದ ಅಂಗವಾಗಿ ತಾಲೂಕಿನ ದಾರಿಪುರ ಹಾಗೂ ಜಯಪುರ ಗ್ರಾಮದಲ್ಲಿ ಸೆ.29ರಂದು 'ಗ್ರಾಮೀಣ ದಸರಾ' ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 9 ಗಂಟೆಗೆ ದಾರಿಪುರ ಗ್ರಾಮದ ದೇವಸ್ಥಾನದಿಂದ ಸುಮಾರು 2 ಕಿ.ಮೀ ಅದ್ಧೂರಿ ಮೆರವಣಿಗೆ ಸಾಗಲಿದ್ದು, ಸರ್ಕಾರದ ವಿವಿಧ ಯೋಜನೆಗಳ 25 ಸ್ತಬ್ಧ ಚಿತ್ರ, 10ಕ್ಕೂ ಹೆಚ್ಚು ಸಾಂಸ್ಕೃತಿಕ ಕಲಾ ತಂಡಗಳು ಭಾಗವಹಿಸಲಿವೆ. ನಂತರ ಬೆಳಿಗ್ಗೆ 10 ಗಂಟೆಗೆ ಜಯಪುರ ಗ್ರಾಮದ ಗುಜ್ಜಮ್ಮ ದೇವಸ್ಥಾನದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮವನ್ನು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಉದ್ಘಾಟಿಸಲಿದ್ದು, ಸಂಸದರಾದ ಪ್ರತಾಪ್ ಸಿಂಹ ಹಾಗೂ ಶಾಸಕರು, ಮುಖಂಡರು ಉಪಸ್ಥಿತರಿರಲಿದ್ದಾರೆ.

ಈ ವೇಳೆ ಗ್ರಾಮೀಣ ಕ್ರೀಡಾಕೂಟದಲ್ಲಿ ಭಾಗವಹಿಸಿ, ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಗುತ್ತದೆ. ನಾರಾಯಣಸ್ವಾಮಿ ದೇವಸ್ಥಾನದ ಆವರಣದಲ್ಲಿ ನುರಿತ ವೈದ್ಯರಿಂದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ, ಪಶುಸಂಗೋಪನೆ ಇಲಾಖೆಯಿಂದ ಉಚಿತ ಜಾನುವಾರು ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಮಾರಮ್ಮನ ದೇವಸ್ಥಾನದ ಆವರಣದಲ್ಲಿ ವಿವಿಧ ಇಲಾಖೆಗಳಿಂದ ದೊರಕುವ ಸರ್ಕಾರಿ ಸವಲತ್ತುಗಳ ಮಾಹಿತಿ ಕೇಂದ್ರ ಇರಲಿದೆ.

ದಸರಾ ಗಜಪಡೆ, ಅಶ್ವಪಡೆ ಬಾಗಿ: ಗ್ರಾಮೀಣ ದಸರಾವನ್ನು ಇನ್ನಷ್ಟು ಅದ್ಧೂರಿಯಾಗಿ ಆಚರಣೆ ಮಾಡುವ ಉದ್ದೇಶದಿಂದ ದಸರಾ ಆನೆಗಳು ಹಾಗೂ ಕುದುರೆಗಳನ್ನು ಕಳುಹಿಸಿಕೊಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದ್ದು, ಕಳುಹಿಸಿ ಕೊಡುವುದಾಗಿ ಭರವಸೆ ನೀಡಿದ್ದಾರೆ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಮೈಸೂರು ಅರಮನೆ ಆವರಣದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಿನ್ನೆಯಷ್ಟೇ ಗ್ರಾಮೀಣ ದಸರಾ ಆಚರಣೆ ಸಂಬಂಧ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದ್ದು, ಪೂರ್ವ ಸಿದ್ಧತೆ ಕುರಿತು ಚರ್ಚಿಸಲಾಗಿದೆ. ಗ್ರಾಮೀಣ ದಸರಾವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಪ್ರತಿಯೊಬ್ಬರು ಭಾಗವಹಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಆಹಾರ ಮೇಳದ ವಿವಿಧ ಸ್ಪರ್ಧೆಗಳ ಸದ್ದೇ ಇಲ್ಲ

ಸಾರ್ವಜನಿಕರ ಬೇಸರ



ಸಂಗ್ರಹ ಚಿತ್ರ

ಮೈಸೂರು, ಸೆ.27(ಜಿಎ)-ಆಹಾರ ಮೇಳದ ವಿವಿಧ ಸ್ಪರ್ಧೆಗಳ ಪಟ್ಟಿ ಇನ್ನೂ ಸಿದ್ಧಗೊಂಡಿಲ್ಲ. ಅಧಿಕಾರಿಗಳು ಅದರ ಬಗ್ಗೆ ಮಾಹಿತಿಯೇ ಇಲ್ಲದವರಂತೆ ವರ್ತಿಸುತ್ತಿದ್ದಾರೆ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಆಹಾರ ಮೇಳದ ವಿವಿಧ ಸ್ಪರ್ಧೆಗಳ ದಿನಾಂಕವನ್ನು ಸದ್ಯದಲ್ಲಿಯೇ ತಿಳಿಸುತ್ತೇವೆ. ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರಿಗೆ ಸ್ಥಳದಲ್ಲಿಯೇ ಪ್ರವೇಶ ನೀಡಬೇಕು ಎಂಬ ಚಿಂತನೆಗಳು ನಡೆಯುತ್ತಿವೆ.
- ಕುಮುದಾ ಶರತ್, ಕಾರ್ಯಾಧ್ಯಕ್ಷೆ, ಆಹಾರ ಮೇಳ ಉಪಸಮಿತಿ,

ಮೈಸೂರು ದಸರಾ ಮಹೋತ್ಸವ ಆರಂಭವಾಗಿ ಎರಡು ದಿನಗಳು ಕಳೆದು ಹೋಗಿದೆ. ಆದರೆ ಅನೇಕ ಕಾರ್ಯಕ್ರಮಗಳ ಪಟ್ಟಿ ಇನ್ನೂ ಅಂತಿಮವಾಗಿಲ್ಲ. ಅದರಂತೆ ಆಹಾರ ಮೇಳದಲ್ಲಿ ನಡೆಯುವ ವಿವಿಧ ಸ್ಪರ್ಧೆಯ ಪಟ್ಟಿ, ಸಮಯವನ್ನು ನಿಗದಿ ಮಾಡಲು ಇನ್ನೂ ಚರ್ಚೆ ನಡೆದಿದೆ.

ದಸರಾದಲ್ಲಿ ಕುಸ್ತಿ, ವಸ್ತು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ, ದೀಪಾಲಂಕಾರ ಸೇರಿದಂತೆ ಅನೇಕ ಕಾರ್ಯಕ್ರಮಗಳ ಆರಂಭಕ್ಕೂ ಮುನ್ನ ಸಂಬಂಧ ಪಟ್ಟ ಉಪಸಮಿತಿ ಅಧಿಕಾರಿಗಳು ಪತ್ರಿಕಾ ಗೋಷ್ಠಿ ಅಥವಾ ಪ್ರಕಟಣೆ ನೀಡುವುದು ವಾಡಿಕೆ. ಆದರೆ, ಈ ಬಾರಿ ಅದೆಲ್ಲವೂ ಬದಲಾಗಿದ್ದು, ಕಾರ್ಯಕ್ರಮಕ್ಕೆ ಒಂದು ದಿನ ಬಾಕಿ ಇರುವಂತೆ ಕಾರ್ಯಕ್ರಮಗಳ ಮಾಹಿತಿ ನೀಡುವುದು, ಅಗತ್ಯವಿದ್ದರೆ ಪರಿಷ್ಕೃತಗೊಳಿಸುವುದರಲ್ಲೇ ಅಧಿಕಾರಿಗಳು ನಿರತರಾಗಿದ್ದಾರೆ.

ಆಹಾರ ಮೇಳದಲ್ಲಿ ಮಳಿಗೆ ಹೊರತುಪಡಿಸಿದಂತೆ ಸ್ಥಳೀಯ ಹಾಗೂ ಹೊರಗಿನ ವಿವಿಧ ಕಲಾವಿದರಿಂದ ಕಾರ್ಯಕ್ರಮಗಳು ಪ್ರತಿ ನಿತ್ಯವೂ ಜರುಗುತ್ತಿವೆ. ಇದರೊಟ್ಟಿಗೆ ಸಾರ್ವಜನಿಕರಿಗೆ ನಾಟಿ ಕೋಳಿ ಸಾರು ಮತ್ತು ಮುದ್ದೆ, ಇಡ್ಲಿ, ಪೂರಿ,ಪಾನಿಪೂರಿ ಸೇರಿದಂತೆ ವಿವಿಧ ಆಹಾರ ಪದಾರ್ಥಗಳ ತಿನ್ನುವ ಸ್ಪರ್ಧೆಗಳು ನಡೆಯಬೇಕಿತ್ತು. ಮತ್ತೊಂದೆಡೆ ಮಹಿಳೆಯರಿಗಾಗಿ ನಿಗದಿತ ಸಮಯದಲ್ಲಿ ಒಂದು ತಿನಿಸನ್ನು ತಯಾರಿಸುವ ಸ್ಪರ್ಧೆ, ಬೆಂಕಿ ಬಳಸದೆ ಮಾಡುವ ಅಡುಗೆ ಸ್ಪರ್ಧೆ ಹೀಗೆ ಅನೇಕ ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದರು.

ಈ ಬಾರಿಯೂ 8 ದಿನಗಳ ಆಹಾರ ಮೇಳದಲ್ಲಿ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ರಾಜ್ಯದ ವಿವಿಧ ಕಲಾವಿದರಿಂದ ವೇದಿಕೆ ಕಾರ್ಯಕ್ರಮಗಳು ನಡೆಯುತ್ತಿವೆ. ಈಗಾಗಲೇ ಎರಡು ದಿನಗಳು ಪೂರ್ಣಗೊಂಡಿದ್ದು, ಸಾರ್ವಜನಿಕರು ಕಾತರದಿಂದ ಕಾಯುತ್ತಿರುವ ವಿವಿಧ ಸ್ಪರ್ಧೆಗಳ ಪಟ್ಟಿ ಮತ್ತು ದಿನಾಂಕ ಇನ್ನೂ ನಿಗದಿಯಾಗಿಲ್ಲ.

ವಿವಿಧ ವೇದಿಕೆಗಳಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು: ಸಂಗೀತಾಸಕ್ತರ ಸಂಭ್ರಮ





ಮೈಸೂರು, ಸೆ.27(ಎಸ್‌ಪಿಎನ್)- ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ವಿವಿಧ ವೇದಿಕೆಯಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ದಸರಾ ಉತ್ಸವಕ್ಕೆ ವಿಶೇಷ ಸಾಂಸ್ಕೃತಿಕ ಮೆರಗು ನೀಡುತ್ತಿವೆ.

ಜಗನ್ಮೋಹನಾ ಅರಮನೆ: ದಸರಾ ಸಾಂಸ್ಕೃತಿಕ ಉಪ ಸಮಿತಿ ವತಿಯಿಂದ ಆಯೋಜಿಸಿರುವ ಮಂಡ್ಯ ಜಿಲ್ಲೆಯ ಕಲಾವಿದರಾದ ಎಂ.ಎ.ಹರೀಶ್ ಕುಮಾರ್, ಜಯಶ್ರೀ, ಅಂಜನ ಅವರಿಂದ ಸ್ಯಾಕ್ಸೊಫೋನ್, ಬೆಂಗಳೂರು ಕಲಾವಿದೆ ರೇಖಾರಾಜು ಅವರಿಂದ ಮೋಹಿನಿ ಆಟ್ಟಂ, ಬೆಂಗಳೂರಿನ ಡಾ.ಜ್ಯೋತ್ಸ್ನ ಶ್ರೀಕಾಂತ್ ಅವರು ವಯೋಲಿನ್ ವಾದನ, ಬೆಂಗಳೂರಿನ ಪಂಡಿತ್ ಹೆಗ್ಗಾರ ಅನಂತ ಹೆಗಡೆ ಅವರಿಂದ ಹಿಂದೂಸ್ತಾನಿ ಸಂಗೀತ ಕೇಳುಗರ ಮಂತ್ರ ಮುಗ್ಧರಾಗಿಸಿತು.

ಕಲಾಮಂದಿರ: ದಕ್ಷಿಣ ಕನ್ನಡ ಜಿಲ್ಲೆಯ ವಿದ್ವಾನ್ ಪಿ.ಕೆ.ಗಣೇಶ್ ನಲ್ಲಿಕಟ್ಟೆ ಅವರಿಂದ ಸ್ಯಾಕ್ಸೊಫೋನ್, ಹಾಸನ ಜಿಲ್ಲೆಯ ಕುಮಾರ ಕಟ್ಟೆ ಬೆಳಗುಲಿ ಕಲಾವಿದರಿಂದ ಜಾನಪದ ಗಾಯನ, ಬೆಂಗಳೂರಿನ ಸಂಸ್ಕೃತಿ ಕೇಶವನ್ ಅವರಿಂದ ಭರತನಾಟ್ಯ, ದಕ್ಷಿಣ ಕನ್ನಡ ಜಿಲ್ಲೆಯ ಪಟ್ಲಾ ಸತೀಶ್ ಶೆಟ್ಟಿ, ಸುಬ್ರಹ್ಮಣ್ಯ, ಪಾವಂಜೆ ಅಳೆ ಅಂಗಡಿ ಅವರಿಂದ ಯಕ್ಷಗಾನ ಪ್ರದರ್ಶಿಸಿದರು.

ರಂಗಾಯಣ: ಪಿ.ಲಂಕೇಶ್ ರಚಿತ, ರಂಗಕರ್ಮಿ ನಾಗಾರ್ಜುನ ಆರಾಧ್ಯ ನಿರ್ದೇಶನದ, ಮೈಸೂರಿನ ಆಯಾಮ ರಂಗತಂಡದ ಕಲಾವಿದರು ಅಭಿನಯಿಸಿರುವ 'ಪೋಲೀಸರಿದ್ದಾರೆ ಎಚ್ಚರಿಕೆ' ನಾಟಕ ಪ್ರದರ್ಶನಗೊಂಡಿತು.

ಕಿರು ರಂಗಮಂದಿರ(ಕಲಾಮಂದಿರ ಆವರಣ): ಹುಬ್ಬಳ್ಳಿಯ ಶಶಿಕಲಾ ದಾನಿ ಮತ್ತು ತಂಡದಿಂದ 'ಜಲತರಂಗ' ನಾಟಕ, ಬೆಂಗಳೂರಿನ ಬಿಎಂಟಿಸಿ ಸಾಂಸ್ಕೃತಿಕ ಕಲಾಕುಟೀರ ಕಲಾತಂಡದಿಂದ 'ಯಮನ ಸೋಲು' ನಾಟಕ, ಹಾಸನದ ರಂಗಹೃದಯ ಅವರಿಂದ 'ತಾಯಿಯಾಗುವುದೆಂದರೆ' ಏಕವ್ಯಕ್ತಿ ನಾಟಕ ಪ್ರದರ್ಶನಗೊಂಡಿತು.

ಗಾನಭಾರತಿ: ಮೈಸೂರಿನ ರಂಗ ಕಲಾವಿದ ಹೆಚ್.ಪಿ.ನಾಗೇಂದ್ರಪ್ರಸಾದ್ ಮತ್ತು ತಂಡದವರಿಂದ ರಂಗಗೀತೆ ಗಾಯನ, ಕೊಪ್ಪಳ ಜಿಲ್ಲೆಯ ಮರೆಪ್ಪ ಮರಪ್ಪ ದಾಸರ ಮತ್ತು ತಂಡದಿಂದ ತತ್ವಪದ ಗಾಯನ, ಪುತ್ತೂರಿನ ನೃತ್ಯೋಪಾಸನ ಕಲಾಕೇಂದ್ರದ ವಿದುಷಿ ಶಾಲಿನಿ ಆತ್ಮಭೂಷಣ್ ತಂಡದ ಕಲಾವಿದರು 'ನೃತ್ಯೋಂ ಭರಟನಾಟ್ಯ', ಮೈಸೂರಿನ ಡಾ.ಎಸ್.ಗೀತಾ ತಂಡದವರಿಂದ 'ರಾಮ ಭಜನ್' ನಡೆಸಿಕೊಟ್ಟರು.

ನಾದಬ್ರಹ್ಮ ಸಂಗೀತಸಭಾ: ತಿ.ನರಸೀಪುರದ ಮಹೇಶ್ ಭಾರತಿ ಮತ್ತು ತಂಡದಿಂದ ಕಂಸಾಳೆ, ಶಿವಮೊಗ್ಗದ ಉಮಾಯಾನ ಹರ್ಲಾಪುರ ಮತ್ತು ತಂಡದವರಿಂದ ಕರ್ನಾಟಕ ಸಂಗೀತ ಗಾಯನ, ಮೈಸೂರಿನ ಎಚ್.ಎಂ. ಕಾರ್ತಿಕ್ ಕುಮಾರ್ ಅವರಿಂದ ಭರತನಾಟ್ಯ, ಮೈಸೂರಿನ ರಮೇಶ್ ತಾಯೂರು ಅವರಿಂದ ಜನಪದ ಗೀತೆಗಳ ಗಾಯನ ಅನಾವರಣಗೊಂಡಿತು.

ಚಿಕ್ಕಗಡಿಯಾರ ವೇದಿಕೆ: ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲೂಕಿನ ಪಕ್ಕಿ ಮಹಿಳಾ ಕಲಾ ತಂಡದ ಜಾನಕಿ ಮತ್ತು ತಂಡದಿಂದ ಬುಡಕಟ್ಟು ನೃತ್ಯ, ಸರ್.ಎಂ.ವಿ ಕಲಾ ವೃಂದದಿಂದ ಹಳೆಯ ಮಧುರಗೀತೆಗಳನ್ನು ಗಾಯಕ ಜಿ.ಕೆ.ಶಂಕರ್ ಮತ್ತು ಇತರರು ಹಾಡಿದರು. ಮೈಸೂರಿನ ಕಾತ್ಯಾಯಿನಿ ಅವರಿಂದ ಜನಪದ ಗಾಯನ, ಮೈಸೂರಿನ ಡಿ. ಪೂರ್ಣಿತ ಅವರಿಂದ ಸುಗಮ ಸಂಗೀತ ನಡೆಸಿಕೊಟ್ಟರು.

ಪುರಭವನ ವೇದಿಕೆ: ಮೈಸೂರಿನ ದಿವ್ಯಶ್ರೀ ಕನ್ನಡ ಕಲಾಸಂಘದ ಗೋಪಾಲ ರಾವ್ ತಂಡದವರಿಂದ 'ನನಗಂಡ ಬಲು ಭಂಡ' ಸಾಮಾಜಿಕ ನಾಟಕ, ಬೆಂಗಳೂರಿನ ನಂದಕಿಶೋರ ಇತರೆ ಕಲಾವಿದರಿಂದ 'ಭೀಮ ವಿಜಯ' ಪೌರಾಣಿಕ ನಾಟಕ, ಆಲ್ತಾಪ ರಂಗಮಿತ್ರ ಕಲಾತಂಡದಿಂದ 'ಖಿರೋಕರ್' ಸಾಮಾಜಿಕ ನಾಟಕ ಪ್ರದರ್ಶನಗೊಂಡಿತು.

ಗೆಲುವಿಗಾಗಿ ಪೈಲ್ವಾನರ ಭಾರೀ ಸೆಣಸಾಟ



ಮೈಸೂರು, ಸೆ.27(ಎಂಕೆ)- ನಗರದ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ 'ನಾಡ ಕುಸ್ತಿ' ಅಖಾಡ ರಂಗೇರಿದ್ದು, ಗೆಲುವಿಗಾಗಿ ಪೈಲ್ವಾನರು ಭಾರೀ ಪೈಪೋಟಿ ನಡೆಸುತ್ತಿದ್ದಾರೆ. ಮಂಗಳವಾರ 45 ಜೋಡಿಗಳ ನಡುವೆ ನಡೆದ ನಾಡ ಕುಸ್ತಿಯಲ್ಲಿ ಧೂಳೆಬ್ಬಿಸಿದ ಪೈಲ್ವಾನರು ಗೆಲುವಿಗಾಗಿ ತಂತ್ರ-ಪ್ರತಿತಂತ್ರಗಳನ್ನು ಹೂಡಿ ಸೆಣಸಾಡಿದರು. ಅಖಾಡದಲ್ಲಿ ಮೈಗೆಲ್ಲಾ ಮಣ್ಣು ಬಳಿದುಕೊಂಡು ತೊಡೆ ತಟ್ಟಿದ ಕುಸ್ತಿ ಕಲಿಗಳ ಸಾಹಸ ಅಭಿಮಾನಿಗಳಲ್ಲಿ ರೋಚಕತೆ ಮೂಡಿಸಿತು.

ಗೆಲುವು: ಮೈಸೂರಿನ ಅಶೋಕಪುರಂನ ಪೈ.ರವಿ ವಿರುದ್ಧ ಗಂಜಾಂನ ಪೈ.ತೇಜಸ್, ಕಾಮನಕೆರೆ ಹುಂಡಿ ಪೈ.ರಾಜೇಂದ್ರ ಕುಮಾರ್ ವಿರುದ್ಧ ಕಡಕೋಳ ಪೈ.ಅರುಣ್, ಕನಕಪುರ ಪೈ.ನಾಗ ವಿರುದ್ಧ ಗೋಳೂರು ಪೈ.ಮಹೇಶ್ ಧೂಮ್, ಹುಲ್ಲಹಳ್ಳಿ ಪೈ.ಸತೀಶ್ ವಿರುದ್ಧ ಮೆಲ್ಲಹಳ್ಳಿ ಪೈ.ಪ್ರಮೋದ್, ನಾಗನಹಳ್ಳಿ ಪೈ.ಆರ್.ಯುವರಾಜ್ ವಿರುದ್ಧ ಕಳಲೆ ಪೈ.ಎಂ.ಮಹದೇವಸ್ವಾಮಿ, ಮೆಲ್ಲಹಳ್ಳಿ ಪೈ.ಚಿನ್ನು ವಿರುದ್ಧ ಕಳಲೆ ಪೈ.ಮಹದೇವಸ್ವಾಮಿ, ಹುಲ್ಲಹಳ್ಳಿ ಪೈ.ಚಾಮರಾಜ ನಾಯಕ್ ವಿರುದ್ಧ ಕಡಕೋಳದ ಪೈ.ಕೆಂಪರಾಜು, ಆಯರಹಳ್ಳಿ ಪೈ.ನಾಗರಾಜು ವಿರುದ್ಧ ಬನ್ನೂರಿನ ಪೈ.ಯಶವಂತನಾಯಕ, ಕುಶಾಲಯ್ಯನ ಗರಡಿ ಪೈ.ಲೋಚನ್‌ಗೌಡ ವಿರುದ್ಧ ಪಡುವಾರಹಳ್ಳಿ ಪೈ.ಎಂ.ಚಿರಂತ್ ವಿಜಯ ಸಾಧಿಸಿದರು. ಉಳಿದ ಬಹುತೇಕ ಪಂದ್ಯಗಳು ಸಮವಾದವು.

ಮಹಿಳಾ ಮತ್ತು ಮಕ್ಕಳ ದಸರಾಗೆ ಚಾಲನೆ

ಮಹಿಳಾ ಸ್ವಸಹಾಯ ಸಂಘಗಳಿಗೂ ಶೂನ್ಯ ಬಡ್ಡಿ ಸಾಲ ಸೌಲಭ್ಯ

● ಉಸ್ತುವಾರಿ ಸಚಿವ ಸೋಮಶೇಖರ್ ಭರವಸೆ ● ಮುಂದಿನ ಬಜೆಟ್‌ನಲ್ಲಿ ಪೂರಕ ಕಾರ್ಯಕ್ರಮದ ವಿಶ್ವಾಸ





ಕೆಂಪು ವಸ್ತ್ರ ಕಂಡು ಭಯವಾಯ್ತು

ಮಹಿಳಾ ದಸರಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಮಹಿಳೆಯರೆಲ್ಲರೂ ಕೆಂಪು ಬಣ್ಣದ ವಸ್ತ್ರ ಧರಿಸಿರುವುದು ಕಂಡು ನನಗೂ, ಶಾಸಕ ಎಲ್.ನಾಗೇಂದ್ರ ಅವರಿಗೂ ಭಯವಾಯ್ತು. ದಸರಾದ ಎರಡನೇ ದಿನ ಕೆಂಪು ಬಣ್ಣದ ವಸ್ತ್ರ ಧರಿಸಬೇಕೆಂಬ ನಿಯಮವಿದೆ ಎಂದು ನಂತರ ತಿಳಿಯಿತು. ಇದರಿಂದ ಎಲ್ಲಾ ಕಡೆ ಕೆಂಪು ರಾರಾಜಿಸುತ್ತಿದೆ. ಮಹಿಳೆಯರು ಅಡಿಯಿಂದ ಮುಡಿಯವರೆಗೆ ಕೆಂಪಾಗಿಯೇ ಕಾಣುತ್ತಿದ್ದಾರೆ. ಎಲ್ಲರೂ ಐಶ್ವರ್ಯ ರೈನಂತೆ ಇದ್ದಾರೆ ! ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಹಾಸ್ಯ ಚಟಾಕಿ ಹಾರಿಸಿದರು.

ಮೈಸೂರು, ಸೆ27(ಎಂಟಿವೈ)- ರಾಜ್ಯ ಸರ್ಕಾರ ಮಹಿಳಾ ಸ್ವಸಹಾಯ ಸಂಘಗಳಿಗೂ ಬಡ್ಡಿ ರಹಿತ ಸಾಲ ನೀಡಲು ಕಾರ್ಯಕ್ರಮ ರೂಪಿಸಲು ಚಿಂತಿಸಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿರುವ 5 ದಿನಗಳ ಮಹಿಳಾ ಮತ್ತು ಮಕ್ಕಳ ದಸರಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಮಹಿಳಾ ಮತ್ತು ಮಕ್ಕಳ ಸಬಲೀಕರಣಕ್ಕೆ ಹಲವು ಕಾರ್ಯಕ್ರಮ ರೂಪಿಸಿದೆ. ಹಲವಾರು ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಮುಖ್ಯಮಂತ್ರಿಗಳು ಸಾಕಷ್ಟು ಕಾರ್ಯಕ್ರಮವನ್ನು ಈಗಾಗಲೇ ಘೋಷಣೆ ಮಾಡಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೂಲಕ ಅರ್ಹರಿಗೆ ಸೌಲಭ್ಯ ತಲುಪಿಸಲು ಕ್ರಮ ಕೈಗೊಳ್ಳಲಾಗುವುದು. ಪ್ರಸಕ್ತ ಬಜೆಟ್‌ನಲ್ಲಿ ರೂ. 33 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 24 ಸಾವಿರ ಕೋಟಿ ರೂ. ಸಾಲ ಸೌಲಭ್ಯ ನೀಡಲು ಕ್ರಮ ಕೈಗೊಂಡಿರುವಂತೆ, ಮುಂದಿನ ಬಾರಿ ಮಹಿಳಾ ಸಂಘಗಳಿಗೂ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಲು ಚಿಂತನೆ ನಡೆಸಲಾಗಿದೆ ಎಂದರು.

ಪ್ರೋಟೋಕಾಲ್ ಅನುಸರಿಸಲಾಗಿದೆ: ನಾಡಹಬ್ಬ ದಸರಾ ಮಹೋತ್ಸವವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸಿದ್ದಾರೆ. ರಾಷ್ಟ್ರಪತಿಗಳು ಪಾಲ್ಗೊಂಡ ಕಾರ್ಯಕ್ರಮದ ವೇದಿಕೆಯಲ್ಲಿ ಯಾರೆಲ್ಲಾ ಇರಬೇಕು ಎಂದು ನಿರ್ಧರಿಸುವುದು ರಾಷ್ಟ್ರಪತಿ ಭವನವೇ ಆಗಿದೆ. ಹಾಗಾಗಿ ಮೈಸೂರನ್ನು ಪ್ರತಿನಿಧಿಸುವ ಪ್ರತಿನಿಧಿಗಳಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ದೊರೆಯಲಿಲ್ಲ ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಇಲಾಖೆ ವತಿಯಿಂದ ಮಹಿಳಾ ಮತ್ತು ಮಕ್ಕಳ ದಸರಾದಲ್ಲಿ 31 ಕಾರ್ಯಕ್ರಮ ಆಯೋಜಿಸಲಾಗಿದೆ ಎಲ್ಲಾ ವರ್ಗದವರಿಗೂ ಕಾರ್ಯಕ್ರಮ ರೂಪಿಸಲಾಗಿದ್ದು, ಅದರ ಸದುಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಮಹಿಳಾ ದಸರಾ ಉಪಸಮಿತಿಯ ವಿಶೇಷಾಧಿಕಾರಿಗಳು ಹಾಗೂ ಜಿ.ಪಂ ಉಪಕಾರ್ಯದರ್ಶಿ ಪ್ರೇಮ್‌ಕುಮಾರ್ ಮಾತನಾಡಿ, ಮಹಿಳಾ ಸ್ವಸಹಾಯ ಸಂಘಗಳು ಉತ್ಪಾದಿಸುವ ವಸ್ತುಗಳ ಮಾರಾಟದ ಜೊತೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮಹಿಳಾ ದಸರಾದಲ್ಲಿ ವಸ್ತು ಪ್ರದರ್ಶನ ಆಯೋಜಿಸಲಾಗಿದ್ದು, 45 ಮಳಿಗೆ ತೆರೆಯಲಾಗಿದೆ. ಸೆ.27ರಿಂದ ಅ.1ರವರೆಗೆ ನಡೆಯುವ ಮಹಿಳಾ ಮತ್ತು ಮಕ್ಕಳ ದಸರಾದಲ್ಲಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ. ಮಹಿಳೆಯರು, ಅಂಗನವಾಡಿ ಕಾರ್ಯಕರ್ತರು, ಮಂಗಳಮುಖಿಯರು, ಮಕ್ಕಳಿಗೆ ವಿವಿಧ ಕಾರ್ಯಕ್ರಮ ಜರುಗಲಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ರೂಪ ಯೋಗೀಶ್, ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಅಧ್ಯಕ್ಷೆ ಸುನಂದಾ ರಾಜು, ಉಪಾಧ್ಯಕ್ಷೆ ಹೇಮಾ ನಂದೀಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಸವರಾಜ್, ಪಾಲಿಕೆ ಸದಸ್ಯೆ ಪ್ರಮಿಳಾ, ಉಪ ಸಮಿತಿಯ ಸದಸ್ಯರಾದ ರೇಣುಕಾ, ಕವಿತಾ ಕಾಳೆ, ರಾಘವೇಂದ್ರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದಿನಿಂದ ಶ್ರೀರಂಗಪಟ್ಟಣದಲ್ಲಿ ದಸರಾ ಮಹೋತ್ಸವ

ಮಂಡ್ಯ,ಸೆ.27– ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಶ್ರೀರಂಗಪಟ್ಟಣ ದಸರಾವನ್ನು ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 2 ರವರೆಗೆ ಹಮ್ಮಿಕೊಳ್ಳಲಾಗಿದೆ.

ಸೆಪ್ಟೆಂಬರ್ 28 ರಂದು ಮಧ್ಯಾಹ್ನ 2.15 ಗಂಟೆಗೆ ಕಿರಂಗೂರು ಬನ್ನಿ ಮಂಟಪದಲ್ಲಿ ನಂದಿ ಧ್ವಜ ಪೂಜೆ, ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಗೆ ಅಗ್ರಪೂಜೆ ಹಾಗೂ ಜಂಬೂಸವಾರಿ ಮೆರವಣಿಗೆಯೊಂದಿಗೆ ಪ್ರಾರಂಭವಾಗಲಿದೆ. ಕಾರ್ಯಕ್ರಮವನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಶ್ರೀ ಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಠದ ಪರಮ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಉದ್ಘಾಟಿಸಲಿದ್ದಾರೆ. ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ, ರೇಷ್ಮೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಡಾ.ಕೆ.ಸಿ.



ಸಾಂಸ್ಕೃತಿಕ ವೇದಿಕೆ ಪರಿಶೀಲಿಸಿದ ಶಾಸಕ ರವೀಂದ್ರ ಶ್ರೀಕಂಠಯ್ಯ.

ನಾರಾಯಣ ಗೌಡ, ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಮುಜರಾಯಿ ಹಾಗೂ ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಪಾಲ್ಗೊಳ್ಳಲಿದ್ದಾರೆ. ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದ ಶಾಸಕರು ಎ.ಎಸ್. ರವೀಂದ್ರ ಶ್ರೀಕಂಠಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸೆ.29 ರಂದು ಸಂಜೆ 6.30ಕ್ಕೆ ಶ್ರೀ ರಂಗನಾಥ ವೇದಿಕೆಯಲ್ಲಿ ಶ್ರೀರಂಗಪಟ್ಟಣ ದಸರಾ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ. ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಕಾರ್ಯಕ್ರಮವನ್ನು ಕಂದಾಯ ಸಚಿವ ಆರ್.ಅಶೋಕ್ ಉದ್ಘಾಟಿಸಲಿದ್ದಾರೆ. ಅಬಕಾರಿ ಸಚಿವ ಗೋಪಾಲಯ್ಯ ದಸರಾ ಕುರಿತು ಮಾತನಾಡಲಿದ್ದಾರೆ. ರೇಷ್ಮೆ, ಯುವ ಸಬಲೀಕರಣ ಹಾಗೂ ಕ್ರೀಡೆ ಸಚಿವ ಡಾ.ಕೆ.ಸಿ. ನಾರಾಯಣಗೌಡ, ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಮುಜರಾಯಿ ಹಾಗೂ ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಉಪಸ್ಥಿತರಿರುವರು. ಶಾಸಕ ಎ.ಎಸ್. ರವೀಂದ್ರ ಶ್ರೀಕಂಠಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಶ್ರೀರಂಗ ವೇದಿಕೆಯಲ್ಲಿ ಪ್ರತಿದಿನ ಸ್ಥಳೀಯ ಪ್ರತಿಭೆಗಳಿಂದ ಸಾಂಸ್ಕೃತಿಕ ಕಲಾ ಪ್ರದರ್ಶನ ಹಾಗೂ ಸಂಗೀತ ರಸ ಸಂಜೆಯಲ್ಲಿ ಖ್ಯಾತ ನಟ, ನಟಿಯರು, ಗಾಯಕ, ಗಾಯಕಿಯರಿಂದ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಶ್ರೀರಂಗಪಟ್ಟಣ ದಸರಾ ಬಗ್ಗೆ ಜಿಲ್ಲಾಡಳಿತ ನಿರ್ಲಕ್ಷ್ಯ

ಗಜಪಡೆ ಸ್ವಾಗತಿಸಲು ಬಾರದ ಅಧಿಕಾರಿಗಳು



ಶ್ರೀರಂಗಪಟ್ಟಣ, ಸೆ.27– ಶ್ರೀರಂಗಪಟ್ಟಣ ದಸರಾ ಮೆರವಣಿಗೆಗೆ ಜಿಲ್ಲಾಡಳಿತ ನಿರ್ಲಕ್ಷ್ಯ ತೋರಿದ್ದು, ಇಂದು ಆಗಮಿಸಿದ ಗಜಪಡೆಗಳನ್ನು ಸ್ವಾಗತಿಸಲು ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿಗಳು ಸೇರಿದಂತೆ ಜಿಲ್ಲಾಡಳಿತದ ಯಾವೊಬ್ಬ ಅಧಿಕಾರಿಗಳು ಬಾರದೇ ತಾತ್ಸಾರ ತೋರಿದ್ದು, ಶಾಸಕ ರವೀಂದ್ರ ಶ್ರೀಕಂಠಯ್ಯ ಸೇರಿದಂತೆ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದರು.

ದಸರಾ ಆಚರಣೆ ಸಂಬಂಧ ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜನಪ್ರತಿನಿಧಿಗಳ ನಡುವಿನ ಸಮನ್ವಯತೆ ಕೊರತೆಯಿಂದಾಗಿ ಈ ಬಾರಿಯ ಶ್ರೀರಂಗಪಟ್ಟಣ ದಸರಾ ಸಂಪೂರ್ಣವಾಗಿ ಗೊಂದಲಮಯವಾಗಿದೆ. ಇಲ್ಲಿನ ಜಿಲ್ಲಾಡಳಿತ 15 ದಿನಗಳ ನಂತರ ನಡೆಯುವ ಕುಂಬಮೇಳಕ್ಕೆ ಪ್ರಾಧಾನ್ಯತೆ ನೀಡುತ್ತಿದ್ದು, ಶ್ರೀರಂಗಪಟ್ಟಣ ದಸರಾ ಬಗ್ಗೆ ಕಾಳಜಿ ವಹಿಸುತ್ತಿಲ್ಲ ಎಂಬ ಆರೋಪಗಳ ನಡುವೆಯೇ, ಇಂದು ಗಜಪಡೆ ಸ್ವಾಗತಕ್ಕೆ ಯಾವೊಬ್ಬ ಅಧಿಕಾರಿದಲೂ ಬಾರದಿರುವುದು ಇದಕ್ಕೆ ಇಂಬು ನೀಡುವಂತಿತ್ತು.

ಗಜಪಡೆಗಳನ್ನು ಸ್ವಾಗತಿಸಲು ಯಾವೊಬ್ಬ ಜಿಲ್ಲಾ ಹಾಗೂ ತಾಲೂಕು ಮಟ್ಟದ ಪ್ರಮುಖ ಅಧಿಕಾರಿಗಳೂ ಬಂದಿಲ್ಲ. 5 ದಿನಗಳ ದಸರಾ ಕಾರ್ಯಕ್ರಮ ಆಚರಣೆ ಸಂಬಂಧ ನನಗೆ ಇದುವರೆಗೂ ಮಾಹಿತಿಯಿಲ್ಲ. ಗಜಪಡೆಗಳ ಆಗಮನದ ಸುದ್ದಿ ಯಾರಿಂದಲೂ ತಿಳಿಯದೆ ಸ್ವತಹ ನಾನೇ ಬಂದಿದ್ದೇನೆ. ಸೋಮವಾರ ನನ್ನ ಸ್ವ-ಹಿತಾಸಕ್ತಿಯೊಂದಿಗೆ ಕಾರ್ಯಕ್ರಮಗಳ ರೂಪು-ರೇಷೆಗಳ ಬಗ್ಗೆ ಅಧಿಕಾರಿಗಳ ಸಭೆ ನಡೆಸಿದ್ದೇನೆ. ಕಾರ್ಯಕ್ರಮಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದೆ. ಇದುವರೆವಿಗೂ ಅದರ ಬಗ್ಗೆ ಸ್ಪಷ್ಟ ಮಾಹಿತಿಯನ್ನೇ ನೀಡಿಲ್ಲ.

ಜಿಲ್ಲಾ ಉಸ್ತುವಾರಿ ಸಚಿವರಾದ ಗೋಪಾಲಯ್ಯ, ಸಚಿವ ನಾರಾಯಣಗೌಡ ಹಾಗೂ ಜಿಲ್ಲಾಡಳಿತ ದಸರಾ ಆಚರಣೆ ಸಂಬಂಧ ನನ್ನೊಂದಿಗೆ ಸಂಪರ್ಕವನ್ನೇ ಹೊಂದಿಲ್ಲ. ಸರ್ಕಾರ ಈ ಬಗ್ಗೆ ಏನು ಮಾಡುತ್ತಿದೆಯೋ ತಿಳಿಯದಂತಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಪಟ್ಟಿಯೂ ಇನ್ನೂ ಸಿದ್ಧವಾಗಿಲ್ಲ. ಸರ್ಕಾರದಿಂದ 50 ಲಕ್ಷ ರೂ. ಹಣವಷ್ಟೇ ಬಿಡುಗಡೆಗೊಂಡಿದ್ದು, ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳಿಂದ ಎಷ್ಟೆಷ್ಟು ಹಣ ಬರಲಿದೆ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿಯೇ ಇಲ್ಲ. ಜೊತೆಗೆ ಸರ್ಕಾರವೂ ಸಹ ಸರಿಯಾಗಿ ಸ್ಪಂದಿಸದ ಕಾರಣ 5 ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ಬದಲಿಗೆ 3 ದಿನಗಳಿಗೆ ಸೀಮಿತಗೊಳಿಸುವಂತೆಯೂ ಮನವಿ ಮಾಡಿದ್ದೇನೆ. ಇದ್ಯಾವುದರ ಬಗ್ಗೆಯೂ ಶಾಸಕನಾದ ನನಗೇ ಸರಿಯಾದ ಮಾಹಿತಿ ಲಭ್ಯವಾಗುತ್ತಿಲ್ಲ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಸಚಿವರು ಹಾಗೂ ಜಿಲ್ಲಾಡಳಿತದ ವಿರುದ್ಧ ಕಿಡಿಕಾರಿದರು.

ಇಂದು, ನಾಳೆ ನೀರು ಸರಬರಾಜಿನಲ್ಲಿ ವ್ಯತ್ಯಯ

ಮಂಡ್ಯ,ಸೆ.27– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆ ಅಡಿ ಶ್ರೀರಂಗಪಟ್ಟಣ ಸಮೀಪವಿರುವ ಮೂಲಸ್ಥಾವರದಲ್ಲಿ ತಾಂತ್ರಿಕ ದೋಷ ಉಂಟಾಗಿರುವ ಕಾರಣ ತುರ್ತು ದುರಸ್ಥಿ ಕಾಮಗಾರಿಯನ್ನು ಕೈಗೊಂಡಿರುವುದರಿಂದ ಸದರಿ ದಿನದಂದು ಮಂಡ್ಯ ನಗರಕ್ಕೆ ಪಂಪ್ ಮಾಡಲು ಸಾಧ್ಯವಾಗುವುದಿಲ್ಲ. ಮಂಡ್ಯ ನಗರದ ಸಾರ್ವಜನಿಕರಿಗೆ ಸೆಪ್ಟೆಂಬರ್ 28 ಮತ್ತು 29 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕನನೀಸ ಮತ್ತು ಒಚ ಮಂಡಳಿ ನಿರ್ವಹಣಾ ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದಿಚುಂಚನಗಿರಿ ಶ್ರೀ ಕ್ಷೇತ್ರಕ್ಕೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಸುರ್ಜೆವಾಲಾ ಭೇಟಿ



ನಾಗಮಂಗಲ, ಸೆ.27– ಭಾರತ ಜೋಡೋ ಪಾದಯಾತ್ರೆಯನ್ನು ಕೈಗೊಂಡಿರುವ ರಾಹುಲ್ ಗಾಂಧಿಯವರು ಸೆ. 30ರಂದು ಕರ್ನಾಟಕ ರಾಜ್ಯ ಗಡಿಯನ್ನು ಪ್ರವೇಶಿಸಿ, ಸೆ.7 ರಂದು ಆದಿಚುಂಚನಗಿರಿಗೆ ಆಗಮಿಸುವ ಹಿನ್ನೆಲೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ.ಶಿವಕುಮಾರ್ ಇಂದು ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗುಂಡ್ಲುಪೇಟೆ, ಮೈಸೂರು, ಶ್ರೀರಂಗಪಟ್ಟಣ, ಪಾಂಡವಪುರ ಮಾರ್ಗ ಸೆ.6 ರಂದು ನಾಗಮಂಗಲ ಕಲ್ಲು ದೇವನಹಳ್ಳಿ ಹತ್ತಿರ ಇರುವ ಕೇಂದ್ರೀಯ ವಿದ್ಯಾಲಯ ಪಂಚಕರ್ಮ ಆಯುರ್ವೇದ ಶಾಲಾ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಹೂಡಲಿದ್ದು, ಸೆ.7 ರಂದು ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ವಾಸ್ತವ್ಯದ ನಂತರ ತುಮಕೂರು ಜಿಲ್ಲೆಗೆ ಹೋಗಲಿದ್ದಾರೆ.

ರಾಹುಲ್ ಗಾಂಧಿಯವರು ವಾಸ್ತವ್ಯ ಹೂಡುವ ಸ್ಥಳ ಪರಿಶೀಲನೆ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸಿಂಗ್ ಸುರ್ಜೆವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಹಾಗೂ ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿ ಪೂರ್ವ ಸಿದ್ಧತೆಗಳ ಬಗ್ಗೆ ಶ್ರೀ ಕ್ಷೇತ್ರದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದ ನಾಥ ಮಹಾಸ್ವಾಮೀಜಿ ಯವರೊಂದಿಗೆ ಚರ್ಚಿಸಿದರು.

ಮೇಲುಕೋಟೆಯಲ್ಲಿ ನವರಾತ್ರಿ ಉತ್ಸವ



ವೇದಾಂತದೇಶಿಕರ 754ನೇ ತಿರುನಕ್ಷತ್ರ: ಮೇಲುಕೋಟೆಯಲ್ಲಿ ವೇದಾಂತ ದೇಶಿಕರ 754ನೇ ತಿರುನಕ್ಷತ್ರ ಮಹೋತ್ಸವ ಸಹ ಅ.5 ರಂದು ನಡೆಯಲಿದೆ. ತನ್ನಿಮಿತ್ತ ಧಾರ್ಮಿಕ ಕೈಂಕರ್ಯಗಳು ಸೆ.26ರಿಂದಲೇ ಆರಂಭವಾಗಿದೆ. ಹತ್ತು ದಿನಗಳ ಈ ಕೈಂಕರ್ಯದಲ್ಲಿ ದೇಶಿಕರ ಸನ್ನಿಧಿಯಲ್ಲಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ವಿಶೇಷ ಪಾರಾಯಣಗಳು ನಡೆಯಲಿದೆ. ಅ.5 ರಂದು ಕಲ್ಯಾಣಿಯಿಂದ ಪವಿತ್ರ ತೀರ್ಥ ತಂದು ದೇಶಿಕರ ದಿವ್ಯ ಮೂರ್ತಿಗೆ ಮಹಾಭಿಷೇಕ ನೆರವೇರಿಸಲಾಗುತ್ತದೆ. ಸಂಜೆ ರಾಮಾನುಜರು ಶ್ರೀದೇವಿ–ಭೂದೇವಿ ಸಮೇತನಾದ ಚೆಲುವನಾರಾಯಣಸ್ವಾಮಿಯವರೊಂದಿಗೆ ದೇಶಿಕರ ಉತ್ಸವ ನೆರವೇರಲಿದೆ

ಮೇಲುಕೋಟೆ, ಸೆ.27– ಇಲ್ಲಿನ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ಶರನ್ನವರಾತ್ರಿ ಮಹೋತ್ಸವ ಅ.4ರವರೆಗೆ ನಡೆಯಲಿದ್ದು ಕಲ್ಯಾಣ ನಾಯಕಿ ಅಮ್ಮನವರಿಗೆ ಪ್ರತಿದಿನ ದಂತಪಲ್ಲಕ್ಕಿ ಉತ್ಸವ ಹಾಗೂ ಬಂಗಾರದ ಆದಿಶೇಷ ವಾಹನೋತ್ಸವ ನೆರವೇರುತ್ತಿದೆ.

ನವರಾತ್ರಿ ಮಹೋತ್ಸವ 26ರಿಂದ ಆರಂಭವಾಗಿದ್ದು, ಮಂಗಳವಾರದ ವಾಹನೋತ್ಸವ ದಿವ್ಯಪ್ರಬಂಧ ಪಾರಾಯಣ ಮತ್ತು ಮಂಗಳವಾದ್ಯದೊಂದಿಗೆ ನೆರವೇರಿತು.

ಶರನ್ನವರಾತ್ರಿಯ ಅಂಗವಾಗಿ ವಿಜಯ ದಶಮಿವರೆಗೆ ಪ್ರತಿದಿನ ಬೆಳಗ್ಗೆ 11 ಗಂಟೆಯ ವೇಳೆಗೆ ಸರ್ವಾಲಂಕಾರ ಭೂಷಿತೆಯಾದ ಮಹಾಲಕ್ಷ್ಮಿ ಕಲ್ಯಾಣ ನಾಯಕಿಗೆ ನವರಾತ್ರಿ ಮಂಟಪದಿಂದ ಬಂಗಾರದ ಆದಿಶೇಷ ವಾಹನೋತ್ಸವ ನಡೆಯಲಿದೆ. ರಾತ್ರಿ ಅಮ್ಮನವರ ಸನ್ನಿಧಿಯಲ್ಲಿ ಜಾಳಿಗೆ ಪೂಜೆ ಸಹ ಅನೂಚಾನ ಪರಂಪರೆಯಂತೆ ನೆರವೇರುತ್ತಿದೆ ಅ.4 ರಂದು ಮಹಾನವಮಿ ಪ್ರಯುಕ್ತ ದೇವಿಗೆ ವಿಶೇಷ ಆರಾಧನೆಗಳು ಸ್ವಾಮಿಯ ಆಯುಧಗಳಿಗೆ ಕಲ್ಯಾಣಿ ತೀರದಲ್ಲಿ ಪೂಜೆ ನಡೆಯಲಿದೆ.

ಮಂಡ್ಯದಲ್ಲಿ ಪಿಎಫ್ಐ ಜಿಲ್ಲಾಧ್ಯಕ್ಷ ಸೇರಿದಂತೆ ನಾಲ್ವರ ಬಂಧನ

ಅಕ್ಟೋಬರ್ 6ರ ವರೆಗೆ ನ್ಯಾಯಾಂಗ ಬಂಧನ, ಬೆಂಬಲಿಗರ ಪ್ರತಿಭಟನೆ

ಮಂಡ್ಯ,ಸೆ.27– ಸಮಾಜದ ಸ್ವಾಸ್ಥ್ಯ ಕೆಡಿಸಿ, ಅಶಾಂತಿ ವಾತಾವರಣ ಸೃಷ್ಟಿ ಆರೋಪದ ಮೇಲೆ ಮಂಡ್ಯ ಜಿಲ್ಲಾ ಪಿಎಫ್ಐ ಘಟಕದ ಅಧ್ಯಕ್ಷ ಸಯ್ಯದ್ ಇರ್ಫಾನ್‌ನನ್ನು ಮಂಡ್ಯ ಪೂರ್ವ ಪೊಲೀಸರು ಬಂಧಿಸಿದ್ದಾರೆ. ಈತನ ಬಂಧನಕ್ಕೆ ಅಡ್ಡಿಪಡಿಸಿ ಪ್ರತಿಭಟನೆ ನಡೆಸಿದ ಇತರ ಮೂವರನ್ನು ಸಹ ಬಂಧಿಸಿದ್ದು, ಎಲ್ಲಾ ನಾಲ್ಕು ಮಂದಿ ಆರೋಪಿಗಳಿಗೆ ಅ.6ರ ವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ ಎಂದು ಎಸ್ಪಿ ಯತೀಶ್ ತಿಳಿಸಿದ್ದಾರೆ.

ಮಂಗಳವಾರ ಮುಂಜಾನೆ 4 ಗಂಟೆಗೆ ಮಂಡ್ಯ ನಗರದ ಗುತ್ತಲು ಬಡಾವಣೆಯ ಇರ್ಫಾನ್ ಮನೆ ಮೇಲೆ ದಾಳಿ ನಡೆಸಿದ ಪೊಲೀಸರು, ಆತನ ಮನೆ ಪರಿಶೀಲನೆಯನ್ನು ನಡೆಸಿ ಬಳಿಕ ಹೆಚ್ಚಿನ ವಿಚಾರಣೆಗಾಗಿ ಆತನನ್ನು ಬಂಧಿಸಿದರು. ಬಳಿಕ ಆತನನ್ನು ತಾಲೂಕು ದಂಡಾಧಿಕಾರಿ ಕುಂಞ ಅಹಮದ್ ಅವರ ಮನೆಗೆ ಹಾಜರುಪಡಿಸಿದವ ಪೊಲೀಸರು, ವಿಚಾರಣೆ ಬಳಿಕ ಆರೋಪಿ ಇರ್ಫಾನ್‌ನನ್ನು ಅ.6ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಇರ್ಫಾನ್ ಬಂಧನಕ್ಕೆ ಅಡ್ಡಿಪಡಿಸಿದ ಪಿಎಫ್ಐ ಕಾರ್ಯಕರ್ತರು, ತಾಲೂಕು ದಂಡಾಧಿಕಾರಿ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲು ಮುಂದಾದರು. ಮಂಡ್ಯದ ಅಫಿಷಿಯಲ್ ಕ್ವಾಟ್ರಸ್ ನಲ್ಲಿರುವ ತಾಲೂಕು ದಂಡಾಧಿಕಾರಿ ಕುಂಞ ಅಹಮದ್ ನಿವಾಸದ ಬಳಿ ಪ್ರತಿಭಟನೆ ಆರಂಭಿಸುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಪೊಲೀಸರು, ತಾಲೂಕು ದಂಡಾಧಿಕಾರಿ ನಿವಾಸದ ಬಳಿ ಬಿಗಿ ಪೊಲೀಸ್ ಭದ್ರತೆ ಒದಗಿಸಿದರು. ಜೊತೆಗೆ ತಾಲೂಕು ದಂಡಾಧಿಕಾರಿ ನಿವಾಸ ಸಂಪರ್ಕಿಸುವ ರಸ್ತೆ ಬಂದ್ ಮಾಡಲಾಯಿತು. ಈ ವೇಳೆ ಇರ್ಫಾನ್ ಬಂಧನಕ್ಕೆ ಅಡ್ಡಿಪಡಿಸಿ, ಪ್ರತಿಭಟನೆ ಮಾಡಿದ ಹಿನ್ನೆಲೆಯಲ್ಲಿ ಪಿಎಫ್ಐನ ದಾದಾ ಪೀರ್, ಮುಖ್ತರ್, ಅಜ್ಗರ್‌ನನ್ನು ಪೊಲೀಸರು ಬಂಧಿಸಿದರು. ಮತ್ತೆ ಪೂರ್ವ ಪೊಲೀಸ್ ಠಾಣೆ ಬಳಿ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಪೊಲೀಸರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರು ದೌರ್ಜನ್ಯ ನಡೆಸುತ್ತಿದ್ದಾರೆ. ನಾವು ಹೆದರುವುದಿಲ್ಲ, ಕಾನೂನಿನ ಮೇಲೆ ಗೌರವ ಇದೆ. ಬೆಳಗಿನ ಜಾವ ಬಂಧಿಸುವಂತಹ ಕೆಲಸ ಏನು ಮಾಡಿಲ್ಲ ಪೊಲೀಸರು ನೋಟಿಸ್ ಕೊಡದೆ, ಏಕಾಏಕಿ ಬಂಧಿಸಿದ್ದಾರೆ. ನಾವು ಈ ದೇಶ ಬಿಟ್ಟು ಎಲ್ಲೂ ಹೋಗಲ್ಲ. ನಾವು ಇಲ್ಲೆ ಹುಟ್ಟಿದ್ದೀವಿ, ಇಲ್ಲೇ ಸಾಯುತ್ತೇವೆ. ನಮ್ಮ ಸಂಘಟನೆಯನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಉಗ್ರಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಇದಕ್ಕೆ ಸೊಪ್ಪು ಹಾಕದ ಪೂರ್ವ ಠಾಣಾ ಪೊಲೀಸರು ಮತ್ತೆ ತಾಲೂಕು ದಂಡಾಧಿಕಾರಿ ಕಚೇರಿಗೆ ಬಂಧಿತ ದಾದಾ ಪೀರ್, ಮುಖ್ತರ್ ಅಹಮದ್, ಇಬ್ರಾಹಿಂರನ್ನು ಹಾಜರು ಪಡಿಸಿದರು. ತಾಲೂಕು ದಂಡಾಧಿಕಾರಿ ಕುಂಞ ಅಹಮದ್ ಉಳಿದ ಮೂವರು ಆರೋಪಿಗಳಿಗೂ ಅ.6ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಆದೇಶ ನೀಡಿದರು ಎಂದು ಎಸ್ಪಿ ತಿಳಿಸಿದರು.

ತಿ.ನರಸೀಪುರ ಟಿಎಪಿಸಿಎಂಎಸ್ ಅವ್ಯವಹಾರ ಆರೋಪ ನಿರಾಧಾರ



ತಿ.ನರಸೀಪುರ, ಸೆ.27– ಪಟ್ಟಣದ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಆವರಣದಲ್ಲಿ ಮಳೆ ನೀರು ನಿಂತು ಮಳಿಗೆ ಬಾಡಿಗೆದಾರರಿಗೆ ತೀವ್ರ ತೊಂದರೆ ಉಂಟಾದ ಹಿನ್ನೆಲೆಯಲ್ಲಿ ನಮ್ಮ ಒತ್ತಾಯದ ಮೇರೆಗೆ ಆಡಳಿತ ಮಂಡಳಿಯವರು ಮಣ್ಣು ಹಾಕಿಸಿ ಮಳಿಗೆದಾರರ ಹಿತ ಕಾಪಾಡಿದ್ದಾರೆ ಎಂದು ಕಸಬಾ ಪಿಎಸಿಎಸ್ ನಿರ್ದೇಶಕ ಅಂಗಡಿ ಶೇಖರ್ ತಿಳಿಸಿದರು.

ಟಿಎಪಿಸಿಎಂಎಸ್ ಆಡಳಿತ ಮಂಡಳಿ ಭಾರೀ ಅವ್ಯವಹಾರ ನಡೆಸಿದೆ ಎಂದು ಯಾಚೇನಹಳ್ಳಿ ಪಿಎಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ ಆರೋಪಿಸಿದ್ದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಂಕರೇಗೌಡರ ಆರೋಪ ನಿರಾಧಾರ. ಅಲ್ಲದೇ ಇತ್ತೀಚೆಗೆ ಬಿದ್ದ ಭಾರೀ ಮಳೆಯಿಂದ ಮಾರುಕಟ್ಟೆ ಆವರಣ ನೀರಿನಿಂದ ಜಲಾವೃತಗೊಂಡು, ನೀರು ಅಂಗಡಿ ಮಳಿಗೆಗೆಲ್ಲಾ ನುಗ್ಗುತ್ತಿದ್ದರಿಂದ ನಾವು ಇದನ್ನು ಸರಿಪಡಿಸುವಂತೆ ಆಡಳಿತ ಮಂಡಳಿಗೆ ಒತ್ತಡ ಹೇರಿದ ಹಿನ್ನೆಲೆಯಲ್ಲಿ ಮಣ್ಣು ಹಾಕಿಸಿ ಸಮತಟ್ಟು ಮಾಡಿದ್ದಾರೆ. ಮಣ್ಣು ಹೂಡಿಸಲು 32 ಲಕ್ಷ ರೂ. ಎಸ್ಟಿಮೇಟ್ ಮಾಡಲಾಗಿತ್ತಾದರೂ 18 ಲಕ್ಷ ರೂ. ವೆಚ್ಚದಲ್ಲೇ ಮಣ್ಣು ಹೊಡಿಸಿ ಮಳೆಯಿಂದ ಶಿಥಿಲ ಗೊಂಡಿದ್ದ ಮಳಿಗೆ ರಕ್ಷಣೆ ಮಾಡಲಾಗಿದೆ ಎಂದರು.

ಶಂಕರೇಗೌಡರು ಇಲಾಖೆ ಅನುಮತಿ ಪಡೆಯದೇ, ಪತ್ರಿಕೆ ಜಾಹೀರಾತು ನೀಡದೇ 18 ಲಕ್ಷ ರೂ. ಡ್ರಾ ಮಾಡಿದ್ದಾರೆ ಎಂದು ಆರೋಪಿಸಿರುವುದು ಸರಿಯಲ್ಲ. ಇದು ತುರ್ತಾಗಿ ಆಗಬೇಕಾದ ಕೆಲಸವಾದ್ದರಿಂದ ಆಡಳಿತ ಮಂಡಳಿ ಸಮಯಕ್ಕೆ ಸರಿಯಾದ ನಿರ್ಧಾರ ಕೈಗೊಂಡು ಮಳಿಗೆದಾರರ ಹಿತ ಕಾಪಾಡಿದೆ. ಶಂಕರೇಗೌಡರು ರಾಜಕೀಯ ಉದ್ದೇಶಕ್ಕಾಗಿ ಆರೋಪ ಮಾಡಿದ್ದು, ಮಣ್ಣು ಹೂಡಿಸಿರುವುದರಿಂದ ಶಿಥಿಲಗೊಂಡ ಕಟ್ಟಡ ಉಳಿದುಕೊಂಡಿದೆ. ಆಡಳಿತ ಮಂಡಳಿ ನಡೆಯಿಂದ ಸಂಘಕ್ಕೆ ಲಾಭವೇ ಆಗಿದೆ ಎಂದು ಹೇಳುವ ಮೂಲಕ ಆಡಳಿತ ಮಂಡಳಿಯವರ ನಡೆಯನ್ನು ಸಮರ್ಥಿಸಿಕೊಂಡರು.

ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಅಂಗಡಿ ಬಾಡಿಗೆದಾರರಾದ ನಾಗೇಶ್, ಸುಬ್ರಹ್ಮಣ್ಯ, ಖದೀರ್, ಚಾಟ್ಸ್ ಕಿರಣ್ ಹಾಜರಿದ್ದರು.

ಶಿಕ್ಷಕರು ಆದರ್ಶ ಶಿಕ್ಷಕರಾಗಿರಬೇಕು

ಎಂಎಲ್‌ಸಿ ಮಂಜೇಗೌಡರ ಕಿವಿಮಾತು



ಯಳಂದೂರು, ಸೆ. 27– ಶಿಕ್ಷಕರು ಭವ್ಯ ಭಾರತವನ್ನು ಕಟ್ಟುವ ವಿದ್ಯಾರ್ಥಿಗಳನ್ನು ತಯಾರು ಮಾಡುವುದರ ಜೊತೆಗೆ ಆದರ್ಶ ಶಿಕ್ಷಕರಾಗಿರಬೇಕೆಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಶಿಕ್ಷಕರಿಗೆ ಕಿವಿಮಾತು ಹೇಳಿದರು.

ಯಳಂದೂರು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ವತಿಯಿಂದ ವಡಗೆರೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ವಿದ್ಯಾರ್ಥಿಗಳಂತೆ ನಿರಂತರವಾಗಿ ಓದುವುದರ ಜೊತೆಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡು ವಿದ್ಯಾರ್ಥಿಗಳಿಗೆ ಜ್ಞಾನ ಧಾರೆ ಎರೆಯಬೇಕು. ಪಠ್ಯದ ಜೊತೆಗೆ ಸಾಮಾನ್ಯ ಜ್ಞಾನದ ಬಗ್ಗೆಯೂ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಶಿಕ್ಷಕರು, ಚೆನ್ನಾಗಿ ಪಾಠ ಮಾಡಿದರೆ ಮಕ್ಕಳ ಮನಸ್ಸಿನಲ್ಲಿ ಯಾವಾಗಲೂ ಉಳಿಯುತ್ತಿರಿ ಎಂದರು.

ಶಿಕ್ಷಕರ ಕೆಲಸ ಸುಲಭವಲ್ಲ. ಬದ್ಧತೆ ಹಾಗೂ ಮಹಾನ್ ಶಕ್ತಿ ಇದೆ. ಎಲ್ಲಾ ಶಿಕ್ಷಕರು ತಮ್ಮ ಶಿಷ್ಯಂದಿರು ಉನ್ನತ ಮಟ್ಟದ ಸ್ಥಾನಕ್ಕೆ ಹೋಗಬೇಕೆಂದು ಆಸೆ ಇಟ್ಟುಕೊಂಡಿರುತ್ತಾರೆ. ಶಿಕ್ಷಕರು ಮಾಡುವ ಕೆಲಸ ಪ್ರತಿಯೊಂದು ಮಗುವಿನ ಮೇಲೂ ಪರಿಣಾಮ ಬೀರುತ್ತದೆ. ಸರ್ಕಾರ ಶಾಲಾ ಕಾಲೇಜುಗಳಲ್ಲಿ ಮೊಬೈಲ್ ಅನ್ನು ನಿಷೇಧ ಮಾಡಬೇಕು. ಶಿಕ್ಷಕರ ಬೇಡಿಕೆಗಳನ್ನು ಈಡೇರಿಸಬೇಕು. ನಾನು ಸದಾ ನಿಮ್ಮ ಪರಿವಾಗಿರುತ್ತೇನೆ ಎಂದಲ್ಲದೆ ಎಲ್ಲರಿಗೂ ಶಿಕ್ಷಕರ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು.

ಸಮಾರಂಭದಲ್ಲಿ ಶಾಸಕ ಎನ್. ಮಹೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಗ್ರಾ.ಪಂ. ಅಧ್ಯಕ್ಷೆ ಶಿವನಂಜಮ್ಮ, ಡಯಟ್ ಪ್ರಾಂಶುಪಾಲ ಹೆಚ್.ಕೆ. ಪಾಂಡು, ಉಪನ್ಯಾಸಕ ಬಿ.ಇ. ರಮೇಶ್, ನಿವೃತ್ತ ಪ್ರಾಧ್ಯಾಪಕ ಮಹಾದೇವ ಶಂಕನಪುರ, ಕ್ಷೇತ್ರಶಿಕ್ಷಣಾಧಿಕಾರಿ, ಕೆ. ಶಾಂತರಾಜು, ಬಿ.ಆರ್.ಸಿ. ಬಿ.ಎನ್. ನಾಗೇಂದ್ರ ಎಸ್. ಲಿಂಗರಾಜು ಮತ್ತಿತರರು ಉಪಸ್ಥಿತರಿದ್ದರು.

ಪಿಎಫ್ಐ ಜಿಲ್ಲಾಧ್ಯಕ್ಷ, ಕಾರ್ಯದರ್ಶಿ ಬಂಧನ

ಚಾಮರಾಜನಗರ, ಸೆ.27– ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ(ಪಿಎಫ್ಐ) ಸಂಘಟನೆಯ ಜಿಲ್ಲಾ ಅಧ್ಯಕ್ಷ ಕಫೀಲ್ ಅಹಮ್ಮದ್ ಹಾಗೂ ಜಿಲ್ಲಾ ಕಾರ್ಯದರ್ಶಿ ಸುಹೇಬ್ ಖಾನ್ ಅವರನ್ನು ಮಂಗಳವಾರ ಬೆಳಗಿನ ಜಾವ ಪೊಲೀಸರು ಬಂಧಿಸಿದ್ದಾರೆ.



ಎರಡು ತಂಡಗಳಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಇವರಿಬ್ಬರನ್ನು ನಗರದ ಅವರ ನಿವಾಸಗಳಲ್ಲಿ ವಶಕ್ಕೆ ಪಡೆದರು. ನಂತರ ಅವರನ್ನು ಭಾರೀ ಬಿಗಿ ಭದ್ರತೆಯಲ್ಲಿ ಜಿಲ್ಲಾ ಎಸ್ಪಿ ಕಚೇರಿಗೆ ಕರೆತರಲಾಯಿತು. ನಂತರ ಪೊಲೀಸ್ ಭದ್ರತೆಯಲ್ಲಿ ಅವರಿಬ್ಬರನ್ನು ತಹಸೀಲ್ದಾರ್ ಅವರ ಮುಂದೆ ಹಾಜರು ಪಡಿಸಲಾಯಿತು. ಈ ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಇಬ್ಬರನ್ನು ಬಂಧಿಸಲಾಗಿದೆ. ಬಂಧಿತರ ವಿರುದ್ಧ ಐಪಿಸಿ ಸೆಕ್ಷನ್ 107 ಹಾಗೂ ಸಿಆರ್‌ಪಿಸಿ ಸೆಕ್ಷನ್ 151ರ ಅಡಿ ಪ್ರಕರಣ ದಾಖಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಅವರು ತಿಳಿಸಿದರು.



ನಂಜನಗೂಡು ತಾಲೂಕಿನ ಹುಲ್ಲಹಳ್ಳಿಯಲ್ಲಿ ಮಂಗಳವಾರ ಜ್ಞಾನ ಸಂಜೀವಿನಿ ಶಾಲೆ ಆಟದ ಮೈದಾನದಲ್ಲಿ ಹೋಬಳಿ ಮಟ್ಟದ ದಸರಾ ಕ್ರೀಡಾಕೂಟ ನಡೆಯಿತು. ಈ ವೇಳೆ ಗ್ರಾಪಂ ಅಧ್ಯಕ್ಷ ಮಹೇಶ್, ಉಪ ತಹಸೀಲ್ದಾರ್ ಶಿವಕುಮಾರ್, ರಾಜಸ್ವ ನಿರೀಕ್ಷಕ ಹರೀಶ್, ಗ್ರಾಪಂ ಸದಸ್ಯ ಮಲ್ಲಿಕಾರ್ಜುನ, ಪ್ರಭಾರ ಪಿಡಿಓ ಅರುಣ್‌ಕುಮಾರ್, ಗ್ರಾಮ ಲೆಕ್ಕಾಧಿಕಾರಿ ನಾಗರಾಜು, ಹರ್ಷಿತಾ, ದೀಪಗೌತಮಿ, ಶಿಕ್ಷಕರಾದ ದೇವರಾಜ್, ಶ್ರೀನಿವಾಸ್, ಗಣೇಶ, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮದ ಮುಖಂಡರಾದ ಮಹೇಶ್, ಮಹದೇವಸ್ವಾಮಿ, ಕಿಶೋರ್ ಇನ್ನಿತರರಿದ್ದರು.

ಹನಗೋಡಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ



ಹುಣಸೂರು, ಸೆ.27– ತಾಲೂಕಿನ ಹನಗೋಡು ಗ್ರಾಮದಲ್ಲಿ ಗಣೇಶ್ ಕುಮಾರಸ್ವಾಮಿ ಸೇವಾ ಬಳಗ ಮತ್ತು ಕಾವೇರಿ ಆಸ್ಪತ್ರೆ ಹುಣಸೂರು, ಹನಗೋಡು ಗ್ರಾಪಂ, ಕೊಯಮತ್ತೂರು ಅರವಿಂದ್ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ ಸುಮಾರು 300 ಮಂದಿ ತಪಾಸಣೆಗೆ ಒಳಪಟ್ಟರು. ಈ ವೇಳೆ ಬಿಜೆಪಿ ಮುಖಂಡ ಗಣೇಶ್ ಕುಮಾರಸ್ವಾಮಿ, ಹನ ಗೋಡು ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ, ನೇರಳಕುಪ್ಪೆ ಗ್ರಾಪಂ ಅಧ್ಯಕ್ಷ ಉದಯಣ್ಣ, ತಟ್ಟೆಕೆರೆ ಗ್ರಾಪಂ ಅಧ್ಯಕ್ಷ ದೇವರಾಜ್, ಕಾವೇರಿ ಹಾಸ್ಪಿಟಲ್ ವೈದ್ಯ ಲೋಹಿತ್, ಗ್ರಾಪಂ ಉಪಾಧ್ಯಕ್ಷರಾದ ಶಿವಣ್ಣ, ಬೋರೇಗೌಡ, ಸೋಮಣ್ಣ, ಗಣಪತಿ, ಪ್ರಭಾಕರ್ ಹೆಗಡೆ, ಬಿಜೆಪಿ ತಾಲೂಕು ಅಧ್ಯಕ್ಷ ನಾಗಣ್ಣಗೌಡ, ಬಿಜೆಪಿ ಕಾರ್ಯಕರ್ತ ರಾದ ಮಂಜುನಾಥ್, ನಾಗಣ್ಣ, ಪ್ರಾಣೇಶ್ ಶೆಟ್ಟಿ, ಜವರೇಗೌಡ, ಸಂತೋಷ್, ತಾಲೂಕು ಅಧ್ಯಕ್ಷ ಗೌಡ್ರು ಸುನೀಲ್, ಅಶೋಕ್, ವೆಂಕಟರಮಣ, ಮಾ.ಮುದ್ದುರಾಮ್, ರವಿಕುಮಾರ್, ರಮೇಶಣ್ಣ ಬಾಬಣ್ಣ ಚೇತನ್ ಸೇರಿದಂತೆ ಇನ್ನಿತರರಿದ್ದರು.

ಚಾಮುಂಡೇಶ್ವರಿ ದರ್ಶನ ಪಡೆದು ಬೆಂಗಳೂರಿಗೆ ವಾಪಾಸ್ಸಾಗುತ್ತಿದ್ದಾಗ ಘೋರ ಅಫಘಾತ : ಯುವಕ ಸಾವು, ಯುವತಿಗೆ ಗಾಯ

ಮೈಸೂರು, ಸೆ.27– ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದರ್ಶನ ಪಡೆದು ಬೆಂಗಳೂರಿಗೆ ಹಿಂದಿರುಗುವ ವೇಳೆ ಮೈಸೂರು–ಬೆಂಗಳೂರು ರಸ್ತೆಯಲ್ಲಿ ಕಳಸ್ತವಾಡಿ ಬಳಿ ಸಂಭವಿಸಿದ ಅಪಘಾತದಲ್ಲಿ ಬೆಂಗಳೂರು ಮೂಲದ ಸಾಫ್ಟ್‌ವೇರ್ ಇಂಜಿನಿಯರ್ ಭರತ್ ಪ್ರಸಾದ್ ಸ್ಥಳದಲ್ಲೇ ಸಾವನ್ನಪ್ಪಿದ್ದು ಭಾವಿ ಪತ್ನಿ ಚೈತ್ರ ಗಾಯಗೊಂಡು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಚಾಮುಂಡೇಶ್ವರಿ ದರ್ಶನ ಪಡೆದು ಜೋಡಿಯೂ ಬೆಂಗಳೂರಿಗೆ ತಮ್ಮ ಕಾರ್ (ಕೆಎ01 ಎಂಡ್ಬ್ಯೂ 8839) ನಲ್ಲಿ ಹಿಂದಿರುಗುವಾಗ ಎದುರಿನಿಂದ ಬಂದ ಕೆ.ಎಸ್.ಆರ್.ಟಿ.ಸಿ.ಬಸ್ ಬ್ಯಾರಿಕೇಡ್ ದಾಟಿ ಬಂದು ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರು ಆಂಜನೇಯ ದೇವಸ್ಥಾನದ ಹಿಂಭಾಗದ ಗೋಡೆ ಅಪ್ಪಳಿಸಿದೆ. ಭರತ್ ಪ್ರಸಾದ್ ಹಾಗೂ ಚೈತ್ರ ಮದುವೆ ಫಿಕ್ಸ್ ಆಗಿತ್ತು. ದಿನಾಂಕ ನಿಗದಿಯಾಗ ಬೇಕಿತ್ತಷ್ಟೇ ಎಂದು ಮೂಲಗಳು ತಿಳಿಸಿವೆ. ಎನ್.ಆರ್.ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವಿಧೆಡೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಸರಗೂರು, ಸೆ.27– ತಾಲೂಕಿನ ಪ್ರತಿ ಗ್ರಾಮಗಳಿಗೂ ಮೂಲ ಸೌಲಭ್ಯ ಒದಗಿಸುವ ಮೂಲಕ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ತಾಲೂಕಿನ ದಡದಹಳ್ಳಿಯಲ್ಲಿ ಸಿಸಿ ರಸ್ತೆ, ಸರಗೂರು ಪಟ್ಟಣದಲ್ಲಿ ನಾಲೆ ಸಿಸಿ ಲೈನಿಂಗ್ ಕಾಮಗಾರಿ, ದೇವಲಾಪುರದಲ್ಲಿ ಆದರ್ಶ ಗ್ರಾಮ ಯೋಜನೆಯಡಿ ರಸ್ತೆ, ದೇವಲಾಪುರಹುಂಡಿಯಲ್ಲಿ ಸಿಸಿ ರಸ್ತೆ ಹಾಗೂ ಹಿರೇಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದ್ದಾಗ ಕೇಂದ್ರದಿಂದ ಅನುದಾನ ತಂದು ಗ್ರಾಮಗಳ ಅಭಿವೃದ್ಧಿಗೆ ಅನುದಾನ ನೀಡು ತ್ತಿದ್ದರು. ಆದರೆ, ಬಿಜೆಪಿ ಸರ್ಕಾರ ಸಮರ್ಪಕ ವಾಗಿ ಅನುದಾನ ನೀಡುತ್ತಿಲ್ಲ ಎಂದು ಆರೋ ಪಿಸಿದ ಅವರು, ಮುಂದಿನ ದಿನಗಳಲ್ಲಿ ತಾಲೂಕಿನ ಪ್ರತಿ ಕೆರೆಗಳಿಗೆ ಏತ ನೀರಾವರಿ ಮೂಲಕ ನೀರು ತುಂಬಿಸುವ ಕೆಲಸ ಮಾಡಲಾಗುವುದು ಎಂದರು. ನೂತನ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡುತ್ತಿಲ್ಲ. ಈಗಾಗಲೇ ಅರ್ಧಕ್ಕೆ ನಿಂತಿರುವ ಸಮುದಾಯ ಭವನಗಳ ಕಾಮಗಾರಿ ಪೂರ್ಣಗೊಳಿಸಲು 800 ಕೋಟಿ ರೂ. ಹಣ ಅವಶ್ಯಕತೆ ಇದೆ. ಗ್ರಾಮ ದಲ್ಲಿ ಮುರ್ನಾಕು ತಿಂಗಳಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗುವುದು ಎಂದರು.

ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ ಮಾತನಾಡಿದರು. ಈ ವೇಳೆ ಪಪಂ ಸದಸ್ಯರಾದ ಹೇಮಾವತಿ, ಚಲುವ ಕೃಷ್ಣ, ಗ್ರಾಪಂ ಅಧ್ಯಕ್ಷ ಜಯರಾಜು, ಸದಸ್ಯರಾದ ಕರೀಗೌಡ, ನಾಗರಾಜು, ಗೀತಾ, ರುಕ್ಮಿಣಿ, ಜಿಪಂ ಸದಸ್ಯರಾದ ಪಿ.ರವಿ, ಕೆ.ಚಿಕ್ಕವೀರ ನಾಯಕ, ಬಸವರಾಜು, ಪಿಡಿಓ ಚನ್ನಪ್ಪ, ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಮುಖಂಡರಾದ ನಾಗರಾಜು, ಪಾಪ, ಚಿನ್ನಸ್ವಾಮಿ, ನಟರಾಜು, ಶಾಂತಮಲ್ಲಪ್ಪ, ನೀರಾವರಿ ಇಲಾಖೆ ಉಷಾ, ಮಧುಸೂದನ್, ಸಿದ್ದರಾಜು ಸೇರಿದಂತೆ ಇನ್ನಿತರರಿದ್ದರು.

ನಕಲಿ ಚಿನ್ನ ನೀಡಿ ಅಸಲಿ ಚಿನ್ನ ಎಗರಿಸಿದ್ದ ಖತರ್ನಾಕ್ ಕಳ್ಳಿಯರ ಬಂಧನ

ಕೊಳ್ಳೇಗಾಲ ಉಪವಿಭಾಗ ಪೊಲೀಸರ ಕಾರ್ಯಾಚರಣೆ, 71 ಗ್ರಾಂ ಚಿನ್ನಾಭರಣ ವಶ

ಕೊಳ್ಳೇಗಾಲ, ಸೆ.27–ನಕಲಿ ಚಿನ್ನ ನೀಡಿ ಆಭರಣದ ಅಂಗಡಿಯಿಂದ ಅಸಲಿ ಚಿನ್ನಾಭರಣ ಎಗರಿಸಿ ನಾಪತ್ತೆಯಾಗಿದ್ದ ಇಬ್ಬರು ಖತರ್‌ನಾಕ್ ಕಳ್ಳಿಯರನ್ನು ಬಂಧಿಸುವಲ್ಲಿ ಕೊಳ್ಳೇಗಾಲ ಉಪವಿಭಾಗ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ತಮಿಳುನಾಡು ಸೇಲಂ ಜಿಲ್ಲೆಯ ವಸಂತಾ(34), ಧನಂ(26) ಬಂಧಿತ ಆರೋಪಿಗಳು. ಇವರಿಂದ ಸುಮಾರು 71.605 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ ಕಾರ್ಯಾಚರಣೆ ಪಾಲ್ಗೊಂಡು ಕಳ್ಳರ ಬಂಧಿಸುವಲ್ಲಿ ಯಶಸ್ವಿಯಾದ ಪೊಲೀಸರಿಗೆ ನಗದು ಬಹುಮಾನ ನೀಡುವುದಾಗಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್ಪಿ ಟಿ.ಪಿ.ಶಿವಕುಮಾರ್ ಘೋಷಿಸಿದ್ದಾರೆ.

ನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ವೈವಿಧ್ಯ ಜುವೆಲ್ಸ್‌ನಲ್ಲಿ ಸೆ.19ರಂದು ಚಿನ್ನ ಖರೀದಿಗೆ ಬಂದಿದ್ದ ಕಳ್ಳಿಯರು, ತಮ್ಮ ಬಳಿ ಇದ್ದ ಹಳೇ ನಕಲಿ ಚಿನ್ನಾಭರಣ ನೀಡಿ, 71.605 ಗ್ರಾಂ ಅಸಲಿ ಚಿನ್ನಾಭರಣ ಖರೀದಿಸುವ ಮೂಲಕ ವಂಚಿಸಿ, ನಾಪತ್ತೆಯಾಗಿದ್ದರು. ಈ ಬಗ್ಗೆ ಅಂಗಡಿ ವ್ಯವಸ್ಥಾಪಕ ಸೆ.24ರಂದು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಕಾರ್ಯಾಚರಣೆಗೆ ಕೈಗೊಂಡ ಅಪರಾಧ ವಿಭಾಗದ ಪಿಎಸ್‌ಐ ಉಮಾವತಿ, ಸಿಬ್ಬಂದಿ ಹಾಗೂ ನಗರ ಠಾಣೆ ಪೊಲೀಸರು ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದ್ದು, ಸದ್ಯ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರಲ್ಲದೆ, ಕಾರ್ಯಾಚರಣೆ ನಡೆಸಿದ ಸಿಬ್ಬಂದಿಗೆ ಬಹು ಮಾನ ನೀಡಲಾಗುವುದು ಎಂದು ಎಸ್ಪಿ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಎಎಸ್ಪಿ ಸುಂದರ ರಾಜು, ಡಿವೈಎಸ್‌ಪಿ ನಾಗರಾಜು, ಸಿಪಿಐ ಶಿವರಾಜ್, ಪಿಎಸ್‌ಐ ಚೇತನ್, ಉಮಾವತಿ ಇನ್ನಿತರರಿದ್ದರು.



ಮೈಸೂರು ದಸರಾ ಮಹೋತ್ಸವ - 2022



ಮಿನಿ ಜಂಬೂಸವಾರಿಯಂತಿದ್ದ ಪ್ರವಾಸೋದ್ಯಮದ ಮಹತ್ವ ಸಾರುವ ಸಾಂಸ್ಕೃತಿಕ ಮೆರವಣಿಗೆ

● ಹಲವು ಕಲಾ ತಂಡಗಳ ವೈಭವ ● ದಸರಾಗೆ ಅಧಿಕ ಪ್ರವಾಸಿಗರ ಸೆಳೆಯುವ ಸದವಕಾಶ





ಮೈಸೂರು, ಸೆ.27(ಎಂಕೆ)– ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆ, ಪ್ರವಾಸೋದ್ಯಮ ಪಾಲುದಾರರ ಹೋಟೆಲ್ ಅಸೋಸಿಯೇಷನ್ ಹಾಗೂ ಟ್ರಾವೆಲ್ಸ್ ಅಸೋಸಿಯೇಷನ್ ಸಹಯೋಗದೊಂದಿಗೆ 'ವಿಶ್ವ ಪ್ರವಾಸೋದ್ಯಮ ದಿನ'ದ ಅಂಗವಾಗಿ ಆಯೋಜಿಸಿದ್ದ 'ಪ್ರವಾಸೋದ್ಯಮ ಪುನರಾವಲೋಕನ' ಸಂದೇಶ ಸಾರುವ ಸಾಂಸ್ಕೃತಿಕ ಮೆರವಣಿಗೆ ಯಶಸ್ವಿಯಾಗಿ ನೆರವೇರಿತು.

ಮೈಸೂರು ಅರಮನೆ ಉತ್ತರದ್ವಾರದ ಆವರಣದಿಂದ ಆರಂಭವಾದ ಸಾಂಸ್ಕೃತಿಕ ಮೆರವಣಿಗೆ ದಸರಾ ಗಜಪಡೆ ಹಾಗೂ ಅಶ್ವಪಡೆಯೊಂದಿಗೆ ಬನ್ನಿಮಂಟಪದವರೆಗೂ ಸಾಗಿತು. ನಾದಸ್ವರ, ಕಂಸಾಳೆ, ಡೊಳ್ಳು ಕುಣಿತ, ತಮಟೆ ವಾದನ, ಹುಲಿ ಕುಣಿತ, ಬೈಲುಕುಪ್ಪೆ ಟಿಬೆಟಿಯನ್ ಕಲಾ ತಂಡದ ಕೊಳಲು ವಾದನ ಮತ್ತು ಬ್ಯಾಂಡ್‌ಸೆಟ್, ಮಂಗಳೂರು ಶೈಲಿಯ ಗಾರುಡಿ ಗೊಂಬೆ ಕುಣಿತ ಸೇರಿದಂತೆ ಹಲವು ಕಲಾತಂಡಗಳು ಮೆರವಣಿಗೆಯಲ್ಲಿ ಸಾಗಿದವು.

ನಗರದ ಪ್ರತಿಷ್ಠಿತ ಹೋಟೆಲ್‌ಗಳ ಸಿಬ್ಬಂದಿ ತಮ್ಮ ಹೋಟೆಲ್ ಬ್ಯಾನರ್ ಹಿಡಿದು ಸಾಗಿದರೆ, ವಿದ್ಯಾವಿಕಾಸ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರೆ ಸಂಘ–ಸಂಸ್ಥೆಗಳ ನೂರಾರು ಸಿಬ್ಬಂದಿ ಮೆರವಣಿಗೆಗೆ ಮೆರಗು ನೀಡಿದರು. ಕೊಡಗಿನ ಸಾಂಪ್ರದಾಯಿಕ ಉಡುಪಿನೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡ ಕೆಲವರು ಎಲ್ಲರ ಗಮನ ಸೆಳೆದರು. ಜೊತೆಗೆ ಓಪನ್ ಜೀಪ್‌ಗಳು ಮೆರವಣಿಗೆ ಸಾಗುವ ಮೂಲಕ ಮೈಸೂರು ಪ್ರವಾಸೋದ್ಯಮಕ್ಕೆ ಹೊಸ ಆಕರ್ಷಣೆ ದೊರಕಿಸಿಕೊಡಲಾಯಿತು.

> ಮೈಸೂರು ದಸರಾ ಉತ್ಸವಕ್ಕೆ ಬರುವ ಪ್ರವಾಸಿಗರು ಗೋಲ್ಡ್ ಪಾಸ್ ಕೇಳುತ್ತಿದ್ದಾರೆ. ಪ್ರವಾಸಿಗರನ್ನು ಕರೆದುಕೊಂಡು ಬರಲು ಗೋಲ್ಡ್ ಪಾಸ್ ಅಗತ್ಯವಿದೆ. ನಮ್ಮ ಸಂಪರ್ಕದಲ್ಲಿರುವ ಪ್ರವಾಸಿಗರು ಪ್ರತಿನಿತ್ಯ ಕೇಳುತ್ತಲೇ ಇದ್ದಾರೆ. ಆದ್ದರಿಂದ ಕೂಡಲೇ ಗೋಲ್ಡ್ ಪಾಸ್ ನೀಡಬೇಕು ಎಂದು ಮನವಿ ಮಾಡುತ್ತೇನೆ.
>
> -**ಪ್ರಶಾಂತ್**, ಅಧ್ಯಕ್ಷ, ಸಂಘ–ಸಂಸ್ಥೆಗಳ ಒಕ್ಕೂಟ

ಚಾಲನೆ: ಗಜಪಡೆಗೆ ಪುಷ್ಪನಮನ ಸಲ್ಲಿಸಿ, ಬಾವುಟ ತೋರಿಸುವ ಮೂಲಕ ಪ್ರವಾಸೋದ್ಯಮ ದಿನದ ಸಾಂಸ್ಕೃತಿಕ ಮೆರವಣಿಗೆಗೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಟ್ರಾವೆಲ್ಸ್ ಅಸೋಸಿಯೇಷನ್, ಹೋಟೆಲ್ ಮಾಲೀಕರ ಸಂಘ ಸೇರಿದಂತೆ ನಾನಾ ಸಂಘಟನೆಗಳ ವತಿಯಿಂದ ಹಮ್ಮಿಕೊಂಡಿರುವ ಈ ಸಾಂಸ್ಕೃತಿಕ ಮೆರವಣಿಗೆ ಪ್ರವಾಸಿಗರನ್ನು ಸೆಳೆಯಲು ಸಹಕಾರಿಯಾಗಲಿದೆ ಎಂದರು.

ಈ ಬಾರಿ ಅದ್ದೂರಿಯಾಗಿ ದಸರಾ ಆಚರಣೆ ಮಾಡುತ್ತಿರುವುದರಿಂದ ಪ್ರವಾಸೋದ್ಯಮಕ್ಕೆ ಚೇತರಿಕೆ ಸಿಗಲಿದೆ. ದೇಶ–ವಿದೇಶಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಗೋಲ್ಡ್ ಪಾಸ್ ನೀಡುವ ಕುರಿತು ಸದ್ಯದಲ್ಲಿಯೇ ಸಭೆ ನಡೆಸಲಾಗುವುದು. ಗೋಲ್ಡ್ ಪಾಸ್ ಪಡೆದವರಿಗೆ ಆಸನ ವ್ಯವಸ್ಥೆ ಮಾಡುವ ರೂಪುರೇಷೆಗಳ ಬಗ್ಗೆ ಚರ್ಚಿಸಿ ಗೋಲ್ಡ್ ಪಾಸ್ ನೀಡುವ ಕುರಿತು ತೀರ್ಮಾನಿಸಲಾಗುವುದು ಎಂದು ತಿಳಿಸಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಈ ಬಾರಿಯ ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಹಾಗೂ ಯಶಸ್ವಿಯಾಗಿ ಆಚರಿಸಬೇಕು ಎಂದು ಕಳೆದ ವರ್ಷ ಘೋಷಣೆ ಮಾಡಿದ್ದಂತೆ ನಡೆಸಲಾಗುತ್ತಿದೆ ವಿಶ್ವಯೋಗ ದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ಬಂದು ಭಾಗವಹಿಸಿದ್ದು, ದಸರಾ ಮಹೋತ್ಸವವನ್ನು ರಾಷ್ಟ್ರಪತಿಗಳು ಉದ್ಘಾಟಿಸಿದ್ದರಿಂದ ವಿಶ್ವಮಟ್ಟದಲ್ಲಿ ಮೈಸೂರನ್ನು ಹಾಗೂ ಮೈಸೂರು ದಸರಾವನ್ನು ನೋಡುವಂತಾಗಿದೆ. ಎಲ್ಲರೂ ಸಂಭ್ರಮ–ಸಡಗರದಿಂದ ಆಚರಿಸುವ ಮೂಲಕ ಯಶಸ್ವಿಗೊಳಿಸೋಣ ಎಂದರು.

ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಎ.ಜಯಕುಮಾರ್, ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಪ್ರಶಾಂತ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಸಂಸ್ಥೆ ಅಧ್ಯಕ್ಷ ನಿಂಗರಾಜು, ಗೈಡ್ ಸಂಘದ ಅಧ್ಯಕ್ಷ ಅಶೋಕ್, ಡ್ರೈವರ್ಸ್ ಸಂಘದ ಅಧ್ಯಕ್ಷ ನಾಗರಾಜು, ಮ್ಯಾಕ್ಸಿಕ್ಯಾಬ್ ಸಂಘದ ಅಧ್ಯಕ್ಷ ಎ.ಸಿ.ರವಿ ಮತ್ತಿತರರು ಉಪಸ್ಥಿತರಿದ್ದರು.



ವಿಕಲಚೇತನ ಕಲಾವಿದನಿಗೆ ಅವಕಾಶ ಮಾಡಿಕೊಡಿ: ಜಿಟಿಡಿ ಮನವಿ

ಅರಮನೆ ಆವರಣದಲ್ಲಿ ನಡೆದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ವೇಳೆ ಶಾಸಕ ಜಿ.ಟಿ.ದೇವೇಗೌಡರ ಬಳಿಗೆ ಬಂದ ಮೈಸೂರಿನ ವಿಜಯನಗರ 2ನೇ ಹಂತದ ವಿಕಲಚೇತನ ಕಲಾವಿದ ರಮೇಶ್ ಶೆಟ್ಟಿ, ನಾನು 10ಕ್ಕೂ ಹೆಚ್ಚು ಕನ್ನಡ ಸಾಹಿತ್ಯ ಸಮ್ಮೇಳನಗಳ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ಭಾಗವಹಿಸಿದ್ದೇನೆ. ದಯವಿಟ್ಟು ದಸರಾ ಜಂಬೂಸವಾರಿಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುವಂತೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಸುದ್ದಿ ತೋರಿಸಿ ಮನವಿ ಮಾಡಿದರು.

ಇದಕ್ಕೆ ಪ್ರತಿಕಿಯಿಸಿದ ಜಿಟಿಡಿ, ನನ್ನನ್ನು ಕೇಳಿದರೆ ಹೇಗೆ? ಎನ್ನುತ್ತಲೇ ಮೊದಲೇ ತಿಳಿಸಿದ್ದರೆ ಉಸ್ತುವಾರಿ ಸಚಿವರಿಗೆ ಹೇಳಬಹುದಾಗಿತ್ತು ಎಂದರು. ನಂತರ ಅಲ್ಲಿಯೇ ನಿಂತಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರ ಕಾರಿನ ಬಳಿ ಓಡಿದ ಶಾಸಕರು, ಈತ ವಿಕಲಚೇತನ ಕಲಾವಿದನಾಗಿದ್ದು, ಸಾಕಷ್ಟು ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾನಂತೆ. ಅವನಿಗೊಂದು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು. ಜಿಟಿಡಿ ಹಾಗೂ ವಿಕಲಚೇತನ ಕಲಾವಿದ ರಮೇಶ್ ಶೆಟ್ಟಿ ಮನವಿ ಕೇಳಿದ ಜಿಲ್ಲಾ ಉಸ್ತುವಾರಿ ಸಚಿವರು, ಸಂಬಂಧಪಟ್ಟ ಉಪಸಮಿತಿಗೆ ತಿಳಿಸಿ, ಅವಕಾಶ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.







ಮಾವುತರು, ಕಾವಾಡಿಗಳ ಮಕ್ಕಳಿಗೆ ಆರೋಗ್ಯ ತಪಾಸಣೆ

ಮೈಸೂರು, ಸೆ.27– ಮೈಸೂರು ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ವತಿಯಿಂದ ಸೆ.29ರ ಗುರುವಾರ ಬೆಳಗ್ಗೆ 10ಗಂಟೆಗೆ ಮೈಸೂರಿನ ಅರಮನೆ ಆವರಣದ ದಸರಾ ಗಜಪಡೆಯ ಮಾವುತರು ಮತ್ತು ಕಾವಾಡಿಗಳ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿದೆ. ಸುಯೋಗ್ ಆಸ್ಪತ್ರೆ ಅಧ್ಯಕ್ಷರಾದ ಡಾ.ಎಸ್.ಪಿ.ಯೋಗಣ್ಣ ನೇತೃತ್ವದಲ್ಲಿ ನಡೆಯಲಿರುವ ಈ ಶಿಬಿರದಲ್ಲಿ ಎಲ್ಲಾ ವಿಭಾಗಗಳ ತಜ್ಞವೈದ್ಯರು ಭಾಗವಹಿಸಲಿದ್ದಾರೆ. ಹೆಚ್ಚಿನ ವಿವರಗಳಿಗೆ 0821–2533600, ಮೊ.9986399862 ಸಂಪರ್ಕಿಸುವುದು.

ಅ.1ರಂದು ಪ್ರಾದೇಶಿಕ ಕವಿಗೋಷ್ಠಿ

ಮೈಸೂರು, ಸೆ.27–ಮೈಸೂರು ದಸರಾ ಕವಿಗೋಷ್ಠಿ ಸಮಿತಿಯಿಂದ ಅ.1ರಂದು ಪ್ರಾದೇಶಿಕ ಕವಿಗೋಷ್ಠಿ ನಡೆಯಲಿದೆ. ಅಂದು ಬೆಳಗ್ಗೆ 10.30 ಗಂಟೆಗೆ ಮೈಸೂರು ವಿವಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಕವಯಿತ್ರಿ ಶ್ರೀಮತಿ ನೂತನ ದೋಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಎಸ್.ಎ. ರಾಮದಾಸ್ ಉದ್ಘಾಟನೆ ನೆರವೇರಿಸಲಿದ್ದು, ಚಿತ್ರದುರ್ಗದ ಕವಿ ಡಾ. ಯಲ್ಲಪ್ಪ ಕೆ.ಕೆ. ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಕವಿಗೋಷ್ಠಿಯಲ್ಲಿ 41 ಮಂದಿ ಕವಿಗಳು ಸ್ವರಚಿತ ಕವನ ವಾಚಿಸಲಿದ್ದಾರೆ.



ಮೈಸೂರು ಅರಮನೆ ಆವರಣದಲ್ಲಿ ನಡೆದ ಜಾನಪದ ಬೀಸು ಕಂಸಾಳೆ ಕಾರ್ಯಕ್ರಮದಲ್ಲಿ ಕಂಸಾಳೆ ಪ್ರದರ್ಶನ ನೀಡಿದ ಮೈಸೂರು ಮಹೇಶ್ ಮತ್ತು ತಂಡದ ಸದಸ್ಯರನ್ನು ಜಿಲ್ಲಾ ಪಂಚಾಯತ್ ಸಿಇಓ ಪೂರ್ಣಿಮಾ ಅಭಿನಂದಿಸಿ, ಪ್ರಮಾಣ ಪತ್ರ ವಿತರಿಸಿದರು.

ಹಿರಿಯ ನಾಗರಿಕರಿಗೆ ನಾನಾ ಸ್ಪರ್ಧೆ

ಮೈಸೂರು, ಸೆ.27(ಎಂಟಿವೈ)– ವಿಶ್ವ ನಾಗರಿಕರ ದಿನಾಚರಣೆಯ ಅಂಗವಾಗಿ ಮೈಸೂರಿನ ಮೇಟಗಳ್ಳಿ ಬಳಿಯಿರುವ ಜಿಲ್ಲಾ ಆಸ್ಪತ್ರೆಯಲ್ಲಿ ಸೆ.28ರಂದು ಬೆಳಗ್ಗೆ 10 ಗಂಟೆಯಿಂದ ಹಿರಿಯ ನಾಗರಿಕ ಸಪ್ತಾಹ ಹಾಗೂ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ಮಾಲಿನಿ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿ.ಪಂ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ವಿಶ್ವ ಹಿರಿಯ ನಾಗರಿಕರ ಸಪ್ತಾಹ ಆಯೋಜಿಸಲಾಗಿದ್ದು, ವಿವಿಧ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪ ಹಾಗೂ ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಬಳಿಕ ಹಿರಿಯ ನಾಗರಿಕರಿಗೆ ಆರೋಗ್ಯ ತಪಾಸಣೆ ನಡೆಯಲಿದೆ. ಸೆ.29ರಂದು ಹಿರಿಯ ನಾಗರಿಕರಿಗೆ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಏಕಪಾತ್ರಾಭಿನಯ, ಗಾಯನ ಹಾಗೂ ಚಿತ್ರಕಲಾ ಸ್ಪರ್ಧೆ ನಡೆಸಲಾಗುತ್ತದೆ. ಸೆ.30ರಂದು ಕ್ರೀಡಾ ಸ್ಪರ್ಧೆಯಲ್ಲಿ ಬಕೆಟ್‌ಗೆ ಚೆಂಡು ಎಸೆಯುವುದು, 100 ಮೀ.ನಡಿಗೆ, ಮ್ಯೂಸಿಕಲ್ ಚೇರ್ ಸ್ಪರ್ಧೆ ನಡೆಯಲಿದೆ ಎಂದು ಅವರು ವಿವರಿಸಿದರು.

ಆಕರ್ಷಣೆಗೆ ಪೂರಕವಾಗಿ ಕೆಲವೆಡೆ ದೀಪಾಲಂಕಾರದಲ್ಲಿ ಬದಲಾವಣೆ ಸಾಧ್ಯತೆ

● ದಸರಾ ಉಪಸಮಿತಿಗಳ ಪ್ರಗತಿ ಪರಿಶೀಲನಾ ಸಭೆ ● ಹಲವೆಡೆ ದೀಪಾಲಂಕಾರ ಆಕರ್ಷಣೀಯವಾಗಿಲ್ಲ ; ಶಾಸಕ ಎಲ್.ನಾಗೇಂದ್ರ ಕಿಡಿ ● ಶೀಘ್ರ ಸರಿಪಡಿಸುವಂತೆ ಅಧಿಕಾರಿಗಳಿಗೆ ಸಚಿವ ಎಸ್.ಟಿ.ಸೋಮಶೇಖರ್ ಸೂಚನೆ

ಮೈಸೂರು,ಸೆ.27(ಪಿಎಂ)– ಕೆಲವೆಡೆ ದೀಪಾಲಂಕಾರ ಆಕರ್ಷಣೀಯವಾಗಿಲ್ಲ ಎಂದು ಶಾಸಕ ಎಲ್.ನಾಗೇಂದ್ರ ದೀಪಾಲಂಕಾರ ಉಪಸಮಿತಿ ಅಧಿಕಾರಿಗಳ ವಿರುದ್ಧ ಕಿಡಿಕಾರಿದರೆ, ಇದಕ್ಕೆ ದನಿಗೂಡಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ದೀಪಾಲಂಕಾರ ಸಂಬಂಧ ಪ್ರತ್ಯೇಕ ಸಭೆ ಏರ್ಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಮಂಗಳವಾರ ನಡೆದ ದಸರಾ ಉಪಸಮಿತಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕರು ಹಾಗೂ ಸಚಿವರು ಹೀಗೆ ದೀಪಾಲಂಕಾರ ಸಂಬಂಧ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಸಭೆಯಲ್ಲಿ ದೀಪಾಲಂಕಾರ ಉಪಸಮಿತಿ ಕಾರ್ಯಾಧ್ಯಕ್ಷರೂ ಆದ ಚೆಸ್ಕಾಂ ಅಧೀಕ್ಷಕ ಇಂಜಿನಿಯರ್ ಎಸ್.ನಾಗೇಶ್ ದೀಪಾಲಂಕಾರ ಸಂಬಂಧ ಮಾಹಿತಿ ನೀಡುತ್ತಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಎಲ್.ನಾಗೇಂದ್ರ, ನಿಮ್ಮ ಎಂಡಿ ಬಂದಿಲ್ಲವೇ? ಅವರೆಲ್ಲಿ ಹೋಗಿದ್ದಾರೆ? ದಸರಾ ನಡೆಯಬೇಕಾದರೆ ಬೆಂಗಳೂರಿಗೆ ಹೋಗುವುದೇನಿತ್ತು? ಎಂದು ಕಿಡಿಕಾರಿದರು.

ಇದೇ ವೇಳೆ ಮಾತನಾಡಿದ ಸಚಿವ ಎಸ್.ಟಿ.ಸೋಮಶೇಖರ್, ಹಲವಡೆ ದೀಪಾಲಂಕಾರ ಸರಿ ಇಲ್ಲ. ನಮ್ಮ ಕಡೆ ಲೈಟಿಂಗ್ ಹಾಕಿಲ್ಲ ಎಂಬ ದೂರುಗಳು ಬರುತ್ತಿವೆ. ಮೈಸೂರು ದಸರಾ ಎಂದರೆ ವಿದ್ಯುತ್ ದೀಪಾಲಂಕಾರವೇ ನಂಬರ್ ಒನ್ ಆಕರ್ಷಣೆ ಇದನ್ನು ಕಾಟಾಚಾರಕ್ಕೆ ಮಾಡುವುದಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



ಮತ್ತೆ ಮಾತನಾಡಿದ ಶಾಸಕ ನಾಗೇಂದ್ರ, ನನ್ನ ಕ್ಷೇತ್ರದ ರಸ್ತೆಗಳಿಗೆ ದೀಪಾಲಂಕಾರ ಮಾಡಿ ಎಂದು ಗೋಗರೆಯಬೇಕಾ? 124 ಕಿ.ಮೀ. ರಸ್ತೆಯಲ್ಲಿ ದೀಪಾಲಂಕಾರ ಮಾಡುತ್ತೇವೆ ಎಂದು ಒಪ್ಪಿದ್ದೀರಿ. ಬನ್ನಿ ಹೋಗೋಣ ಅದರಂತೆ ಮಾಡಿದ್ದೀರಾ ತೋರಿಸಿ. ನಗರ ವ್ಯಾಪ್ತಿಯೊಳಗೆ ಸರಿಯಾಗಿ ದೀಪಾಲಂಕಾರ ಮಾಡಿ. ಡಿ.ದೇವರಾಜ ಅರಸು ರಸ್ತೆಗೆ ಮದುವೆ ಮಂಟಪಕ್ಕೆ ಮಾಡುವಂತಹ ದೀಪಾಲಂಕಾರ ಮಾಡಿದ್ದೀರಿ. ಇದು ಸರಿಯೇ? ನಿಮ್ಮ ಎಂಡಿ ಬರುತ್ತಾರೆ ಎಂದು ಸಭೆಗೆ ಬಂದಿರೋದು. ನನ್ನ ಕ್ಷೇತ್ರವು ಮೈಸೂರು ನಗರದ ಹೃದಯ ಭಾಗದಲ್ಲಿದೆ. ಇಲ್ಲಿ ಸರಿಯಾಗಿ ದೀಪಾಲಂಕಾರ ಮಾಡಿಲ್ಲವೆಂದರೆ ಯಾವ ದಸರಾ ತಾನೇ ಮಾಡಲಾಗುತ್ತದೆ. ಸರ್ಕಾರದಿಂದ ದೀಪಾಲಂಕಾರಕ್ಕೆ ಹಣ ನೀಡುತ್ತಿಲ್ಲವೇ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾವೇನು ಆರೋಪ ಮಾಡುತ್ತಿದ್ದೇವೆ ಎಂದುಕೊಳ್ಳಬೇಡಿ, ಸಲಹೆ ಎಂದು ತೆಗೆದುಕೊಳ್ಳಿ. ಡಿ.ದೇವರಾಜ ಅರಸು ರಸ್ತೆ ದೀಪಾಲಂಕಾರ ಬದಲಾಯಿಸಿ, ಜೊತೆಗೆ ನಗರದ ಕೆಲವೆಡೆಯೂ ಬದಲಾವಣೆ ಮಾಡಬೇಕು. ಜಗನ್ಮೋಹನ ಅರಮನೆಗೆ ದೀಪಾಲಂಕಾರ ಮಾಡಬೇಕು. ನಗರದೊಳಗಿನ ಎಲ್ಲಾ ರಸ್ತೆಗಳಿಗೆ ದೀಪಾಲಂಕಾರ ಮಾಡಬೇಕಿತ್ತು. ಆದರೆ ಕೇವಲ ಮುಖ್ಯ ರಸ್ತೆಗಳಿಗೆ ದೀಪಾಲಂಕಾರ ಮಾಡಿದ್ದು, ಪ್ರಮುಖ ಕ್ರಾಸ್‌ಗಳಿಗೆ ದೀಪಾಲಂಕಾರ ಮಾಡಿಲ್ಲ. ಇಂದು ಸಂಜೆ ನನ್ನೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಅಗತ್ಯ ಬದಲಾವಣೆಗಳನ್ನು ಮಾಡಬೇಕು ಎಂದು ತಾಕೀತು ಮಾಡಿದರು.

ಮತ್ತೆ ಮಾತು ಮುಂದುವರೆಸಿದ ಎಲ್.ನಾಗೇಂದ್ರ, ಚೆಸ್ಕಾಂ ಎಂಡಿ ಅವರು ತಮ್ಮ ನಡವಳಿಕೆ ಬದಲಾಯಿಸಿಕೊಳ್ಳಬೇಕು ಎಂದರು. ಈ ವೇಳೆ ನಮಗೆ ಬಂದಿದ್ದ ಪ್ರಸ್ತಾವನೆಯಂತೆ ದೀಪಾಲಂಕಾರ ಮಾಡಿದ್ದೇವೆ ಎಂದು ಸಮಜಾಯಿಷಿ ನೀಡಲು ಚೆಸ್ಕಾಂ ಅಧೀಕ್ಷಕ ಇಂಜಿನಿಯರ್ ಎಸ್.ನಾಗೇಶ್ ಮುಂದಾದಾಗ, ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ನಿಮ್ಮ ಎಂಡಿ ಬಂದ ತಕ್ಷಣ ತಿಳಿಸಿ, ದೀಪಾಲಂಕಾರ ಸಂಬಂಧ ಪ್ರತ್ಯೇಕ ಸಭೆ ಮಾಡಬೇಕು. ಇಡೀ ರಾಜ್ಯವೇ ಇಲ್ಲಿನ ವಿದ್ಯುತ್ ದೀಪಾಲಂಕಾರ ನೋಡುತ್ತಿದೆ. ಹಾಗಾಗಿ ಉತ್ತಮವಾಗಿ ವ್ಯವಸ್ಥೆ ಇರಬೇಕು ಎಂದು ಸೂಚನೆ ನೀಡಿದರು.

ರಿಯಾಯಿತಿ ನೀಡಿ ಮಳಿಗೆ ಭರ್ತಿ ಮಾಡಿ: ಆಹಾರ ಮೇಳ ಉಪಸಮಿತಿ ಉಪವಿಶೇಷಾಧಿಕಾರಿ ಎನ್.ಕೆ.ದಿನೇಶ್ ಕುಮಾರ್ ಮಾತನಾಡಿ, ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿನ ಆಹಾರ ಮೇಳದಲ್ಲಿ ಒಟ್ಟು 118 ಮಳಿಗೆಗಳನ್ನು ವ್ಯವಸ್ಥೆ ಮಾಡಿದ್ದು, ಇದರಲ್ಲಿ 113 ಮಳಿಗೆಗಳು ಕಾರ್ಯಾರಂಭ ಮಾಡಿವೆ. ನಾಲ್ಕು ಮಳಿಗೆ ಸಂಬಂಧ ಮಳಿಗೆ ತೀರಾ ಒಳಗೆ ಆಯಿತೆಂದು ಮಳಿಗೆದಾರರು ಡಿಡಿ ಹಿಂಪಡೆದಿದ್ದಾರೆ. ಒಂದು ಮಳಿಗೆ ಖಾಲಿ ಉಳಿದಿದೆ ಎಂದರು.

ಅಂತೆಯೇ ಲಲಿತಮಹಲ್ ಮೈದಾನದ ಆಹಾರ ಮೇಳ 74 ಮಳಿಗೆಗಳನ್ನು ವ್ಯವಸ್ಥೆ ಮಾಡಿದ್ದು, ಇದರಲ್ಲಿ 43 ಮಳಿಗೆಗಳು ಖಾಲಿ ಉಳಿದಿವೆ ಎಂದು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ರಿಯಾಯಿತಿ ನೀಡುವ ಮೂಲಕ ಎಲ್ಲಾ ಮಳಿಗೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿದರು.

43 ಸ್ತಬ್ಧಚಿತ್ರ ತಯಾರಿಕೆ ಶುರು: ಸ್ತಬ್ಧಚಿತ್ರ ಉಪಸಮಿತಿ ಕಾರ್ಯಚಟುವಟಿಕೆ ಸಂಬಂಧ ಮಾಹಿತಿ ನೀಡಿದ ಅಧಿಕಾರಿಗಳು, ವಿವಿಧ ಜಿಲ್ಲೆಗಳಿಂದ 31 ಸ್ತಬ್ಧಚಿತ್ರ, ವಿವಿಧ ಇಲಾಖೆ ಹಾಗೂ ಉಪಸಮಿತಿಗಳ ಸೇರಿದಂತೆ 43 ಸ್ತಬ್ಧಚಿತ್ರಗಳ ತಯಾರಿಕೆ ಕಾರ್ಯ ಬಂಡಿಪಾಳ್ಯದ ಆರ್‌ಎಂಸಿ ಆವರಣದಲ್ಲಿ ಈಗಾಗಲೇ ಆರಂಭಗೊಂಡಿದೆ. ಉಪಸಮಿತಿಯ ಅಧಿಕಾರೇತರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹುಣಸೂರು ಹನುಮ ದೇವಾಲಯದ ಸ್ತಬ್ಧಚಿತ್ರ ಅಳವಡಿಸಬೇಕೆಂದು ಕೋರಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು.

ಈ ಸಂಬಂಧ ಮಾತನಾಡಿದ ಜಿಲ್ಲಾಧಿಕಾರಿಗಳು, ಈಗಾಗಲೇ 43 ಸ್ತಬ್ಧಚಿತ್ರಗಳ ಕಾರ್ಯ ಪ್ರಗತಿಯಲ್ಲಿದೆ. ಹೆಚ್ಚುವರಿ ಸ್ತಬ್ಧಚಿತ್ರ ಸೇರ್ಪಡೆ ಮಾಡಿದರೆ ಅರಮನೆ ಒಳಗೆ ಸ್ಥಳಾವಕಾಶದ ತೊಂದರೆ ಉಂಟಾಗಲಿದೆ. ಹಾಗಾಗಿ ಇದರ ಸಾಧ್ಯತೆ ಸಂಬಂಧ ಪರಿಶೀಲಿಸಿ ಮುಂದುವರೆಯಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ಯಾರಿದ್ದಾರೆಂದು ಗೊತ್ತಾಗುತ್ತಿಲ್ಲ: ಶಾಸಕ ಎಲ್.ನಾಗೇಂದ್ರ ಮಾತನಾಡಿ, ಯಾವುದೇ ಕಾರ್ಯಕ್ರಮಕ್ಕೆ ಹೋದರೂ ವೇದಿಕೆಯಲ್ಲಿ ಇರುವ ಗಣ್ಯರು ಯಾರೆಂಬುದೇ ಗೊತ್ತಾಗುತ್ತಿಲ್ಲ. ಆಹ್ವಾನ ಪತ್ರಿಕೆಯನ್ನೇ ಮಾಡಿಸಿ ಎಂದು ಹೇಳುತ್ತಿಲ್ಲ. ಕನಿಷ್ಠ ಒಂದು ಬಿಳಿ ಕಾಗದದಲ್ಲಿ ಆಹ್ವಾನಿತರ ಹೆಸರುಗಳನ್ನು ಬರೆದು ಕೊಡಬೇಕು ಎಂದು ಹೇಳಿದರು. ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು, ಕಾರ್ಯಕ್ರಮ ಹಾಗೂ ಆಹ್ವಾನಿತರ ಬಗ್ಗೆ ಕಾಗದದಲ್ಲಿ ಕರಪತ್ರ ಸಿದ್ಧಪಡಿಸಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಯುವ ದಸರಾ ಸಂಬಂಧ ಹೆಚ್ಚು ಪ್ರಚಾರ ನೀಡುವಂತೆ ಯುವ ದಸರಾ ಉಪಸಮಿತಿ ಕಾರ್ಯಾಧ್ಯಕ್ಷ ವೆಂಕಟರಾಜು ಅವರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಬಳಿಕ ಸಚಿವರು ಮಾತನಾಡಿ, ಆಯಾಯ ದಿನದ ಕಾರ್ಯಕ್ರಮದ ಬಗ್ಗೆ ಮಾಧ್ಯಮಕ್ಕೆ ಮಾಹಿತಿ ಒದಗಿಸಿ ಎಂದು ಸಲಹೆ ನೀಡಿದರು. ಮೇಯರ್ ಶಿವಕುಮಾರ್, ಉಪಮೇಯರ್ ರೂಪ, ಜಿಪಂ ಸಿಇಓ ಪೂರ್ಣಿಮಾ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ಮತ್ತಿತರರು ಹಾಜರಿದ್ದರು.

ನಮ್ಮನ್ನು ಪರಿಗಣಿಸುತ್ತಿಲ್ಲ ; ಸಭೆಯಲ್ಲಿ ಉಪಸಮಿತಿ ಅಧಿಕಾರೇತರ ಪದಾಧಿಕಾರಿಗಳ ದೂರು

ಮೈಸೂರು,ಸೆ.27(ಪಿಎಂ)– ದಸರಾ ಉಪಸಮಿತಿಗಳಿಗೆ ಪದಾಧಿಕಾರಿಗಳಾಗಿ (ಅಧಿಕಾರೇತರರು) ನಿಯೋಜನೆಗೊಂಡಿರುವ ನಮ್ಮನ್ನು ಸಮಿತಿಯಲ್ಲಿರುವ ಅಧಿಕಾರಿಗಳು ಪರಿಗಣಿಸುತ್ತಿಲ್ಲ ಎಂಬ ದೂರುಗಳೂ ಸಭೆಯಲ್ಲಿ ಕೇಳಿ ಬಂದವು. ಕಾಟಾಚಾರಕ್ಕೆ ನೇಮಕವಾಗಿದ್ದಾರೆ ಎಂಬ ಭಾವನೆ ನಮ್ಮ ಬಗ್ಗೆ ಹೊಂದಿರುವಂತಿದೆ ಎಂದು ಅಧಿಕಾರೇತರ ಪದಾಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂಬಂಧ ಮಾತನಾಡಿದ ಜಿಲ್ಲಾಧಿಕಾರಿಗಳು, ಅಧಿಕಾರಿಗಳು ಮತ್ತು ಅಧಿಕಾರೇತರರು ಎಲ್ಲರೂ ಪರಸ್ಪರ ಚರ್ಚಿಸಿ, ಸಮನ್ವಯದಿಂದ ಕೆಲಸ ಮಾಡಬೇಕೆಂದು ಸಲಹೆ ನೀಡಿದರು. ಆಹಾರ ಮೇಳ ಉಪಸಮಿತಿ ಅಧಿಕಾರೇತರ ಪದಾಧಿಕಾರಿಯೊಬ್ಬರು ಮಾತನಾಡಿ, ಕೆಳ ಹಂತದ ಅಧಿಕಾರಿಗಳು ಆಹಾರ ಮೇಳದಲ್ಲಿ ತಮಗೆ ಬೇಕಾದವರಿಗೆ ಮಳಿಗೆಗಳನ್ನು ನೀಡಿದ್ದಾರೆ. ಇನ್ನು ಮುಂದಾದರೂ ಈ ರೀತಿ ಆಗಬಾರದು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೊಡಗಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಅಗತ್ಯ

ವಿಶ್ವ ಪ್ರವಾಸೋದ್ಯಮ ದಿನಾಚರಣೆಯಲ್ಲಿ ಶಾಸಕ ಅಪ್ಪಚ್ಚು ರಂಜನ್



ಮಡಿಕೇರಿ, ಸೆ.27– ವಿಶ್ವದಲ್ಲಿ ಸಿಂಗಾಪುರ ಮತ್ತು ಮಲೇಷಿಯಾ ರಾಷ್ಟ್ರಗಳು ಪ್ರವಾಸೋದ್ಯಮವನ್ನೇ ಆರ್ಥಿಕತೆಯನ್ನಾಗಿ ಬಳಸಿಕೊಂಡು ಮುನ್ನಡೆಯುತ್ತಿದ್ದು, ಆ ನಿಟ್ಟಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಹ ಕೃಷಿ ಜೊತೆಗೆ ಪ್ರವಾಸೋದ್ಯಮಕ್ಕೂ ಹೆಚ್ಚಿನ ಒತ್ತು ನೀಡುವ ಮೂಲಕ ಅಭಿವೃದ್ಧಿ ಪಡಿಸಬೇಕು ಎಂದು ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಸಲಹೆ ಮಾಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ, ಪ್ರವಾಸೋದ್ಯಮ ಪಾಲುದಾರರ ಸಂಯುಕ್ತಾಶ್ರಯದಲ್ಲಿ 'ಪ್ರವಾಸೋದ್ಯಮದ ಪುನರಾವಲೋಕನ' ಎಂಬ ಸಂದೇಶದೊಂದಿಗೆ ಹೋಟೆಲ್ ಲೀ ಕೂರ್ಗ್‌ನಲ್ಲಿ ಮಂಗಳವಾರ ನಡೆದ ವಿಶ್ವ ಪ್ರವಾಸೋದ್ಯಮ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ 5 ಸಾವಿರಕ್ಕೂ ಹೆಚ್ಚು ಹೋಂ ಸ್ಟೇಗಳು ಇದ್ದು, 1200 ಹೋಂ ಸ್ಟೇಗಳು ನೋಂದಣಿಯಾಗಿರುವ ಬಗ್ಗೆ ಮಾಹಿತಿ ಇದೆ ಆ ನಿಟ್ಟಿನಲ್ಲಿ ಎಲ್ಲರೂ ನೋಂದಣಿ ಮಾಡಿಕೊಂಡು ಹೋಂ ಸ್ಟೇ ನಡೆಸಬೇಕು ಎಂದರು.

ಜಿಲ್ಲೆಯಲ್ಲಿ 2018 ರಲ್ಲಿ ಪ್ರಾಕೃತಿಕ ವಿಕೋಪ ಹಾಗೂ ಕೊರೊನಾ ನಂತರ ಆರ್ಥಿಕ ಚಟುವಟಿಕೆ ಕಡಿಮೆಯಾಗಿದೆ. ಸದ್ಯ ಇತ್ತೀಚೆಗೆ ಸುಧಾರಣೆಯಾಗುತ್ತಿದೆ ಎಂದರು.

ಆ ನಿಟ್ಟಿನಲ್ಲಿ ಪರಿಸರ ಸ್ನೇಹಿಯಾಗಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವಲ್ಲಿ ಎಲ್ಲರೂ ಕೈಜೋಡಿಸಬೇಕಿದೆ. ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶವಿದೆ. ಕುಶಾಲನಗರದಲ್ಲಿ ಪ್ರವಾಸೋದ್ಯಮ ಮಾರ್ಗದರ್ಶಿ ಮಾಹಿತಿ ಕೇಂದ್ರತೆರೆಯಬೇಕು ಎಂಬುದು ಬಹಳ ವರ್ಷಗಳಿಂದ ಪ್ರಸ್ತಾಪವಿದೆ ಎಂದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾತನಾಡಿ, ಕೊಡಗು ಜಿಲ್ಲೆ ಪ್ರಾಕೃತಿಕವಾಗಿ ತನ್ನದೇ ಆದ ಸ್ಥಾನ ಹೊಂದಿದ್ದು, ಪ್ರವಾಸಿಗರನ್ನು ಹೆಚ್ಚು ಆಕರ್ಷಣೀಯಗೊಳಿಸುತ್ತದೆ. ಆ ನಿಟ್ಟಿನಲ್ಲಿ ಪ್ರವಾಸಿಗರು ಸಹ ವಾರಾಂತ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಇನ್ನಷ್ಟು ಪ್ರವಾಸಿಗರು ಭೇಟಿ ನೀಡುವಂತಾಗಲು ನಿಖರ ಮಾಹಿತಿ ಒದಗಿಸುವಲ್ಲಿ ಅಗತ್ಯ ಕ್ರಮ ವಹಿಸಬೇಕು ಎಂದರು.

ಕೊಡಗು ಜಿಲ್ಲೆಗೆ ಪ್ರತ್ಯೇಕ ವಿಶ್ವವಿದ್ಯಾನಿಲಯ ಸ್ಥಾಪಿಸುವಲ್ಲಿ ಈಗಾಗಲೇ ಸರ್ಕಾರ ಬಜೆಟ್‌ನಲ್ಲಿ ಪ್ರಕಟಿಸಿದ್ದು, ಪ್ರತ್ಯೇಕ ವಿಶ್ವವಿದ್ಯಾನಿಲಯಕ್ಕೆ 'ಜ್ಞಾನ ಕಾವೇರಿ' ಹೆಸರು ಇಡುವುದಕ್ಕೆ ಚಿಂತನೆ ನಡೆದಿದೆ. ಪ್ರತ್ಯೇಕ ವಿಶ್ವವಿದ್ಯಾನಿಲಯ, ಹೆಲಿಪೋರ್ಟ್, ಸೇರಿದಂತೆ ಹಲವು ಹೊಸ ಹೊಸ ಯೋಜನೆಗಳು ಅನುಷ್ಠಾನಗೊಳ್ಳುತ್ತಿದ್ದು, ಪ್ರವಾಸಿಗರು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಕೊಡಗು ಜಿಲ್ಲೆಗೆ ಭೇಟಿ ನೀಡಲಿದ್ದಾರೆ ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದರು.

ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿ, ಮಡಿಕೇರಿ ನಗರ ಸ್ವಚ್ಛತೆ ಕಾಪಾಡುವಲ್ಲಿ ಎಲ್ಲರೂ ಕೈಜೋಡಿಸಬೇಕಿದೆ. ಆ ನಿಟ್ಟಿನಲ್ಲಿ ಪ್ರವಾಸಿಗರಿಗೆ ಮಾಹಿತಿ ನೀಡುವಂತಾಗಬೇಕು. ಖಾಸಗಿಯವರು ಉದ್ಯಾನವನ ನಿರ್ವಹಣೆಗೆ ಮುಂದಾದಲ್ಲಿ ಅವಕಾಶ ಮಾಡಲಾಗುವುದು ಎಂದರು.

ಪ್ರವಾಸೋದ್ಯಮ ಅವಲಂಬಿತರ ಸಂಘದ ಅಧ್ಯಕ್ಷ ಮಂಜುನಾಥ್‌ಕುಮಾರ್ ಮಾತನಾಡಿದರು. ಹೋಟೆಲ್ ಅಸೋಷಿಯೇಷನ್ ಅಧ್ಯಕ್ಷ ನಾಗೇಂದ್ರ ಪ್ರಸಾದ್ ಮಾತನಾಡಿ ಕೊಡಗು ಜಿಲ್ಲೆ 20 ವರ್ಷಗಳ ಹಿಂದೆ ಪ್ರವಾಸೋದ್ಯಮದಲ್ಲಿ ಅಷ್ಟಾಗಿ ಬೆಳವಣಿಗೆ ಹೊಂದಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತಿದ್ದು, 1.50 ಲಕ್ಷ ಜನರು ಹೋಟೆಲ್ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ಟ್ರಾವೆಲ್ ಕೂರ್ಗ್ ಅಸೋಷಿಯೇಷನ್ ಅಧ್ಯಕ್ಷ ಚೆಯ್ಯಂಡ ಸತ್ಯ ಅವರು, ಕೊಡಗು ಉತ್ಸವ ಆಯೋಜಿಸುವಂತಾಗಬೇಕು ಎಂದು ಸಲಹೆ ಮಾಡಿದರು.

ಹೋಂಸ್ಟೇ ಅಸೋಷಿಯೇಷನ್‌ನ ಮೋಂತಿ ಗಣೇಶ್, ನಾಣಿ, ಯೋಗಾನಂದ, ನವೀನ್ ಅಂಬೆಕಲ್ ಇತರರು ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧಿಸಿದಂತೆ ಹಲವು ಸಲಹೆ, ಮಾರ್ಗದರ್ಶನ ನೀಡಿದರು.

ಪೌರಾಯುಕ್ತರಾದ ವಿಜಯ ತೆರಿಗೆ ಪಾವತಿ ಮತ್ತಿತರ ಬಗ್ಗೆ ಮಾಹಿತಿ ನೀಡಿದರು. ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಯತೀಶ್ ಉಳ್ಳಾಲ್, ಹೋಂ ಸ್ಟೇ ಅಸೋಷಿಯೇಷನ್ ಅಧ್ಯಕ್ಷರಾದ ಕರ್ನಲ್ ಭರತ್, ಪ್ರವಾಸೋದ್ಯಮ ಜಿಲ್ಲಾ ಸಂಯೋಜಕರಾದ ಜತೀನ್ ಬೋಪಣ್ಣ ಇತರರು ಇದ್ದರು.

ಕೊಡಗು ಜಿಲ್ಲೆಯಲ್ಲಿ ಇಬ್ಬರು ಪಿಎಫ್‌ಐ, ಎಸ್‌ಡಿಪಿಐ ಕಾರ್ಯಕರ್ತರ ಬಂಧನ



ಟಿ.ಎ. ಹ್ಯಾರಿಸ್



ಅಪ್ಸರ್ ಕೊಡ್ಲಿಪೇಟೆ

ಮಡಿಕೇರಿ, ಸೆ.27– ಎನ್‌ಐಎ ಸೂಚನೆ ಮೇರೆಗೆ ರಾಜ್ಯಾದ್ಯಂತ ದಾಳಿ ನಡೆಸಿರುವ ಪೊಲೀಸರು ಎಸ್‌ಡಿಪಿಐ ಮತ್ತು ಪಿಎಫ್‌ಐ ಕಾರ್ಯಕರ್ತರನ್ನು ಬಂಧಿಸಿದ್ದು, ಕೊಡಗು ಜಿಲ್ಲೆಯಲ್ಲಿ ಇಬ್ಬರು ಕಾರ್ಯಕರ್ತರನ್ನು ಜಿಲ್ಲೆಯ ಪೊಲೀಸರು ಬಂಧಿಸಿದ್ದಾರೆ.

ಎಸ್‌ಡಿಪಿಐ ರಾಜ್ಯ ಸಂಘಟನಾ ಕಾರ್ಯದರ್ಶಿ ಅಪ್ಸರ್ ಕೊಡ್ಲಿಪೇಟೆ ಮತ್ತು ಪಿಎಫ್‌ಐ ಕಾರ್ಯಕರ್ತ ಅಪ್ಸರ್ ಬಂಧಿತರು.

ಅಪ್ಸರ್ ಬಂಧನ: ಎನ್‌ಐಎ ದಾಳಿ ಖಂಡಿಸಿ ಪ್ರತಿಭಟನೆ ಹಾಗೂ ಶಾಂತಿ ಕದಡುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಎಸ್‌ಡಿಪಿಐ ರಾಜ್ಯ ಸಂಘಟನಾ ಕಾರ್ಯದರ್ಶಿ ಅಪ್ಸರ್ ಕೊಡ್ಲಿಪೇಟೆ ಅವರನ್ನು ಮುಂಜಾಗ್ರತಾ ಕ್ರಮವಾಗಿ ಹಾಸನದಲ್ಲಿ ಬಂಧಿಸಲಾಗಿದೆ. ಸೋಮವಾರ ಕೊಡ್ಲಿಪೇಟೆಯಿಂದ ಹಾಸನಕ್ಕೆ ತೆರಳಿದ್ದ ಅಪ್ಸರ್ ಕೊಡ್ಲಿಪೇಟೆ ಅವರನ್ನು ಶನಿವಾರಸಂತೆ ಪೊಲೀಸರು ಹಾಸನ ಪೊಲೀಸರ ಸಹಕಾರದಿಂದ ಮಂಗಳವಾರ ಬಂಧಿಸಿ ಕೊಡಗು ಜಿಲ್ಲೆಗೆ ಕರೆ ತಂದಿದ್ದಾರೆ. ಬಳಿಕ ಸೋಮವಾರಪೇಟೆ ತಾಲೂಕು ದಂಡಾಧಿಕಾರಿಗಳ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹ್ಯಾರಿಸ್ ಬಂಧನ: ಕುಶಾಲನಗರ ಗ್ರಾಮಾಂತರ ಪೊಲೀಸರು ಸುಂಟಿಕೊಪ್ಪದ ಪಿಎಫ್‌ಐ ಕಾರ್ಯಕರ್ತನನ್ನು ಬಂಧಿಸಿ ಮೂರು ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದಾರೆ.

ಮೂಲತಃ ಸೋಮವಾರಪೇಟೆಯ ತಣ್ಣೀರುಹಳ್ಳ ನಿವಾಸಿ ಟಿ.ಎ.ಹ್ಯಾರಿಸ್ (37) ಬಂಧಿತ. ಪ್ರಸ್ತುತ ಸುಂಟಿಕೊಪ್ಪದಲ್ಲಿ ವಾಸವಿದ್ದ ಹ್ಯಾರಿಸ್ 2016 ರಲ್ಲಿ ಗುಡ್ಡೆಹೊಸೂರಿನಲ್ಲಿ ನಡೆದ ಪ್ರವೀಣ್ ಪೂಜಾರಿ ಹತ್ಯೆ ಕೇಸಿನಲ್ಲಿ ಭಾಗಿಯಾಗಿದ್ದ. ಈತನ ವಿರುದ್ಧ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಮತ್ತೆರಡು ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಡಿಕೇರಿ ಠಾಣೆಯಲ್ಲಿ ಎರಡು ಪ್ರಕರಣ ದಾಖಲಾಗಿದೆ. ಸಿಆರ್ ಪಿಸಿ 110, 151 ರ ಅನ್ವಯ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಹ್ಯಾರಿಸ್ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾಂದಲಪಟ್ಟಿಯಲ್ಲಿ ವನ ಮಹೋತ್ಸವ



ಮಡಿಕೇರಿ, ಸೆ.27– ಕೊಡಗು ಜಿಲ್ಲಾ ಬಿಜೆಪಿ ವತಿಯಿಂದ ಮಾಂದಲಪಟ್ಟಿಯಲ್ಲಿ ವನ ಮಹೋತ್ಸವ ಆಚರಿಸಲಾಯಿತು.

ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಪ್ರಮುಖರು, ಕಾರ್ಯಕರ್ತರು ಪ್ರವಾಸಿ ತಾಣದ ವಿವಿಧೆಡೆ ಔಷಧಿಯ ಗುಣವುಳ್ಳ ಹಾಗೂ ಹಣ್ಣಿನ ಗಿಡಗಳನ್ನು ನೆಟ್ಟರು. ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾಗೇಶ್ ಕುಂದಲ್ಪಾಡಿ ಮಾತನಾಡಿ, ರೈತ ಮೋರ್ಚಾ ವತಿಯಿಂದ ಕೃಷಿಕರಿಗೆ ಪೂರಕವಾದ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಅದರ ಜತೆಗೆ ಪರಿಸರ ಸಂರಕ್ಷಣೆ, ಅರಣ್ಯ ಪ್ರದೇಶದ ಉಳಿವಿನ ಉದ್ದೇಶದಿಂದ ವನಮಹೋತ್ಸವ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ಕಾಳಪ್ಪ, ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಡಾ.ಬಿ.ಸಿ. ನವೀನ್, ರಾಜ್ಯ ಸಮಿತಿ ಸದಸ್ಯೆ ಯಮುನಾ ಚಂಗಪ್ಪ, ಸ್ಥಳೀಯ ಜನಪ್ರತಿನಿಧಿಗಳು, ಪಕ್ಷದ ಕಾರ್ಯಕರ್ತರು ಈ ಸಂದರ್ಭ ಉಪಸ್ಥಿತರಿದ್ದರು.

ಮೈಸೂರು ದಸರಾ ಕವಿಗೋಷ್ಠಿಗೆ ಆಯ್ಕೆ



ನಾಗೇಶ್ ಕಾಲೂರು



ಎಸ್. ಎಂ.ರಜನಿ

ಗೋಣಿಕೊಪ್ಪ, ಸೆ.27– ಮೈಸೂರು ದಸರಾ ಕವಿಗೋಷ್ಠಿಗೆ ಕೊಡಗು ಜಿಲ್ಲೆಯ ನಾಗೇಶ್ ಕಾಲೂರು ಮತ್ತು ಎಸ್.ಎಂ. ರಜನಿ ಅವರುಗಳ ಕವನ ಆಯ್ಕೆಯಾಗಿದೆ.

ಅ.3 ರಂದು ಮಾನಸ ಗಂಗೋತ್ರಿ ಸೆನೆಟ್ ಸಭಾಂಗಣದಲ್ಲಿ ಆಯೋಜಿಸಿರುವ ಪ್ರಧಾನ ಕವಿಗೋಷ್ಠಿಯಲ್ಲಿ ನಾಗೇಶ್ ಕಾಲೂರು ಕೊಡವ ಭಾಷೆ, ಎಸ್.ಎಂ. ರಜನಿಯವರ ಭಾಷೆಯ ಕವನ ವಾಚಿಸಲಿದ್ದಾರೆ.

ವಿರಾಜಪೇಟೆಯಲ್ಲಿ ಪೇಸಿಎಂ ಅಭಿಯಾನ

ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರ ಬಂಧನ, ಬಿಡುಗಡೆ



ವಿರಾಜಪೇಟೆ, ಸೆ.27– ರಾಜ್ಯಾದ್ಯಂತ ಪೇಸಿಎಂ ಅಭಿಯಾನ ನಡೆಯುತ್ತಿದ್ದು, ವಿರಾಜಪೇಟೆಯಲ್ಲೂ ಪೇಸಿಎಂ ಅಭಿಯಾನ ನಡೆದಿದೆ ಪೇಸಿಎಂ ಪೋಸ್ಟ್ ಅಂಟಿಸಿದ 70 ಮಂದಿ ಕಾಂಗ್ರೆಸ್ ಕಾರ್ಯಕರ್ತರನ್ನು ನಗರ ಠಾಣೆ ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರು ಪೇಸಿಎಂ ಅಭಿಯಾನ ನಡೆಸುತ್ತಿರುವ ವಿಷಯ ತಿಳಿದ ಪೊಲೀಸರು ಇದನ್ನು ತಡೆಯುವ ಸಲುವಾಗಿ ನಗರ ಕಾಂಗ್ರೆಸ್ ಕಚೇರಿ ಎದುರು ಜಮಾಯಿಸಿದ್ದರು. ಪೊಲೀಸರು ತಮ್ಮ ಅಭಿಯಾನಕ್ಕೆ ಅಡ್ಡಿಪಡಿಸುತ್ತಾರೆ ಎಂದು ತಿಳಿದ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸರಿಗೂ ತಿಳಿಯದಂತೆ ನಗರದ ಹೃದಯ ಭಾಗದಲ್ಲಿರುವ ಗಡಿಯಾರ ಕಂಬದ ಬಳಿ ಪೇಸಿಎಂ ಪೋಸ್ಟರ್ ಅಂಟಿಸಿದರು. ಬಳಿಕ ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಈ ಸಂದರ್ಭ ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ ಅವರ ನೇತೃತ್ವದಲ್ಲಿ ಠಾಣಾಧಿಕಾರಿ ಶ್ರೀಧರ್ ಹಾಗೂ ಸಿಬ್ಬಂದಿಗಳು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರನ್ನು ಬಂಧಿಸಿ ಠಾಣೆಗೆ ಕರೆದೊಯ್ಯಲಾಯಿತು. ಈ ವೇಳೆ ಪೊಲೀಸ್ ಠಾಣೆ ಎದುರಿನಲ್ಲಿಯೇ ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಲಾಯಿತು.

ಬಿಡುಗಡೆ ನಂತರ ಕಾಂಗ್ರೆಸ್ ಪಕ್ಷದ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಎಸ್. ಪೊನ್ನಣ್ಣ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಕಮಿಷನ್ ಸರ್ಕಾರ ಎಂದು ಸಾರ್ವಜನಿಕರೇ ಹೇಳುತ್ತಿದ್ದಾರೆ. ಜನರಿಗೆ ಸುಳ್ಳು ಹೇಳಿ ಸರಕಾರ ನಡೆಸುತ್ತಿದ್ದಾರೆ. ಈಗ ವಿರೋಧ ಪಕ್ಷದವರು ಜನರ ಮುಂದೆ ಹೋಗುವುದಾಗಿ ತಿಳಿಸಿದರು.

ಈ ಸಂದರ್ಭ ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷ ದರ್ಮಾಜ ಉತ್ತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ರಂಜಿ ಪೂಣಚ್ಚ, ಅಲ್ಪ ಸಂಖ್ಯಾತ ಘಟಕದ ಫರೂಕ್, ನಗರ ಘಟಕದ ಅಧ್ಯಕ್ಷ ಎಂ.ತಿಮ್ಮಯ್ಯ, ಶೈಯದ್ ಶಬೀರ್, ಪುರಸಭೆ ಸದಸ್ಯರಾದ ಸಿ.ಕೆ.ಪ್ರಥ್ವಿನಾಥ್, ಎಸ್.ಹೆಚ್.ಮತೀನ್, ಮಹ್ಮದ್ ರಾಫಿ, ಅಗಸ್ಟೀನ್ ಬೆನ್ನಿ, ಮುಖಂಡರಾದ ಗೋಪಾಲ ಕೃಷ್ಣ, ಚಿಲ್ಲವಂಡ ಕಾವೇರಪ್ಪ ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಜೆಡಿಎಸ್ ಮುಖಂಡ ಮೊಯಿನುದ್ದೀನ್ ನಿಧನ



ವಿರಾಜಪೇಟೆ, ಸೆ.27– ವಿರಾಜಪೇಟೆ ಪಟ್ಟಣ ಪಂಚಾಯ್ತಿ ಮಾಜಿ ಉಪಾಧ್ಯಕ್ಷರು ಹಾಗೂ ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷರಾಗಿದ್ದ ಎಸ್.ಹೆಚ್.ಮೊಯಿನುದ್ದೀನ್(62) ಅವರು ಮೈಸೂರು ಆಸ್ಪತ್ರೆಯಲ್ಲಿ ಇಂದು ನಿಧನರಾಗಿದ್ದಾರೆ.

ಮೊಯಿನುದ್ದೀನ್ ಅವರು ವಿರಾಜಪೇಟೆ ಮುಸ್ಲಿಂ ಸಹಕಾರಿ ಬ್ಯಾಂಕ್‌ನ ಸ್ಥಾಪಕ ಅಧ್ಯಕ್ಷರಾಗಿ, ಜಿಲ್ಲಾ ಚೇಂಬರ್ ಆಫ್ ಕಾಮರ್ಸ್‌ನ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿರುವುದಲ್ಲದೆ, ವಿವಿಧ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಮೃತರು ಪತ್ನಿ, ಇಬ್ಬರು ಪುತ್ರಿ, ಇಬ್ಬರು ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಸಂಸ್ಕಾರ ಬುಧವಾರ ನಗರದ ಅವರ ಸ್ವಗ್ರಾಮದಲ್ಲಿ ನಡೆಯಲಿದೆ. **ಸಂತಾಪ:** ಮೊಯಿನುದ್ದೀನ್ ಅವರ ನಿಧನಕ್ಕೆ ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್, ವಿರಾಜಪೇಟೆ ತಾಲೂಕು ಜೆಡಿಎಸ್ ಅಧ್ಯಕ್ಷ ಪಿ.ಎ.ಮಂಜುನಾಥ್ ಸಂತಾಪ ವ್ಯಕ್ತಪಡಿಸಿದ್ದಾರೆ.

ಚಾ.ನಗರ ಜಿಲ್ಲಾ ದಸರಾ ಅದ್ಧೂರಿ ಆರಂಭ

● ಪೂಜಾ ಕೈಂಕರ್ಯದೊಂದಿಗೆ ಸಾಂಪ್ರದಾಯಿಕ ಚಾಲನೆ ● ಗಮನ ಸೆಳೆದ ಕಲಾ ತಂಡ–ಸ್ತಬ್ಧಚಿತ್ರಗಳು



ಚಾಮರಾಜನಗರ, ಸೆ.27–ಮೈಸೂರು ದಸರಾ ಮಹೋತ್ಸವ ಸಮಿತಿ ಸಹಯೋಗದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿರುವ ನಾಲ್ಕು ದಿನಗಳ ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವಕ್ಕೆ ಚಾಮರಾಜೇಶ್ವರ ದೇವಾಲಯದಲ್ಲಿ ಶ್ರೀ ಚಾಮರಾಜೇಶ್ವರಸ್ವಾಮಿಗೆ ಪೂಜೆ ಸಲ್ಲಿಸುವ ಮೂಲಕ ಇಂದು ಅದ್ಧೂರಿ ಚಾಲನೆ ದೊರೆಯಿತು.

ಶಾಸಕ ಸಿ.ಪುಟ್ಟರಂಗಶೆಟ್ಟಿ, ದೇವಾಲಯದಲ್ಲಿ ಪೂಜೆ ಸಲ್ಲಿಸಿ, ದೀಪ ಬೆಳಗಿಸುವ ಮೂಲಕ ದಸರಾ ಮಹೋತ್ಸವಕ್ಕೆ ಸಾಂಪ್ರದಾಯಕ ಚಾಲನೆ ನೀಡಿದರು. ಚಾಮುಂಡೇಶ್ವರಿ, ಕೆಂಪನಂಜಮ್ಮ ದೇವರಿಗೂ ಪೂಜೆ ಸಲ್ಲಿಸಲಾಯಿತು. ದಸರಾ ಅಂಗವಾಗಿ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನೆರವೇರಿದವು. ದೇವಾಲಯವನ್ನು ಹೂವಿನಿಂದ ಅಲಂಕರಿಸಲಾಗಿತ್ತು. ಜಾನಪದ ಕಂಸಾಳೆ, ಗೊರವರ ಕುಣಿತ, ವೀರಗಾಸೆ, ನಾದಸ್ವರ ತಂಡಗಳು ಪಾಲ್ಗೊಂಡು ಉದ್ಘಾಟನಾ ಮೆರಗನ್ನು ಹೆಚ್ಚಿಸಿದವು.

ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಎರಡು ವರ್ಷಗಳಿಂದ ಕೋವಿಡ್ ಕಾರಣದಿಂದಾಗಿ ವಿಜೃಂಭಣೆಯಿಂದ ದಸರಾ ಮಹೋತ್ಸವ ಆಚರಿಸಲಾಗಿರಲಿಲ್ಲ ಈ ಬಾರಿ ಸರ್ಕಾರದಿಂದ ಚಾಮರಾಜನಗರ ದಸರಾ ಮಹೋತ್ಸವಕ್ಕೆ 1 ಕೋಟಿ ರೂ. ಅನುದಾನ ನಿಗದಿಯಾಗಿದ್ದು, ನಾಲ್ಕು ದಿನಗಳ ಕಾಲ ಅದ್ಧೂರಿಯಾಗಿ ದಸರಾ ಮಹೋತ್ಸವ ನಡೆಯಲಿವೆ ಎಂದರು.

ಗಮನ ಸೆಳದ ಮೆರವಣಿಗೆ: ದಸರಾ ಅಂಗವಾಗಿ ಚಾಮುಂಡೇಶ್ವರಿ ಮೂರ್ತಿ ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು ಹಾಗೂ ಇಲಾಖೆಗಳ ಸ್ತಬ್ಧ ಚಿತ್ರಗಳು ಗಮನ ಸೆಳೆದವು. ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ನಂದಿಧ್ವಜಕ್ಕೆ ಪುಷ್ಪಾರ್ಚನೆ ಮೂಲಕ ಡಿಸಿ ಚಾರುಲತಾ ಸೋಮಲ್, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ಸೇರಿದಂತೆ ಗಣ್ಯರು ಮೆರವಣಿಗೆಗೆ ಚಾಲನೆ ನೀಡಿದರು. ಅಲಂಕೃತ ಸಾರೋಟು ವಾಹನದಲ್ಲಿ ಪ್ರತಿಷ್ಠಾಪಿಸಿದ್ದ ಚಾಮುಂಡೇಶ್ವರಿ ಮೂರ್ತಿ ಪ್ರಮುಖ ಬೀದಿಗಳಲ್ಲಿ ಸಾಗಿ ಮೆರವಣಿಗೆ ಚಾಮರಾಜೇಶ್ವರ ದೇವಾಲಯ ತಲುಪಿತು. ನಂದಿಧ್ವಜ, ನಾದಸ್ವರ, ಬ್ಯಾಂಡ್‌ಸೆಟ್, ಡೊಳ್ಳುಕುಣಿತ, ನಾಸಿಕ್ ಡೋಲ್, ಬ್ರಾಸ್ ಬ್ಯಾಂಡ್‌ಸೆಟ್, ವೀರಗಾಸೆ, ಗೊರವರ ಕುಣಿತ, ಕಂಸಾಳೆ ನೃತ್ಯ, ಬೀಸು ಕಂಸಾಳೆ ವಿವಿಧ ಕಲಾ ತಂಡಗಳು ಮೆರವಣಿಗೆಯ ಉತ್ಸಾಹ ಹೆಚ್ಚಿಸಿದವು. ವಿವಿಧ ಇಲಾಖೆಗಳ ಸ್ತಬ್ಧ ಚಿತ್ರಗಳು ಆಯಾ ಇಲಾಖೆ ಕಾರ್ಯಕ್ರಮಗಳ ಜಾಗೃತಿ ಮೂಡಿಸಿದವು.

ಇದೇ ವೇಳೆ ಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಆಯೋಜಿಸಿದ್ದ ಚಿತ್ರಕಲಾ ಪ್ರದರ್ಶನಕ್ಕೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಚಾಲನೆ ನೀಡಿದರು. ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ತಹಶೀಲ್ದಾರ್ ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ ಇತರೆ ಗಣ್ಯರು ಪಾಲ್ಗೊಂಡಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಚಿವರಿಂದ ವಿಧ್ಯುಕ್ತ ಚಾಲನೆ



ಚಾಮರಾಜನಗರ: ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಮುಂಭಾಗದ ಮುಖ್ಯ ವೇದಿಕೆಯಲ್ಲಿಂದು ಚಾಮರಾಜನಗರ ದಸರಾ ಅಂಗವಾಗಿ ಆಯೋಜಿಸಲಾಗಿದ್ದ ದಸರಾ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೀಪ ಬೆಳಗಿಸಿ, ನಗಾರಿ ಬಾರಿಸಿ ಉದ್ಘಾಟಿಸುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಚಾಮರಾಜನಗರ ದಸರಾ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಚಿವರು, ದಸರಾ ಐತಿಹಾಸಿಕ ಹಾಗೂ ಪಾರಂಪರಿಕ ಹಬ್ಬ. ನಮ್ಮ ಪೂರ್ವಜರ ಸಂದೇಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ದಸರಾ ಆಚರಣೆ ಅವಶ್ಯ. ನಾಡಹಬ್ಬ ದಸರಾ ಕರ್ನಾಟಕದ ಮೈಸೂರಿನಲ್ಲಿ ಮಾತ್ರವಲ್ಲ. ದೇಶದ ಅನೇಕ ಭಾಗಗಳಲ್ಲಿ ಆಚರಣೆಯಾಗುತ್ತಿದೆ. ಜನರಲ್ಲಿ ನಾವೆಲ್ಲ ಒಂದೇ ಎನ್ನುವ ಐಕ್ಯತಾ ಭಾವನೆ ಮೂಡಿಸುವುದೇ ಆಚರಣೆಯ ಉದ್ದೇಶ. ಚಾಮರಾಜನಗರ ಜಿಲ್ಲೆಯಾಗಿ 25 ವರ್ಷ ತುಂಬಿದ ಸಂದರ್ಭದಲ್ಲಿ ದಸರಾ ಆಚರಣೆ ವಿಶೇಷವಾಗಿದೆ. ಚಾಮರಾಜನಗರ ಜಿಲ್ಲೆ ಆರ್ಥಿಕವಾಗಿ ಹಿಂದುಳಿದಿದ್ದರೂ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ ಎಂದರು.

ಶಾಸಕ ಎನ್.ಮಹೇಶ್ ಮಾತನಾಡಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಸಿ.ಎಸ್.ನಿರಂಜನಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ನಗರಸಭೆ ಅಧ್ಯಕ್ಷೆ ಸಿ.ಎಂ.ಆಶಾ, ನಗರಸಭೆಯ 12ನೇ ವಾರ್ಡ್ ಸದಸ್ಯರಾದ ಅಬ್ರಾರ್ ಅಹಮದ್, ಸದಸ್ಯರಾದ ಮಹೇಶ್, ಡಿಸಿ ಚಾರುಲತಾ ಸೋಮಲ್, ವಿವಿಧ ಇಲಾಖಾಧಿಕಾರಿಗಳು ಕಾರ್ಯಕ್ರಮದಲ್ಲಿದ್ದರು.

ಸಚಿವರಿಗೆ ಕಪ್ಪು ಬಾವುಟ ಪ್ರದರ್ಶಿಸಿದ ನಗರಸಭಾ ಸದಸ್ಯ



ಚಾಮರಾಜನಗರ: ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರಿಗೆ ನಗರಸಭಾ ಸದಸ್ಯರೊಬ್ಬರು ಕಪ್ಪು ಬಾವುಟ ಪ್ರದರ್ಶಿಸಿದ ಘಟನೆ ನಗರದ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗ ಆಯೋಜಿಸಿದ್ದ ದಸರಾ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ನಡೆಯಿತು.

ವಿ.ಸೋಮಣ್ಣ ಅವರು ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿದ ನಂತರ ದೇವಸ್ಥಾನದ ಮುಂಭಾಗ ಹಾಕಿದ್ದ ಪ್ರಧಾನ ವೇದಿಕೆಗೆ ಆಗಮಿಸಿ ಆಸೀನರಾಗಿದ್ದರು. ಈ ವೇಳೆ ವೇದಿಕೆಗೆ ಆಗಮಿಸಿದ ನಗರಸಭಾ ಸದಸ್ಯ ಆರ್.ಪಿ.ನಂಜುಂಡಸ್ವಾಮಿ ಸಚಿವರಿಗೆ ಕಪ್ಪು ಬಾವುಟ ಪ್ರದರ್ಶಿಸಿ, ಧಿಕ್ಕಾರ ಕೂಗಿದರು.

ದಿಢೀರನೇ ನಡೆದ ಈ ಘಟನೆಯಿಂದ ವಿ.ಸೋಮಣ್ಣ ಸೇರಿದಂತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕರು, ಜಿಲ್ಲಾಧಿಕಾರಿಗಳು ಎಲ್ಲರೂ ವಿಚಲಿತರಾದರು. ತಕ್ಷಣವೇ ಆರ್.ಪಿ.ನಂಜುಂಡಸ್ವಾಮಿ ಅವರನ್ನು ಪೊಲೀಸರು ವಶಕ್ಕೆ ಪಡೆದರು. ಈ ನಡುವೆ ವೇದಿಕೆ ಮುಂಭಾಗದಲ್ಲಿದ್ದ ಮಹಿಳೆಯೊಬ್ಬರೂ ಸಚಿವರು ಹಾಗೂ ಶಾಸಕರಿಗೆ ಧಿಕ್ಕಾರ ಕೂಗ ತೊಡಗಿದರು. ಅವರನ್ನು ಸಹ ಪೊಲೀಸರು ಎಳೆದೊಯ್ದರು. ಘಟನೆಯಿಂದ ಕೆಂಡಮಂಡಲರಾದ ಸಚಿವ ವಿ.ಸೋಮಣ್ಣ ಅವರು ಬಹಿರಂಗವಾಗಿಯೇ ಪೊಲೀಸರನ್ನು ತರಾಟೆಗೆ ತೆಗೆದುಕೊಂಡರು. ನಂತರ ಉದ್ಘಾಟನಾ ಕಾರ್ಯಕ್ರಮ ಆರಂಭವಾಯಿತು. ದಸರಾ ಮಹೋತ್ಸವ ಹಿನ್ನೆಲೆ ನಗರದಲ್ಲಿ ಮಾಡಿರುವ ದೀಪಾಲಂಕಾರವನ್ನು ಜೋಡಿರಸ್ತೆಯ ತಹಸೀಲ್ದಾರ್ ಕಚೇರಿವರೆಗೆ ನಿಲ್ಲಿಸಲಾಗಿತ್ತು. ಇದನ್ನು ಜೋಡಿರಸ್ತೆ ಕೊನೆಗೊಳ್ಳುವ ರಾಮಸಮುದ್ರದವರೆಗೆ ವಿಸ್ತರಿಸಬೇಕು ಎಂದು ಚಾ.ನಗರಸಭಾ ಸದಸ್ಯ ಆರ್.ಪಿ.ನಂಜುಂಡಸ್ವಾಮಿ ಒತ್ತಾಯಿಸಿದ್ದರು. ಇದು ಈಡೇರದ ಕಾರಣ ನಂಜುಂಡಸ್ವಾಮಿ ಸಚಿವರಿಗೆ ಕಪ್ಪುಬಾವುಟ ಪ್ರದರ್ಶಿಸಿದ್ದಾರೆ.

ಕುಣಿದು ಕುಪ್ಪಳಿಸಿದ ಸಚಿವ ಸೋಮಣ್ಣ...!



ಚಾಮರಾಜನಗರ : ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಚೆಲ್ಲಿದರು ಮಲ್ಲಿಗೆಂಯ ಜಾನಪದ ಹಾಡಿಗೆ ದಸರಾ ವೇದಿಕೆ ಮೇಲೆ ಜಾನಪದ ಹಾಡುಗಾರರೊಂದಿಗೆ ಕೆಲ ಹೊತ್ತು ಹೆಜ್ಜೆ ಹಾಕಿ ಗಮನ ಸೆಳೆದರು.

ಡಾ.ಅಪ್ಪಗೆರೆ ತಿಮ್ಮರಾಜು, ಡಾ.ಮಳವಳ್ಳಿ ಮಹದೇವಸ್ವಾಮಿ, ಸಿ.ಎಂ. ನರಸಿಂಹಮೂರ್ತಿ ಅವರು ಚಾಮರಾಜೇಶ್ವರ ದೇವಾಲಯದ ಮುಂಭಾಗದ ವೇದಿಕೆಯಲ್ಲಿ ಚೆಲ್ಲಿದರು ಮಲ್ಲಿಗೆಂಯ ಹಾಡು ಹೇಳಿ ನೃತ್ಯ ಮಾಡುತ್ತಿದ್ದ ವೇಳೆ ಜಿಲ್ಲಾ ಉಸ್ತುವಾರಿ ಸಚಿವರು ವೇದಿಕೆ ಏರಿ ಸಂತಸದಿಂದ ಕಲಾವಿದರನ್ನು ಅಭಿನಂದಿಸಿದರು. ಈ ವೇಳೆ ಜಾನಪದ ಕಲಾವಿದರ ಜೊತೆ ಹಾಡಿಗೆ ಕೆಲ ಹೆಜ್ಜೆ ಹಾಕಿ ಸಂಭ್ರಮಿಸಿದರು.

ಸೆ.30ಕ್ಕೆ ಗುಂಡ್ಲುಪೇಟೆಯಿಂದ ಭಾರತ್ ಜೋಡೋ ಪಾದಯಾತ್ರೆ ರಾಜ್ಯ ಪ್ರವೇಶ

50 ಸಾವಿರ ಜನರು ಪಾಲ್ಗೊಳ್ಳುವ ನಿರೀಕ್ಷೆ: ಧ್ರುವನಾರಾಯಣ್



ಚಾಮರಾಜನಗರ, ಸೆ.27–ಕಾಂಗ್ರೆಸ್ ರಾಷ್ಟ್ರೀಯ ನಾಯಕ ರಾಹುಲ್‌ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೋ ಪಾದಯಾತ್ರೆಯು ಸೆ.30ರಂದು ಗುಂಡ್ಲುಪೇಟೆ ಮೂಲಕ ರಾಜ್ಯ ಪ್ರವೇಶಿಸಲಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಶಾಂತಿ, ಸಾಮರಸ್ಯ ಕಾಪಾಡುವ ಸಲುವಾಗಿ ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಈ ಯಾತ್ರೆಯು ಸೆ.30 ರಂದು ಗುಂಡ್ಲುಪೇಟೆಗೆ ಬೆಳಗ್ಗೆ 9 ಗಂಟೆಗೆ ಆಗಮಿಸಲಿದೆ. ಗೂಡ್ಲೂರಿನಿಂದ ಕಾಡು ಆರಂಭವಾಗುವುದರಿಂದ ಅಲ್ಲಿಂದ ವಾಹನದಲ್ಲಿ ಪಟ್ಟಣಕ್ಕೆ ಆಗಮಿಸಲಿದ್ದು, ಗುಂಡ್ಲುಪೇಟೆಯ ಅಂಬೇಡ್ಕರ್ ಭವನ ಎದುರಿನ ಮೈದಾನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ರಾಷ್ಟ್ರೀಯ ಮಟ್ಟದ ನಾಯಕರಾದ ಮಧ್ಯ ಪ್ರದೇಶದ ಮಾಜಿ ಸಿಎಂ ದಿಗ್ವಿಜಯಸಿಂಗ್, ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ವಿಧಾನಸಭಾ ವಿಪಕ್ಷ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿಪಕ್ಷ ನಾಯಕ ಹರಿಪ್ರಸಾದ್, ಮಾಜಿ ಸಚಿವ ಮುನಿಯಪ್ಪ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ನಾಯಕರು ಪಾದಯಾತ್ರೆ ಹಾಗೂ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಧ್ರುವನಾರಾಯಣ್ ಮಾಹಿತಿ ನೀಡಿದರು.

ಭಾರತ್ ಜೋಡೋ ಪಾದಯಾತ್ರೆ ಅಂಗವಾಗಿ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಪಂಚಾಯ್ತಿ ಮಟ್ಟದಲ್ಲಿ ಪೂರ್ವಭಾವಿ ಸಭೆ ನಡೆಸಲಾಗಿದೆ. ಕನಿಷ್ಠ 30 ಸಾವಿರದಿಂದ ಗರಿಷ್ಠ 50 ಸಾವಿರ ಜನರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು. ಜಿಲ್ಲೆಗೆ ಆಗಮಿಸುವ ಪ್ರಮುಖ ನಾಯಕರನ್ನು ಸ್ವಾಗತಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಗುಂಡ್ಲುಪೇಟೆಯಲ್ಲಿ ವೇದಿಕೆ ಕಾರ್ಯಕ್ರಮ ಮುಗಿದ ಬಳಿಕ ಮತ್ತೆ ಪಾದಯಾತ್ರೆ ಆರಂಭವಾಗಲಿದೆ. ಗುಂಡ್ಲುಪೇಟೆ ಪಟ್ಟಣದಿಂದ ಸುಮಾರು 4 ಕಿಮೀ ದೂರದಲ್ಲಿರುವ ಶನೇಶ್ವರ ದೇವಸ್ಥಾನದ ಬಳಿ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿದೆ. ನಂತರ ಬುಡಕಟ್ಟು ಜನರು ಹಾಗೂ ಜಿಲ್ಲಾಸ್ಪತ್ರೆ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬದರೊಂದಿಗೆ ರಾಹುಲ್ ಗಾಂಧಿ ಸಂವಾದ ನಡೆಸುವರು. ಬಳಿಕ ಪಾದಯಾತ್ರೆ ಮತ್ತೆ ಮುಂದುವರೆಯುವುದು. ಗುಂಡ್ಲುಪೇಟೆ ತಾಲೂಕಿನ ಬೇಗೂರಿನಲ್ಲಿ ರಾತ್ರಿ ವಾಸ್ತವ್ಯ. ಅ.1ರಂದು ಬೆಳಗ್ಗೆ 6.30ಕ್ಕೆ ಮತ್ತೆ ಪಾದಯಾತ್ರೆ ಆರಂಭವಾಗಲಿದ್ದು, ಬೇಗೂರು ಸಮೀಪದ ತೊಂಡವಾಡಿ ಗೇಟ್ ಮೂಲಕ ಮೈಸೂರು ಜಿಲ್ಲೆಗೆ ಪಾದಯಾತ್ರೆ ತೆರಳಲಿದೆ ಎಂದು ಧ್ರುವನಾರಾಯಣ್ ವಿವರಿಸಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಸ್.ಜಯಣ್ಣ, ಎಸ್.ಬಸವರಾಜು, ಗುಂಡ್ಲುಪೇಟೆ ಯುವ ಮುಖಂಡ ಗಣೇಶ್‌ಪ್ರಸಾದ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಸುದ್ದಿಗೋಷ್ಠಿಯಲ್ಲಿದ್ದರು.

> ಭಾರತ್ ಜೋಡೋ ಪಾದಯಾತ್ರೆಯು ರಾಜಕೀಯ ಉದ್ದೇಶದಿಂದ ನಡೆಯುವುದಿಲ್ಲ. ರಾಜ್ಯವನ್ನು ಭ್ರಷ್ಟಾಚಾರ ಕಳಂಕದಿಂದ ಮುಕ್ತವಾಗಿಸಲು, ದೇಶದ ಜನರ ಹಸಿವು ನೀಗಿಸಿ ನಮ್ಮ ಅನ್ನದಾತರ ಬದುಕನ್ನು ಭದ್ರವಾಗಿಸಲು ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಈ ಪಾದಯಾತ್ರೆಯಲ್ಲಿ ಜನರು ಪಾಲ್ಗೊಳ್ಳಬೇಕು.
>
> –ಆರ್.ಧ್ರುವನಾರಾಯಣ್, ಕೆಪಿಸಿಸಿ ಕಾರ್ಯಾಧ್ಯಕ್ಷ.

ಮೈಸೂರು ಮಿತ್ರ



ಮೈಸೂರಿನ ವಾರ್ಡ್ ನಂ. 6ರ ಗೋಕುಲಂ ಬೃಂದಾವನ ಬಡಾವಣೆಯ ನವೀಕೃತ ಹಳೆಯ ನಂದಿ ಪ್ರತಿಮೆ ಹಾಗೂ ಕಾರಂಜಿ ವೃತ್ತವನ್ನು ನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಉದ್ಘಾಟಿಸಿದರು. ಈ ವೇಳೆ ಇಂಜಿನಿಯರ್ ನಿವೇದಿತಾ, ಸ್ಥಳೀಯ ಮುಖಂಡ ರಾದ ಕುಮಾರ್, ಲಕ್ಷ್ಮೀಕಾಂತ್, ಕೃಷ್ಣಪ್ಪ, ರಘು, ಮೋಹನ್, ಮುರಳಿ ಇದ್ದರು.

ಒಂದನೇ ಪುಟದಿಂದ

ದಸರಾ ಕ್ರೀಡಾಕೂಟ

ಹೆಚ್ಚು ರೂಂಗಳನ್ನು ಕಾಯ್ದಿರಿಸಲಾಗಿದೆ. ವಸತಿ ಸ್ಥಳಗಳಿಂದ ಸ್ಪರ್ಧೆಗಳು ನಡೆಯುವ ಸ್ಥಳಕ್ಕೆ ಹೋಗಿಬರಲು ಸಾರಿಗೆ ವ್ಯವಸ್ಥೆ ಮಾಡಲಾಗಿದ್ದು, ಎಲ್ಲಾ ಕ್ರೀಡಾಪಟುಗಳಿಗೂ ಟೀ ಶರ್ಟ್ ನೀಡಲಾಗುವುದು. ಮುಖ್ಯವಾಗಿ ಎಲ್ಲಾ ಕ್ರೀಡಾಪಟುಗಳಿಗೂ ಆನ್‌ಲೈನ್‌ನಲ್ಲಿ ನೋಂದಣಿ ಮಾಡಲಾಗಿದ್ದು, ಗುರುತಿನ ಚೀಟಿಯನ್ನು ಸಹ ನೀಡಲಾಗುವುದು ಎಂದರು.

ನಗದು ಪುರಸ್ಕಾರ: ವೈಯಕ್ತಿಕ ಕ್ರೀಡೆಗಳಲ್ಲಿ ಪ್ರಥಮ 8 ಸಾವಿರ ರೂ., ದ್ವಿತೀಯ 5 ಸಾವಿರ ರೂ. ಹಾಗೂ ತೃತೀಯ ಬಹುಮಾನ 2500 ರೂ. ನಿಗದಿಪಡಿಸಲಾಗಿದೆ. ಟೇಬಲ್ ಟೆನ್ನಿಸ್, ಟೆನ್ನಿಸ್ ಹಾಗೂ ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ ಸ್ಥಾನಕ್ಕೆ 4 ಸಾವಿರ ರೂ.,(ಕಳೆದ ಬಾರಿ 2 ಸಾವಿರ ರೂ. ಇತ್ತು) ದ್ವಿತೀಯ 3 ಹಾಗೂ ತೃತೀಯ ಸ್ಥಾನ 2 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಗುಂಪು ಕ್ರೀಡೆಗಳಲ್ಲಿ ಪ್ರಥಮ ಸ್ಥಾನಕ್ಕೆ 3 ಸಾವಿರ ರೂ.(ಪ್ರತಿ ಒಬ್ಬರಿಗೆ), ದ್ವಿತೀಯ 2 ಹಾಗೂ ತೃತೀಯ ಸ್ಥಾನಕ್ಕೆ 1500 ರೂ. ನಗದು ಬಹುಮಾನ ನೀಡಲಾಗುವುದು. ಹಾಗೆಯೇ ದಸರಾ ಕ್ರೀಡಾಕೂಟದಲ್ಲಿ ನೂತನ ದಾಖಲೆ ನಿರ್ಮಿಸಿದವರಿಗೆ 20 ಸಾವಿರ ರೂ ನಗದು ಪುರಸ್ಕಾರ ನೀಡಲಾಗುವುದು.

ಜೀವ ವಿಮೆ: ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳಿಗೆ ಬಜಾಜ್ ಅಲೈಯನ್ಸ್ ಸಂಸ್ಥೆ ವತಿಯಿಂದ ಜೀವ ವಿಮೆ ಮಾಡಿಸಲಿದ್ದು, ಈಗಾಗಲೇ 7.31 ಲಕ್ಷ ರೂ. ಪ್ರೀಮಿಯಂ ಹಣ ಪಾವತಿಸಲಾಗಿದೆ. ಮರಣ ಸಂಭವಿಸಿದ್ದಲ್ಲಿ 3 ಲಕ್ಷ ರೂ., ಶಾಶ್ವತ ಅಂಗವೈಕಲ್ಯತೆಗೆ 3 ಲಕ್ಷ ರೂ. ಹಾಗೂ ಗಾಯಗೊಂಡ ವೈದ್ಯಕೀಯ ಚಿಕಿತ್ಸೆಗಾಗಿ 3 ಲಕ್ಷ ರೂ. ವರೆಗೂ ವಿಮೆ ನೀಡಲಾಗುವುದು ಎಂದರು.

ಕ್ರೀಡಾ ಜ್ಯೋತಿ...: ದಸರಾ ಕ್ರೀಡಾಕೂಟದ ಕ್ರೀಡಾ ಜ್ಯೋತಿಯನ್ನು ಸೆ.29ರ ಬೆಳಿಗ್ಗೆ 8.30ಕ್ಕೆ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಬೆಳಗಿಸಲಾಗುವುದು. ಕ್ರೀಡಾ ಜ್ಯೋತಿ ಸಂಚಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಲಿದ್ದಾರೆ. ಬಳಿಕ ಕ್ರೀಡಾ ಜ್ಯೋತಿಯು ಕ್ರೆಡಿಟ್ ಐ ಸಂಸ್ಥೆಯ ಎಂ.ಪಿ.ವರ್ಷ ನೇತೃತ್ವದಲ್ಲಿ ಮೈಸೂರಿನ ವಿವಿಧ ಭಾಗಗಳಲ್ಲಿ ಸುಮಾರು 26.2 ಕಿ.ಮೀ ಸಂಚರಿಸಲಿದ್ದು, ಕ್ರೀಡಾಪಟುಗಳ ಜೊತೆಗೆ, ಸಾಹಿತಿಗಳು, ಉದ್ಯಮಿಗಳು, ಜನಪ್ರತಿನಿಧಿಗಳು, ರಂಗ ಭೂಮಿ, ಸಿನಿಮಾ, ಕಿರುತೆರೆ ಕಲಾವಿದರುಗಳು, ಅಧಿಕಾರಿಗಳು ಹಿಡಿದು ಸಾಗಲಿದ್ದಾರೆ.

ಬೆಳಗ್ಗೆ 8.45ಕ್ಕೆ ಚಾಮುಂಡೇಶ್ವರಿ ಸನ್ನಿಧಾನದಿಂದ ಬೆಳಗುವ ಜ್ಯೋತಿಯು ಚಾಮುಂಡಿ ಬೆಟ್ಟದ ಪಾದದ ಮೂಲಕ ಸಂಚರಿಸಿ ಜೆ.ಎಸ್.ಎಸ್.ಆಶ್ರಮ, ಶಕ್ತಿಧಾಮ, ಕಂಸಾಳೆ ಮಹಾದೇವಯ್ಯ ವೃತ್ತ, ರಾಮಾನುಜ ರಸ್ತೆಯ ಆಂದೋಲನಾ ಪತ್ರಿಕಾ ಕಛೇರಿ, ಅಗ್ರಹಾರ ವೃತ್ತ, ಸಿದ್ದಪ್ಪ ಸ್ಕ್ವೇರ್, ನಂಜುಮಾಳಿಗೆ ವೃತ್ತ, ಜೆ.ಎಲ್.ಬಿ ರಸ್ತೆಯ ಮೂಲಕ ಶಾರದಾ ವಿಲಾಸ ಕಾಲೇಜು, ಅಶೋಕಪುರಂ ಮುಖ್ಯ ರಸ್ತೆಯ ಮೂಲಕ ಅಶೋಕ ವೃತ್ತ(ಬಲ್ಲಾಳ್ ವೃತ್ತ), ಕಾಂತರಾಜ ಅರಸ್ ರಸ್ತೆಯ ಶ್ರೀರಾಮ ಮಂದಿರ, ಅಪೋಲೋ ಆಸ್ಪತ್ರೆ, ಗಾನ ಭಾರತಿ, ಕುವೆಂಪುನಗರ ಶಾಪಿಂಗ್ ಕಾಂಪ್ಲೆಕ್ಸ್, ಚಿತ್ರಭಾನು ರಸ್ತೆಯ ಮೂಲಕ ಬಾಸುದೇವ ಸೋಮಾನಿ ಕಾಲೇಜು, ಸರಸ್ವತಿಪುರಂ ಕ್ಲಬ್, ಬೇಕ್ ಪಾಯಿಂಟ್ ಸರ್ಕಲ್, ಜವರೇಗೌಡ ಉದ್ಯಾನವನ, ಉಪ್ಪಾರ ವಿದ್ಯಾರ್ಥಿನಿಲಯ, ಚಂದ್ರ ಮೌಳೇಶ್ವರ ದೇವಸ್ಥಾನದ ವೃತ್ತ, ಆರ್.ಟಿ.ಓ ಕಚೇರಿ, ಜೆ.ಎಲ್.ಬಿ ರಸ್ತೆಯ ಮೂಲಕ ರಾಮಸ್ವಾಮಿ ವೃತ್ತ, 100 ಅಡಿ ರಸ್ತೆಯ ಮೂಲಕ ಚಾಮರಾಜಪುರ ಮಹಿಳಾ ಕಾಲೇಜು, ಬಸವೇಶ್ವರ ವೃತ್ತ, ಮೈಸೂರು ಮಹಾನಗರ ಪಾಲಿಕೆ ಕಚೇರಿ, ಕೆ.ಆರ್. ವೃತ್ತ, ದೇವರಾಜ ಅರಸು ರಸ್ತೆಯ ಮೂಲಕ ಮಹಾರಾಣಿ ಮಹಿಳಾ ಕಾಲೇಜು, ಮೆಟ್ರೋಪೋಲ್ ವೃತ್ತ, ರೈಲ್ವೇ ಸ್ಟೇಷನ್ ವೃತ್ತ, ಕೆ.ಆರ್.ಆಸ್ಪತ್ರೆ ವೃತ್ತ, ಕೇಂದ್ರ ಅಂಚೆ ಕಛೇರಿ (ಅಶೋಕ ರಸ್ತೆ), ಅರಮನೆ ಕೋಟೆ ಆಂಜನೇಯ ದೇವಸ್ಥಾನ, ಜಯಚಾಮರಾಜೇಂದ್ರ ವೃತ್ತ, ಗ್ರಾಮಾಂತರ ಬಸ್ ನಿಲ್ದಾಣ ವೃತ್ತ, ತಹಸೀಲ್ದಾರ್ ಕಚೇರಿ ಮೂಲಕ ಒಟ್ಟು 26.2 ಕಿ.ಮೀ ಪ್ರಯಾಣಿಸಿ ನಜರ್‌ಬಾದ್‌ನ ನಿಂಬುಜಾಂಬ ದೇವಿ ದೇವಸ್ಥಾನವನ್ನು ತಲುಪಲಿದೆ.

ದೀಪಾಲಂಕಾರ ಸವಿಯುವ ಸದವಕಾಶ

ಈ ಮೊದಲು ನಗರ ಸಾರಿಗೆ ಬಸ್ಸು, ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳನ್ನು ಹೊರತುಪಡಿಸಿ ಉಳಿದ ವಾಹನಗಳ ಸಂಚಾರವನ್ನು ಆ ಅವಧಿಯಲ್ಲಿ ನಿಷೇಧಿಸಲು ಚಿಂತನೆ ನಡೆಸಲಾಗಿತ್ತಾದರೂ, ಪ್ರಾಯೋಗಿಕವಾಗಿ ಪ್ರಯೋಜನವಾಗುವುದಿಲ್ಲ ಎಂಬುದನ್ನು ಮನಗಂಡು ಅಂಬಾರಿ ಬಸ್ ಹೊರತುಪಡಿಸಿ ಉಳಿದ ವಾಹನಗಳು ಓಡಾಡದಂತೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದ್ದಾರೆ. ಕಾರು, ಆಟೋ, ದ್ವಿಚಕ್ರ ವಾಹನಗಳಲ್ಲಿ ಬಂದು ವಿದ್ಯುದ್ದೀಪಾಲಂಕಾರ ನೋಡುವ ಬದಲು ನಡೆದುಕೊಂಡು ಸ್ವಚ್ಛಂದ ವಾಗಿ ಮಕ್ಕಳೊಂದಿಗೆ ಸವಿಯಬಹುದು. ವಾಹನಗಳಿಲ್ಲದಿದ್ದರೆ ಯಾವುದೇ ಅಡಚಣೆಯಾಗುವುದಿಲ್ಲ. ಶಬ್ದ, ವಾಯುಮಾಲಿನ್ಯ, ಅಪಘಾತ ಕಿರಿಕಿರಿ, ಮಾತಿನ ಚಕಮಕಿಯಂತಹ ಅಹಿತಕರ ಘಟನೆಗಳಿಲ್ಲದೆ ದೀಪಾಲಂಕಾರ ಆನಂದಿಸ ಬಹುದು ಎಂದು ಡಾ.ಚಂದ್ರಗುಪ್ತ ತಿಳಿಸಿದ್ದಾರೆ. ಪುರಭವನದ ಆವರಣ, ದಸರಾ ವಸ್ತು ಪ್ರದರ್ಶನ ಆವರಣದ ಪಾರ್ಕಿಂಗ್ ಸ್ಥಳದಲ್ಲಿ ವಾಹನಗಳನ್ನು ನಿಲ್ಲಿಸಿ, ನಡೆದುಕೊಂಡು ದೀಪಲಂಕಾರ ನೋಡಿ ಸುರಕ್ಷಿತವಾಗಿ ಹಿಂದಿರುಗಿ ಎಂದಿರುವ ಅವರು, ಇದರಿಂದ ವಾಹನ ದಟ್ಟಣೆಯಲ್ಲಿ ಸಮಯ ವ್ಯರ್ಥವಾ ಗುವುದನ್ನು ತಪ್ಪಿಸಬಹುದು ಎಂದು ತಿಳಿಸಿದ್ದಾರೆ.

ಸೋಮವಾರ ಸಂಜೆ ಇಂಧನ ಸಚಿವ ವಿ.ಸುನಿಲ್‌ಕುಮಾರ್ ಅವರು ಕೆ.ಆರ್.ಆಸ್ಪತ್ರೆ ಎದುರಿನ ಹಸಿರು ಚಪ್ಪರದ ಬಳಿ ದಸರಾ ದೀಪಾಲಂಕಾರ ವ್ಯವಸ್ಥೆಗೆ ಸ್ವಿಚ್ ಆನ್ ಮಾಡುವ ಮೂಲಕ ಚಾಲನೆ ನೀಡಿದ ನಂತರ 124 ಕಿ.ಮೀ. ದೂರದ ವರೆಗಿನ ರಸ್ತೆಯಲ್ಲಿ 96 ಸರ್ಕಲ್‌ಗಳು, 28 ದೀಪಾಲಂಕಾರ ಮಾದರಿ, ಸ್ವಾಗತ ಕಮಾನುಗಳು ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದು, ಈ ಸೌಂದರ್ಯ ಕಣ್ತುಂಬಿಕೊಳ್ಳಲು ಜನರು ವಾಹನಗಳಲ್ಲಿ ಬರುತ್ತಿದ್ದರಿಂದ ಉಂಟಾಗುತ್ತಿದ್ದ ಕಿರಿಕಿರಿ ತಪ್ಪಿಸಲು ಪೊಲೀಸರು ರಾತ್ರಿ 9ರಿಂದ 11 ಗಂಟೆವರೆಗೆ ಅರಮನೆ ಸುತ್ತಲಿನ ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಮಾಡಿದ್ದಾರೆ.

ವಾಹನ ಸಂಚಾರ ನಿರ್ಬಂಧಿಸಿರುವುದು ಒಳ್ಳೆಯ ಕೆಲಸ. ಇದೇ ರೀತಿ ಪ್ರತೀ ವರ್ಷದ ದಸರಾ ಮಹೋತ್ಸವದ 9 ದಿನವೂ ಕ್ರಮ ವಹಿಸುವುದು ಸೂಕ್ತ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅಭಿಪ್ರಾಯಪಟ್ಟಿದ್ದಾರೆ.

12 ವಾರಗಳ ಗಡುವು

ಆಯೋಗವು ಸರ್ಕಾರಕ್ಕೆ ಸೆ.9ರಂದು ಪತ್ರ ಬರೆದಿದೆ. ಆನಂತರ ಮೀಸಲು ನಿಗದಿ ಕಾರ್ಯವನ್ನು ಸರ್ಕಾರ ಮಾಡಲು ಸಾಧ್ಯ ಎಂದರು. ಕ್ಷೇತ್ರ ಮರು ವಿಂಗಡಣೆ ಮತ್ತು ಮೀಸಲು ನಿಗದಿ ಶೀಘ್ರ ಪೂರ್ಣಗೊಳಿಸಲು ಸರ್ಕಾರ ಸಹ ಎಲ್ಲಾ ಪ್ರಯತ್ನ ಮಾಡುತ್ತಿದೆ. ಆದ್ದರಿಂದ 12 ವಾರ ಕಾಲಾವಕಾಶ ನೀಡಬೇಕು ಎಂದು ಮನವಿ ಮಾಡಿದರು.

ಆ ಮನವಿ ಮಾನ್ಯ ಮಾಡಿದ ನ್ಯಾಯಪೀಠ, ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಕ್ಷೇತ್ರಗಳಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಸೇರಿದಂತೆ ಇತರೆ ವರ್ಗಗಳಿಗೆ ಮೀಸಲು ಕಲ್ಪಿಸುವ ಮತ್ತು ಕ್ಷೇತ್ರ ಮರು ವಿಂಗಡಣೆ ಕಾರ್ಯವನ್ನು 12 ವಾರಗಳಲ್ಲಿ ಪೂರ್ಣಗೊಳಿಸುವಂತೆ ಸರ್ಕಾರಕ್ಕೆ ಸೂಚಿಸಿ ಮಧ್ಯಂತರ ಅರ್ಜಿ ಇತ್ಯರ್ಥಪಡಿಸಿತು. ಚುನಾವಣಾ ಆಯೋಗ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಕಾಯ್ದೆ–2021ಅನ್ನು ಅಸಂವಿಧಾನ ಎಂಬುದಾಗಿ ಘೋಷಿಸಿ ರದ್ದುಪಡಿಸಬೇಕು. ಚುನಾವಣಾ ಆಯೋಗವು ಈಗಾಗಲೇ ಪ್ರಕಟಿಸಿರುವ ಕರಡು ಮೀಸಲು ಮತ್ತು ಕ್ಷೇತ್ರ ಮರುವಿಂಗಡಣೆ ಅಧಿಸೂಚನೆ ಆಧರಿಸಿ ಚುನಾವಣಾ ಪ್ರಕ್ರಿಯೆ ಮುಂದುವರಿಸಬೇಕು. ಅಂತಿಮ ಮೀಸಲು ಮತ್ತು ಕ್ಷೇತ್ರ ಪುನರ್ ವಿಂಗಡಣೆ ಪಟ್ಟಿ ಪ್ರಕಟಿಸಿ, ಶೀಘ್ರ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಮನವಿ ಮಾಡಿದೆ.

ಜನಸಂಖ್ಯೆ ಅನುಪಾತದ ಆಧಾರದಲ್ಲಿ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಲ್ಲಿ ಸ್ಥಾನ ಮತ್ತು ಅಭ್ಯರ್ಥಿಗಳ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪಂಚಾಯತ್ ರಾಜ್ ಹಾಗೂ ಗ್ರಾಮ ಸ್ವರಾಜ್ (ತಿದ್ದುಪಡಿ) ಕಾಯ್ದೆ–2021ರ ಜಾರಿಗೆ ರಾಜ್ಯ ಸರ್ಕಾರ 2021ರ ಸೆಪ್ಟೆಂಬರ್ 18ರಂದು ಗೆಜೆಟ್ ಅಧಿಸೂಚನೆ ಹೊರಡಿಸಿತ್ತು.

ಮೂರು ತಿಂಗಳ ಸಮಯ: ಹೈಕೋರ್ಟ್ ಆದೇಶದ ಅನುಸಾರ ಕ್ಷೇತ್ರ ಪುನರ್ ವಿಂಗಡಣೆ ಆಯೋಗವು ಮೂರು ತಿಂಗಳಲ್ಲಿ ತನ್ನ ವರದಿ ಸಲ್ಲಿಸುವ ನಿರೀಕ್ಷೆಯಿದೆ. ಬಹುಶಃ ಈ ಪ್ರಕ್ರಿಯೆ ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿದ್ದು, 2023ರ ಜನವರಿಯಲ್ಲಿ ವರದಿ ಸರ್ಕಾರದ ಕೈಸೇರಲಿದೆ. ಸರ್ಕಾರ ತದನಂತರ ಮುಂದಿನ ಕ್ರಮ ಕೈಗೊಂಡು ಚುನಾವಣೆ ನಡೆಸುವ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಹೈಕೋರ್ಟ್ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಹೇಳಿದರು.

ಹೆಚ್‌ಎಎಲ್‌ನಲ್ಲಿ ಏಕೀಕೃತ ಕ್ರಯೋಜನಿಕ್ ಇಂಜಿನ್ ಉತ್ಪಾದನಾ ಸೌಲಭ್ಯ: ರಾಷ್ಟ್ರಪತಿಗಳಿಂದ ಚಾಲನೆ



ಬೆಂಗಳೂರು: ರಾಷ್ಟ್ರಪತಿ ದ್ರೌಪದಿ ಮುರ್ಮು, ಹೆಚ್‌ಎಎಲ್‌ನಲ್ಲಿ ಏಕೀಕೃತ ಕ್ರಯೋಜನಿಕ್ ಇಂಜಿನ್ ಉತ್ಪಾದನಾ ಸೌಲಭ್ಯ ಮತ್ತು ದಕ್ಷಿಣ ವಲಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಯ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ಈ ವೇಳೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತಿತರರು ಉಪಸ್ಥಿತರಿದ್ದರು.

ನಂತರ ರಾಷ್ಟ್ರಪತಿ, ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಕೊಡುಗೆ ಅನನ್ಯವಾಗಿದೆ. ರಕ್ಷಣಾ ಪಡೆಗಳ ಹಿಂದಿನ ಶಕ್ತಿ ಹೆಚ್‌ಎಎಲ್ ಎಂದು ಹೇಳಬಹುದು. ಕ್ರಯೋಜನಿಕ್ ಮತ್ತು ಸೆಮಿ ಕ್ರಯೋಜೆನಿಕ್ ಎಂಜಿನ್‌ಗಳನ್ನು ತಯಾರಿಸಲು ಅತ್ಯಾಧುನಿಕ ಸೌಲಭ್ಯ ಹೊಂದಿರುವುದು ಎಚ್‌ಎಎಲ್ ಮತ್ತು ಇಸ್ರೋಗೆ ಮಾತ್ರವಲ್ಲ, ಇಡೀ ದೇಶಕ್ಕೆ ನಿಜಕ್ಕೂ ಐತಿಹಾಸಿಕ ಕ್ಷಣವಾಗಿದೆ. ಈ ಪ್ರತಿಷ್ಠಿತ ಯೋಜನೆಗೆ ಸಂಬಂಧಿಸಿದ ಎಲ್ಲ ಜನರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಇಸ್ರೋ ದೇಶದ ಹೆಮ್ಮೆಯಾಗಿದೆ. ಕ್ರಯೋಜನಿಕ್ ಎಂಜಿನ್ ಮತ್ತು ತಯಾರಿಕಾ ಸೌಲಭ್ಯ ಹೊಂದಿರುವ ವಿಶ್ವದ ಆರನೇ ರಾಷ್ಟ್ರವಾಗಿ ಭಾರತ ಹೊರಹೊಮ್ಮುವಲ್ಲಿ ಇಸ್ರೋ ಪ್ರಯತ್ನ ಮತ್ತು ಬದ್ಧತೆಯನ್ನು ರಾಷ್ಟ್ರಪತಿ ಶ್ಲಾಘಿಸಿದರು. ರಕ್ಷಣಾ ಕಾರ್ಯತಂತ್ರ ಮತ್ತು ಅಭಿವೃದ್ಧಿಯಲ್ಲಿ ಹೆಚ್‌ಎಎಲ್ ಮತ್ತು ಇಸ್ರೋ ಕೊಡುಗೆ ಮಹತ್ವದ್ದಾಗಿದೆ. ದೇಶದ ರಕ್ಷಣಾ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ವಿವಿಧ ಸಲಕರಣೆಗಳ ಅಭಿವೃದ್ಧಿಯಲ್ಲಿ ಈ ಎರಡೂ ಸಂಸ್ಥೆಗಳು ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ದೇಶದಲ್ಲಿನ ವಿಜ್ಞಾನಿಗಳ ಸಮುದಾಯ ಸಾಮಾಜಿಕ ಜವಾಬ್ದಾರಿ ದಾರಿಯಲ್ಲಿ ಸಾಗಬೇಕಾಗಿದೆ. ದೇಶಾದ್ಯಂತ ರಾಷ್ಟ್ರೀಯ ವೈರಾಲಜಿ ಸಂಸ್ಥೆಯ ವಿಸ್ತರಣೆಯಾಗಬೇಕಾಗಿದೆ ಎಂದು ರಾಷ್ಟ್ರಪತಿ ಕರೆ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ರಾಷ್ಟ್ರಪತಿಗಳು ಹೇಳಿದಂತೆ ವೈರಾಲಜಿ ವಿಭಾಗದಲ್ಲಿ ಸಂಶೋಧನೆ ಹೆಚ್ಚಾಗಬೇಕಾಗಿದೆ. ಇದರಿಂದಾಗಿ ಹೊಸದಾಗಿ ಹರಡುವ ರೋಗಗಳ ಬಗ್ಗೆ ತಿಳಿಯಲು ಅನುಕೂಲವಾಗಲಿದೆ. ಏರೋಸ್ಪೇಸ್ ಕ್ಷೇತ್ರದಲ್ಲಿ ಹೆಚ್‌ಎಎಲ್ ಹೊಸ ಮೈಲುಗಲ್ಲು ಸಾಧಿಸಿದೆ.ಭಾರತಕ್ಕೆ ಬಾಹ್ಯಾಕಾಶವನ್ನು ಜಯಿಸಲು ವಿಫುಲ ಅವಕಾಶಗಳಿವೆ. ಭವಿಷ್ಯದ ಪೀಳಿಗೆ ಆರೋಗ್ಯಕರ ಜೀವನ ನಡೆಸಲು ಅನುವಾಗುವಂತೆ ಸಂಶೋಧನೆಗಳಾಗಬೇಕು ಎಂದರು.

ರಾಜ್ಯದಲ್ಲಿ ಏರೋಸ್ಪೇಸ್, ಆರ್ ಅಂಡ್ ಡಿ, ರಕ್ಷಣಾ ನೀತಿಗಳು ಜಾರಿಯಲ್ಲಿದ್ದು, ಸರ್ಕಾರದ ವತಿಯಿಂದ ಈ ಎಲ್ಲಾ ಸಂಶೋಧನೆ ಗಳಿಗೆ ಅಗತ್ಯ ಸಹಕಾರವನ್ನು ನೀಡಲಿದೆ.ಕರ್ನಾಟಕ ಹೊಸ ವಿಜ್ಞಾನ, ಆವಿಷ್ಕಾರ ಹಾಗೂ ಹೊಸ ಪಥದತ್ತ ನಡೆಯುತ್ತಿದೆ. ನಮ್ಮ ಸರ್ಕಾರದ ಘೋಷವಾಕ್ಯವೂ 'ನವ ಭಾರತಕ್ಕಾಗಿ ನವ ಕರ್ನಾಟಕ' ಆಗಿದೆ ಎಂದು ತಿಳಿಸಿದರು. ಆರೋಗ್ಯ ವಿಜ್ಞಾನದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಅತಿ ಹೆಚ್ಚಿನ ಸಂಶೋಧನಾ ಕೇಂದ್ರಗಳು, ವೈದ್ಯಕೀಯ ಸಂಸ್ಥೆಗಳು, ನಿಮ್ಹಾನ್ಸ್, ಕಿದ್ವಾಯಿ, ರಾಷ್ಟ್ರಮಟ್ಟದ ಮಕ್ಕಳ ಆಸ್ಪತ್ರೆಗಳು, ಆರ್ ಅಂಡ್ ಡಿ ಕೇಂದ್ರಗಳು, ಅಂಗಾಂಗ ಕಸಿ ಕೇಂದ್ರಗಳು ಇಲ್ಲಿವೆ. ಒಂದು ವರ್ಷದೊಳಗೆ 200 ಪ್ರಯೋಗಾಲಯಗಳನ್ನು ಆರ್‌ಟಿಪಿಸಿಆರ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎನ್‌ಐವಿ, ದಕ್ಷಿಣ ವಲಯವು ತನ್ನ ಹೊಸ ಆವಿಷ್ಕಾರಗಳಿಂದ ದೇಶಕ್ಕೇ ಸಹಾಯ ಮಾಡಲಿದೆ ಎಂದರು.

ನಾನು ಏನೇ ಆಗಿದ್ದರೂ ನಿಮ್ಮ ಸೇವೆಗಾಗಿ: ರಾಷ್ಟ್ರಪತಿ ದ್ರೌಪದಿ ಮುರ್ಮು

ಬೆಂಗಳೂರು: ಇಂದು ನಾನು ಏನೇ ಆಗಿದ್ದರೂ ನಿಮ್ಮ ಸೇವೆಗಾಗಿ. ತಾಯಿ ಭುವನೇಶ್ವರಿ ಮಕ್ಕಳಿಗೆ ನನ್ನ ನಮಸ್ಕಾರಗಳು. ಮೈಸೂರು ದಸರಾಗೆ ಚಾಲನೆ ಕೊಟ್ಟ ಸೌಭಾಗ್ಯ ನನ್ನದಾಗಿತ್ತು. ಕರ್ನಾಟಕದ ಸಂಸ್ಕೃತಿಯನ್ನು ನೋಡಿದ್ದೇನೆ. ಈ ಅಭಿನಂದನೆಗೆ ಧನ್ಯವಾದಗಳು ಎಂದು ರಾಜ್ಯ ಸರ್ಕಾರದ 'ಪೌರ ಸನ್ಮಾನ' ಸ್ವೀಕರಿಸಿದ ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು



ಹೇಳಿದರು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಣಿ ಅಬ್ಬಕ್ಕ, ಚೆನ್ನಮ್ಮ, ರಾಯಣ್ಣ ಹುಟ್ಟಿದ ನಾಡಿದು ಎಂದರು. ಬಸವಣ್ಣನವರ ವಚನವನ್ನೂ ಮುರ್ಮು ಉಲ್ಲೇಖಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ದ್ರೌಪದಿ ಮುರ್ಮು ಅವರನ್ನು ಸನ್ಮಾನಿಸಿದರು. ಸಚಿವೆ ಶೋಭಾ ಕರಂದ್ಲಾಜೆ ಮೈಸೂರು ಪೇಟ ತೊಡಿಸಿದರೆ, ಬುದ್ಧನ ಪ್ರತಿಮೆಯನ್ನು ಮುಖ್ಯಮಂತ್ರಿ ನೀಡಿದರು. ನಾಗರಿಕರ ಪರವಾಗಿ ಇಸ್ಕಾನ್‌ನ ಮಧುಪಂಡಿತ್ ದಾಸ್, ಸಾಹಿತಿ ಚಂದ್ರಶೇಖರ ಕಂಬಾರ, ಕಿರಣ್ ಮಜುಂದಾರ್ ಶಾ, ಜೋಗುತಿ ಮಂಜಮ್ಮ, ಪ್ರಕಾಶ್ ಪಡುಕೋಣೆ ಅವರೂ ರಾಷ್ಟ್ರಪತಿಗೆ ಗೌರವ ಸಮರ್ಪಣೆ ಮಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ನನಗೆ ಗೊತ್ತಿರುವ ಪ್ರಕಾರ ಇದೊಂದು ಅಪರೂಪದ ಕಾರ್ಯಕ್ರಮ. ನಾಗರಿಕರಿಂದ ಭಾರತದ ಮೊದಲ ಪ್ರಜೆಯನ್ನು ಸತ್ಕರಿಸುವಂಥ ಕಾರ್ಯಕ್ರಮ ಹಿಂದೆಂದೂ ಇಲ್ಲಿ ನಡೆದಿಲ್ಲ. ರಾಷ್ಟ್ರಪತಿ ಚುನಾವಣಾ ಸಂದರ್ಭದಲ್ಲಿ ಬೆಂಗಳೂರಿಗೆ ಮುರ್ಮು ಬಂದಿದ್ದರು. ರಾಷ್ಟ್ರಪತಿಯಾದ ಮೇಲೆ ಮೊದಲು ಬೆಂಗಳೂರಿಗೆ ಬರಬೇಕು ಎಂದೂ ಹೇಳಿದ್ದರು. ಖಂಡಿತಾ ಬನ್ನಿ, ನಿಮಗೆ ಸಾಕಷ್ಟು ಅವಕಾಶವಿದೆ ಎಂದು ನಾನೂ ಹೇಳಿದ್ದೆ. ಆದರೆ, ರಾಷ್ಟ್ರಪತಿಯಾದ ಬಳಿಕ ಕೆಲಸದ ಒತ್ತಡದಲ್ಲಿರುತ್ತಾರೆ. ಹೀಗಾಗಿ, ಅವರು ಬರುತ್ತಾರೋ ಎಂಬ ಅಳುಕು ಇತ್ತು ಎಂದರು.

ನಾನು ದಸರಾಗೆ ಆಹ್ವಾನ ಕೊಟ್ಟ ದಿನದಂದು ಸಂಜೆಯೇ ಬರುವುದಾಗಿ ತಿಳಿಸಿದರು. ಎಲ್ಲ ವಿಚಾರಗಳ ಬಗ್ಗೆ ಅವರು ಸಂಪೂರ್ಣವಾಗಿ ತಿಳಿದುಕೊಂಡರು. ಶಾಲಾ ಶಿಕ್ಷಕಿಯಾಗಿ, ಪಂಚಾಯತಿ ಪ್ರವೇಶ ಪಡೆದು, ಶಾಸಕರಾಗಿ, ಅತ್ಯುತ್ತಮ ಶಾಸಕಿ ಪ್ರಶಸ್ತಿ ಪಡೆದು, ಒಡಿಶಾದಲ್ಲಿ ಸೇವೆ ಸಲ್ಲಿಸಿದ ಅವರು ಬಳಿಕ ಜಾರ್ಖಂಡ್ ರಾಜ್ಯದ ರಾಜ್ಯಪಾಲರಾಗಿದ್ದರು. ರಾಜ್ಯಪಾಲ ಅವಧಿ ಮುಗಿದ ಬಳಿಕ ಮತ್ತೆ ಶಿಕ್ಷಕಿಯಾದರು. ಇದು ಅವರ ಸರ್ವ ಶ್ರೇಷ್ಠ ಗುಣ ಎಂದು ಬಣ್ಣಿಸಿದರು.

ಕೇಂದ್ರ ಸಚಿವರಾದ ಎ. ನಾರಾಯಣಸ್ವಾಮಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಪರಿಷತ್ ಸಭಾಪತಿ ರಘುನಾಥ್ ರಾವ್ ಮಲ್ಕಾಪುರೆ, ಚಿತ್ರನಟಿ ಬಿ. ಸರೋಜಾದೇವಿ, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಸಾಲುಮರದ ತಿಮ್ಮಕ್ಕ ಇದ್ದರು.

ಮೈಸೂರಲ್ಲೂ ಪಿಎಫ್‌ಐನ ಮೂವರ ಬಂಧನ

ಮೈಸೂರು, ಸೆ27(ಆರ್‌ಕೆ)– ರಾಜ್ಯಾದ್ಯಂತ ಪಿಎಫ್‌ಐ ಸೇರಿದಂತೆ ಇನ್ನಿತರ ಸಂಘಟನೆಗಳ ಪ್ರಮುಖರನ್ನು, ಎನ್‌ಐಎ ತಂಡ ದಾಳಿ ನಡೆಸಿ ಬಂಧಿಸುತ್ತಿರುವ ಹಿನ್ನೆಲೆಯಲ್ಲಿ ಅಶಾಂತಿ ಉಂಟು ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಮೈಸೂರಿನ ಮೂವರನ್ನು, ಇಂದು ಪೊಲೀಸರು ಬಂಧಿಸಿದ್ದಾರೆ.

ಎನ್.ಆರ್.ಮೊಹಲ್ಲಾದ ಜಾಫರ್ ಪಾಷಾ, ಮಂಡಿ ಮೊಹಲ್ಲಾದ ಫೈರೋಜ್ ಉಲ್ಲಾ ಷರೀಫ್ ಹಾಗೂ ಕಲ್ಯಾಣಗಿರಿಯ ಬಿಲಾಲ್ ಷರೀಫ್ ಬಂಧಿತರಾಗಿದ್ದು, ಅವರನ್ನು ಹೆಚ್ಚುವರಿ ತಹಶೀಲ್ದಾರ್‌ರವರ ಮುಂದೆ ಹಾಜರುಪಡಿಸಲಾಗಿ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಎನ್‌ಎಐ ತಂಡದ ದಾಳಿ ಖಂಡಿಸಿ ಪ್ರತಿಭಟನೆ, ಪ್ರಚೋದನಾಕಾರಿ ಚಟುವಟಿಕೆಯಲ್ಲಿ ತೊಡಗಿದ್ದ ಅವರು ಅಶಾಂತಿಗೆ ಎಡೆ ಮಾಡುಕೊಡುತ್ತಿದ್ದ ಹಿನ್ನೆಲೆಯಲ್ಲಿ ಭದ್ರತಾ ಕಾಯ್ದೆಯಡಿ ಎನ್.ಆರ್., ಮಂಡಿ ಮತ್ತು ಉದಯಗಿರಿ ಠಾಣೆಪೊಲೀಸರು ಬಂಧಿಸಿದ್ದಾರೆ ಆ ಪೈಕಿ ಬಿಲಾಲ್ ಷರೀಫ್ ಮತ್ತು ಜಾಫರ್ ಪಾಷಾ ಪಿಎಫ್‌ಐ ಸಂಘಟನೆಯಲ್ಲಿ ಸಕ್ರಿಯವಾಗಿದ್ದರು ಎನ್ನಲಾಗಿದೆ

ಪಿಎಫ್‌ಐ ಕಾರ್ಯಕರ್ತರ ಮೇಲೆ ಮುನ್ನೆಚ್ಚರಿಕಾ ಕ್ರಮ: ಸಿಎಂ

ಬೆಂಗಳೂರು, ಸೆ.27(ಕೆಎಂಶಿ)– ಪಿಎಫ್‌ಐ ಕಾರ್ಯಕರ್ತರ ಮೇಲೆ ಪೊಲೀಸರು ನಡೆಸಿರುವುದು ದಾಳಿಯಲ್ಲ. ಪೊಲೀಸರು ಮುಂಜಾಗ್ರತಾ ಕ್ರಮಗಳನ್ನು ತಹಶೀಲ್ದಾರರ ಮೂಲಕ ಕೈಗೊಂಡಿದ್ದಾರೆ ಎಂದು ಸಿಎಂ ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೊಲೀಸರು ಹಲವಾರು ಮಾಹಿತಿಯ ಆಧಾರದ ಮೇಲೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅದನ್ನೇ ಕರ್ನಾಟಕ ಹಾಗೂ ಎಲ್ಲಾ ರಾಜ್ಯಗಳ ಪೊಲೀಸರು ಮಾಡಿದ್ದಾರೆ. ಎಷ್ಟು ಜನರನ್ನು ವಶಕ್ಕೆ ತೆಗೆದುಕೊಂಡಿದ್ದಾರೆಂದು ಮಾಹಿತಿ ಪಡೆಯಲಾಗುವುದು ಎಂದರು.

ಖ್ಯಾತ ನಟಿ ಆಶಾ ಪರೇಖ್‌ಗೆ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ

ನವದೆಹಲಿ, ಸೆ.27– ಭಾರತೀಯ ಸಿನಿಮಾ ರಂಗದ ಹೆಸರಾಂತ ನಟಿ, ಒಂದು ಕಾಲದಲ್ಲಿ ಬಾಲಿವುಡ್ ಕ್ವೀನ್ ಎಂದೇ ಖ್ಯಾತರಾಗಿದ್ದ ಆಶಾ ಪರೇಖ್ ಅವರಿಗೆ 52ನೇ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಣೆಯಾಗಿದೆ. ಭಾರತೀಯ ಸಿನಿಮಾ ರಂಗಕ್ಕೆ ನೀಡಿದ ಅದ್ಭುತ ಕೊಡುಗೆಗಾಗಿ ಆಶಾ ಅವರನ್ನು ಈ ಪ್ರಶಸ್ತಿ ಹುಡುಕಿಕೊಂಡು ಬಂದಿದೆ.



ಭಾರತೀಯ ಚಿತ್ರರಂಗಕ್ಕೆ ಆಶಾ ಪರೇಖ್ ನೀಡಿರುವ ಕೊಡುಗೆಗಳನ್ನು ಪರಿಗಣಿಸಿ ಗೌರವಿಸಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಹೇಳಿದ್ದಾರೆ. 2019ನೇ ಸಾಲಿನ ಪ್ರಶಸ್ತಿಯು ರಜನಿಕಾಂತ್ ಅವರಿಗೆ ಸಿಕ್ಕಿತ್ತು.

ಮಹಾರಾಷ್ಟ್ರದ ಮುಂಬೈನಲ್ಲಿ ಅಕ್ಟೋಬರ್ 2, 1942ರಲ್ಲಿ ಗುಜರಾತಿ ಕುಟುಂಬದಲ್ಲಿ ಜನಿಸಿರುವ ಆಶಾ ಅವರು 'ಕರ ಭವನ' ಎಂಬ ನೃತ್ಯ ಅಕಾಡೆಮಿಯನ್ನು ನಡೆಸುತ್ತಿದ್ದಾರೆ. 10ನೇ ವಯಸ್ಸಿನಲ್ಲಿಯೇ ಆಶಾ ತಮ್ಮ ನಟನಾ ವೃತ್ತಿಯನ್ನು ಪ್ರಾರಂಭಿಸಿದರು. 1952ರಲ್ಲಿ 'ಆಸ್ಮಾನ್' ಚಿತ್ರದಲ್ಲಿ ಮೊದಲ ಬಾರಿಗೆ ಸ್ಕ್ರೀನ್‌ನಲ್ಲಿ ಕಾಣಿಸಿಕೊಳ್ಳುವ ಮೂಲಕ ಕಲಾವಿದರಾಗಿ ಪರಿಚಯರಾದರು.

ಮತ್ತೆ ತಮ್ಮ 16ನೇ ವಯಸ್ಸಿನಲ್ಲಿ ಚಿತ್ರರಂಗಕ್ಕೆ ಮರು ಪ್ರವೇಶ ಮಾಡಿದರು. ನಿರ್ದೇಶಕ ನಾಸಿರ್ ಹುಸೇನ್ ಅವರ 'ದಿಲ್ ದೇಕೆ ದೇಖೋ' (1959) ಚಿತ್ರದಲ್ಲಿ ನಟಿಸಿ ಖ್ಯಾತಿ ಪಡೆದುಕೊಂಡರು. ಅದಾದ ನಂತರ 'ಜಬ್ ಪ್ಯಾರ್ ಕಿಸಿ ಸೆ ಹೋತಾ ಹೈ' (1961), 'ಫಿರ್ ವಹಿ ದಿಲ್ ಲಯಾ ಹೂನ್' (1963), 'ತೀಸ್ರಿ ಮಂಜಿಲ್' (1966), 'ಬಹರೋನ್ ಕೆ ಸಪ್ನೆ' (1967) ಚಿತ್ರಗಳಲ್ಲಿ ನಟಿಸಿ ಮತ್ತಷ್ಟು ಖ್ಯಾತಿ ಗಳಿಸಿದರು. 'ಪ್ಯಾರ್ ಕಾ ಮೌಸಂ' (1969) ಮತ್ತು 'ಕಾರವಾನ್' (1971) ಚಿತ್ರ ಕೂಡ ಇವರಿಗೆ ಸಾಕಷ್ಟು ಹೆಸರು ತಂದು ಕೊಟ್ಟಿತು.

ಆಶಾ ಪರೇಖ್ ಸುಮಾರು 78 ಬಾಲಿವುಡ್ ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ. 1999ರಲ್ಲಿ ತೆರೆಕಂಡ 'ಸಾರ್ ಆಂಖೋನ್ ಪರ್' ಇವರ ಕಡೆಯ ಚಿತ್ರವಾಗಿದೆ. 1992ರಲ್ಲಿ ಅವರಿಗೆ ಭಾರತ ಸರ್ಕಾರ ದೇಶದ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ.

ನಿರ್ದೇಶಕರು ಮತ್ತು ನಿರ್ಮಾಪಕರೂ ಆಗಿರುವ ಪರೇಖ್ ಅವರು 1990 ರ ದಶಕದ ಉತ್ತರಾರ್ಧದಲ್ಲಿ "ಕೋರಾ ಕಾಗಜ್" ಅನ್ನು ನಿರ್ದೇಶಿಸಿದ್ದರು. ಇದು ಬಹಳ ಪ್ರಸಿದ್ಧಿ ಪಡೆದಿತ್ತು.

ಮತ್ತೆ PFI ಮೇಲೆ ದಾಳಿ: ರಾಜ್ಯಾದ್ಯಂತ 70 ಮಂದಿ ವಶಕ್ಕೆ

ಬೆಂಗಳೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ವಿರುದ್ಧದ ಕಾರ್ಯಾಚರಣೆ ಮುಂದುವರೆಸಿರುವ ಕರ್ನಾಟಕ ಪೊಲೀಸರು ಇಂದು ಮುಂಜಾನೆ ತಮ್ಮ ಎರಡನೇ ಹಂತದ ದಾಳಿಗಳನ್ನು ನಡೆಸಿದ್ದು, ಈ ವೇಳೆ ರಾಜ್ಯಾದ್ಯಂತ ಸುಮಾರು 70 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

ರಾಜ್ಯದ 12 ಜಿಲ್ಲೆಗಳಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಚೇರಿಗಳು ಮತ್ತು ಕಾರ್ಯಕರ್ತರ ಮನೆ ಮೇಲೆ ದಾಳಿ ನಡೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ ಅಧಿಕಾರಿಗಳು ಹಲವರನ್ನು ವಶಕ್ಕೆ ಪಡೆದು, ಕೆಲವರನ್ನು ಬಂಧಿಸಿದ್ದಾರೆ. ಕರ್ನಾಟಕ ಪೊಲೀಸರು ಮಂಗಳವಾರ ಮುಂಜಾನೆ ವೇಳೆಗೆ ರಾಜ್ಯಾದ್ಯಂತ 70 ಜನರನ್ನು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ರಾಜ್ಯ ಪೊಲೀಸರು ಕಳೆದ ವಾರ ಬೆಂಗಳೂರು, ಮಂಗಳೂರು, ದಕ್ಷಿಣ ಕನ್ನಡ, ಶಿವಮೊಗ್ಗ, ಕೊಪ್ಪಳ, ದಾವಣಗೆರೆ, ಉಡುಪಿ, ಮೈಸೂರು ಮತ್ತು ಕಲಬುರಗಿಯಲ್ಲಿ ಪಿಎಫ್‌ಐ ಸದಸ್ಯರ 18 ಸ್ಥಳಗಳ ಮೇಲೆ ದಾಳಿ ನಡೆಸಿ ಹಲವಾರು ಪಿಎಫ್‌ಐ ಕಾರ್ಯಕರ್ತರನ್ನು ವಶಕ್ಕೆ ಪಡೆದಿದ್ದರು. ರಾಷ್ಟ್ರೀಯ ತನಿಖಾ ಸಂಸ್ಥೆ ಮತ್ತು ಜಾರಿ ನಿರ್ದೇಶನಾಲಯ ಕಳೆದ ವಾರ ಎನ್‌ಐಎ ದಾಖಲಿಸಿದ ಐದು ಪ್ರಕರಣಗಳಲ್ಲಿ ಪಿಎಫ್‌ಐ ವಿರುದ್ಧ ದೇಶ ವ್ಯಾಪಿ ದಾಳಿಯಲ್ಲಿ ಕರ್ನಾಟಕದಿಂದ ಏಳು ಮಂದಿಯನ್ನು ಬಂಧಿಸಿತ್ತು. ಪಿಎಫ್‌ಐ, ಸಿಪಿಎಫ್ ಹಾಗೂ ಎಸ್‌ಡಿಪಿಐ ಮೇಲೆ ಉಗ್ರವಾದ, ಭಯೋತ್ಪಾದಕ ಚಟುವಟಿಕೆಗಳಿಗೆ ಧನಸಹಾಯ, ಶಸ್ತ್ರಾಸ್ತ್ರ ತರಬೇತಿ ನೀಡಲು ಶಿಬಿರಗಳ ಆಯೋಜನೆ, ಉಗ್ರವಾದ ಚಟುವಟಿಕೆಗಳಿಗೆ ಪ್ರೇರೇಪಣೆ, ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿಕೊಳ್ಳುವುದು ಸೇರಿದಂತೆ ಹಲವಾರ ಆರೋಪಗಳನ್ನು ಮಾಡಲಾಗಿದೆ

ಎಲ್ಲೆಲ್ಲಿ.. ಎಷ್ಟೆಷ್ಟು ಮಂದಿ ವಶಕ್ಕೆ

ಪೊಲೀಸ್ ಪ್ರಾಥಮಿಕ ವರದಿಗಳ ಪ್ರಕಾರ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮತ್ತೆ ದಾಳಿ ಮಾಡಲಾಗಿದೆ. ಬಾಗಲಕೋಟೆ (7 ಜನ), ಮೈಸೂರು (3), ಮಂಡ್ಯ (4), ಕೊಡಗು (2), ಹಾಸನ (2), ಕೋಲಾರ (7), ಬೆಳಗಾವಿ (7), ಚಿತ್ರದುರ್ಗ (1), ಕೊಪ್ಪಳ (2), ಚಾಮರಾಜನಗರ (2), ರಾಯಚೂರು (2), ವಿಜಯಪುರ (1), ಕಲಬುರ್ಗಿ (2), ಬೀದರ್ (2), ರಾಮನಗರ (10), ಯಾದಗಿರಿ (2) ಜಿಲ್ಲೆಗಳಲ್ಲಿ ದಾಳಿ ಮಾಡಿರುವ ಅಧಿಕಾರಿಗಳು ಕೆಲವರನ್ನು ವಶಕ್ಕೆ ಪಡೆದರೆ, ಮತ್ತೆ ಕೆಲವರನ್ನು ಬಂಧಿಸಿದ್ದಾರೆ.

ದೇಶದಾದ್ಯಂತ ಪಿಎಫ್‌ಐ ಸಂಘಟನೆ ಮೇಲೆ ದಾಳಿ: ನೂರಾರು ಮಂದಿ ವಶಕ್ಕೆ

ನವದೆಹಲಿ, ಸೆ.27– ದೇಶದಾದ್ಯಂತ ಪಿಎಫ್‌ಐ ಸಂಘಟನೆ ಮೇಲೆ ಮತ್ತೆ ರಾಷ್ಟ್ರೀಯ ತನಿಖಾ ಸಂಸ್ಥೆ ಅಧಿಕಾರಿಗಳು ದಾಳಿ ನಡೆಸಿದ್ದು, ನೂರಾರು ಮಂದಿಯನ್ನು ವಶಕ್ಕೆ ಪಡೆದಿದ್ದಾರೆ ಎನ್ನಲಾಗಿದೆ.

ಮಧ್ಯಪ್ರದೇಶ, ಕರ್ನಾಟಕ, ಅಸ್ಸಾಂ, ದೆಹಲಿ, ಮಹಾರಾಷ್ಟ್ರ, ತೆಲಂಗಾಣ ಮತ್ತು ಉತ್ತರಪ್ರದೇಶ ಸೇರಿದಂತೆ ದೇಶದಾದ್ಯಂತ ವಿವಿಧ ರಾಜ್ಯಗಳಲ್ಲಿ ಪಿಎಫ್‌ಐ ವಿರುದ್ಧ ರಾಜ್ಯ ಪೊಲೀಸರು ಮತ್ತು ಅದರ ಎಟಿಎಸ್ ಮತ್ತು ಎನ್‌ಐಎ ಘಟಕಗಳಿಂದ ದಾಳಿ ನಡೆಯುತ್ತಿದೆ. 8 ರಾಜ್ಯಗಳಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ(ಪಿಎಫ್‌ಐ) ಕಚೇರಿಗಳು ಮತ್ತು ಕಾರ್ಯಕರ್ತರ ಮನೆ ಮೇಲೆ ದಾಳಿ ನಡೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಅಧಿಕಾರಿಗಳು ನೂರಾರು ಜನರನ್ನು ವಶಕ್ಕೆ ಪಡೆದಿದ್ದಾರೆ.

ಮಂಗಳವಾರ ಬೆಳಗ್ಗೆ ಪಿಎಫ್‌ಐ ಕಾರ್ಯಕರ್ತರಿಗೆ ಎನ್‌ಐಎ ಮತ್ತೆ ಶಾಕ್ ನೀಡಿದ್ದು, ರಾಜ್ಯಗಳ ವಿವಿಧ ತನಿಖಾ ಸಂಸ್ಥೆಗಳ ಜೊತೆ ಸೇರಿ ಪಿಎಫ್‌ಐ ಮೇಲೆ ಮತ್ತೊಂದು ಸುತ್ತಿನ ದಾಳಿ ಮಾಡಿದೆ. ಕಳೆದ ಗುರುವಾರ (ಸೆ.22) ಕೂಡ ಎನ್‌ಐಎ ದಾಳಿ ಮಾಡಿ ಪಿಎಫ್‌ಐ ಮುಖಂಡರು ಸೇರಿದಂತೆ 106 ಜನರನ್ನು ವಶಕ್ಕೆ ಪಡೆದಿತ್ತು. ಕರ್ನಾಟಕ, ಗುಜರಾತ್, ದೆಹಲಿ, ಅಸ್ಸಾಂ ಸೇರಿ 8 ರಾಜ್ಯಗಳಲ್ಲಿ ದಾಳಿ ಮಾಡಲಾಗಿದೆ ಎಂದು ವರದಿಯಾಗಿದೆ.

ಕಟೀಲ್ ಒಬ್ಬ ವಿದೂಷಕ, ಪಾಪ ಇನ್ನೂ ಮೆಚ್ಯೂರಿಟಿ ಇಲ್ಲ

ವಿಪಕ್ಷ ನಾಯಕ ಸಿದ್ದರಾಮಯ್ಯ ವ್ಯಂಗ್ಯ

ಬಾಗಲಕೋಟೆ: ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಒಬ್ಬ ವಿದೂಷಕ, ಪಾಪ ಅವರಿಗಿನ್ನೂ ಮೆಚ್ಯೂರಿಟಿ ಇಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಕುಟುಕಿದ್ದಾರೆ.

'ಅರ್ಕಾವತಿ ವಿಚಾರ, ಲೋಕಾಯುಕ್ತ ಬಂದ್ ಮಾಡದಿದ್ದರೆ ಸಿದ್ದರಾಮಯ್ಯ ಜೈಲಿಗೆ ಹೋಗ್ತಿದ್ರು ಎಂಬ ಕಟೀಲ್ ಹೇಳಿಕೆಗೆ ಬಾಗಲಕೋಟೆಯಲ್ಲಿ ಪ್ರತಿಕ್ರಿಯಿಸಿದ ಅವರು, ಕಟೀಲು ಒಬ್ಬ ವಿದೂಷಕ, ಪಾಪ ಅವರಿಗೆ ಮೆಚ್ಯೂರಿಟಿ ಇಲ್ಲ. ನಮ್ಮ ಸರ್ಕಾರ ಹೋಗಿ ಎಷ್ಟು ದಿನ ಆಯ್ತು ಈಗ ಯಾವ ಸರ್ಕಾರ ಇದೆ ಮೂರು ವರ್ಷದಿಂದ ಯಾರು ಅಧಿಕಾರದಲ್ಲಿದ್ದಾರೆ. ನಾವು ಅಧಿಕಾರದಲ್ಲಿದ್ದಾಗ ವಿರೋಧ ಪಕ್ಷದಲ್ಲಿದ್ದವರು ಯಾರು ಎಂಬುದಿನ್ನೂ ಗೊತ್ತಿಲ್ಲವೆನ್ನುವಂತೆ ಕಾಣುತ್ತದೆ ಎಂದು ತಿರುಗೇಟು ನೀಡಿದ್ದಾರೆ.



ಬಿಜೆಪಿ ವಿರೋಧ ಪಕ್ಷದಲ್ಲಿದ್ದಾಗ ಯಾಕೆ ಇವೆಲ್ಲಾ ರೈಜ್ ಮಾಡಲಿಲ್ಲ. ಆಗ ಬಾಯಿಗೇನು ಕಡುಬು ಸಿಕ್ಕಿಸಿಕೊಂಡಿದ್ರಾ: ನಾವು ಭ್ರಷ್ಟಾಚಾರ ಆರೋಪ ಮಾಡೋಕೆ ಶುರು ಮಾಡಿದ ಮೇಲೆ ಹೀಗೆಲ್ಲಾ ಮಾತಾಡ್ತಿದ್ದಾರೆ. ನಾನು ಅದಕ್ಕೆ ಹೇಳಿದ್ದೆ, 2006 ರಿಂದ ಇವತ್ತಿನವರೆಗೆ ಯಡಿಯೂರಪ್ಪ, ಕುಮಾರಸ್ವಾಮಿ ಆಡಳಿತ ಇತ್ತು. ಇವಾಗ ಅಧಿಕಾರ ಮಾಡ್ತಾ ಇದ್ದಾರೆ. ನಾವು 5 ವರ್ಷ ಆಡಳಿತದಲ್ಲಿದ್ವಿ. 2006 ರಿಂದ ಎಲ್ಲವನ್ನೂ ಬೇಕಿದ್ರೆ ತನಿಖೆ ಮಾಡಿಸಿ, ಅಧಿಕಾರದಲ್ಲಿ ನೀವೆ ಇರುವಾಗ ನಿಮಗೇಕೆ ಭಯ ಎಂದು ಪ್ರಶ್ನಿಸಿದ್ದಾರೆ.

40 ಪರ್ಸೆಂಟ್ ಸರ್ಕಾರ ಅಂತ ಸುಮ್ಮನೆ ಆರೋಪ ಮಾಡ್ತಾ ಇಲ್ಲ. ನರೇಂದ್ರ ಮೋದಿ ಬಂದು ನನಗೆ 10 ಪರ್ಸೆಂಟ್ ಸರ್ಕಾರ ಅಂದ್ರಲ್ಲ ಆಗ ಯಾವ ದಾಖಲಾತಿ ಕೊಟ್ಟಿದ್ದೀರಪ್ಪಾ 2018ರಲ್ಲಿ ನನ್ನ ವಿರುದ್ಧ ಆರೋಪ ಮಾಡಿದಾಗ ಯಾವ ದಾಖಲಾತಿ ಕೊಟ್ಟಿದ್ದರು ಆವಾಗ ಕಟೀಲು ಎಲ್ಲಿದ್ದರು ಯಡಿಯೂರಪ್ಪ ಅಧ್ಯಕ್ಷರಾಗಿದ್ದರು ಅಲ್ವಾ? ನರೇಂದ್ರ ಮೋದಿ ಕಡೆಯಿಂದ ಅವರೇ ಹೇಳಿಸಿದ್ದು ಅಲ್ವಾ ಎಂದು ಸರಣಿ ಪ್ರಶ್ನೆಗಳನ್ನ ಮುಂದಿಟ್ಟರು.

ಜಾತಿಗೂ ಭ್ರಷ್ಟಾಚಾರಕ್ಕೂ ಸಂಬಂಧವೇನು: 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂಬ ಆರೋಪಕ್ಕೆ, ವಿರುದ್ಧವಾಗಿ ಬಿಜೆಪಿ ನಾಯಕರು ಜಾತಿ ಅಸ್ತ್ರ ಎಳೆ ತಂದಿದ್ದಾರೆ. ಜಾತಿಗೂ ಭ್ರಷ್ಟಾಚಾರಕ್ಕೂ ಸಂಬಂಧವೇನು 'ಬಸವರಾಜ ಬೊಮ್ಮಾಯಿ ಇಸ್ ದಿ ಹೆಡ್ ಆಫ್ ದಿ ಗವರ್ನಮೆಂಟ್'. ಅವರ ಮೇಲೆ ಆರೋಪ ಮಾಡ್ತಿದ್ದೇವೆಯೇ ಹೊರತು ಜಾತಿಯ ಮೇಲಲ್ಲ. ಈ ರೀತಿ ಕ್ಷುಲ್ಲಕ ವಿಚಾರಗಳಿಂದ ದಾರಿ ತಪ್ಪಿಸುವ ಕೆಲಸ ಮಾಡಿದ್ರೆ ನಂಬೋದಕ್ಕೆ ಜನ ತಯಾರಿಲ್ಲ. ಏಕೆಂದರೆ ಜನರೂ ಈಗ ಬುದ್ಧಿವಂತರಾಗಿದ್ದಾರೆ.

ಬಿಜೆಪಿಗೆ ನನ್ನ ಕಂಡ್ರೆ ಭಯ: 'ಮೋರ್ ಸ್ಟ್ರಾಂಗ್ ಮೋರ್ ಎನಿಮೀಸ್, ಲೆಸ್ ಸ್ಟ್ರಾಂಗ್ ಲೆಸ್ ಎನಿಮಿಸ್, ನೋ ಸ್ಟ್ರಾಂಗ್ ನೋ ಎನಿಮಿಸ್ ಅಂತಾ ಅಸೆಂಬ್ಲಿಯಲ್ಲಿ ಹೇಳಿದ್ದೆ. ಅದಕ್ಕೆ ಅವರು ನನ್ನೇಲೆ ಟಾರ್ಗೆಟ್ ಮಾಡೋದು. ದೊಡ್ಡಬಳ್ಳಾಪುರ ಸಮಾವೇಶದಲ್ಲಿ ನೋಡಿದ್ರಲ್ಲಾ ಯಾರ ಮೇಲೆ ಮಾತಾಡಿದ್ರು ಅಂದ್ರೆ ನನ್ನ ಕಂಡ್ರೆ ಬಿಜೆಪಿಗೆ ಭಯ. ಆ ಭಯದಿಂದ ಹಿಂಗೆಲ್ಲಾ ಮಾತಾಡ್ತಿದ್ದಾರೆ ಎಂದು ತಿರುಗೇಟು ನೀಡಿದ್ದಾರೆ.

ಪಿಎಫ್‌ಐ, ಎಸ್‌ಡಿಪಿಐ ಬೆಳೆಯಲು ಕಾರಣವೇ ಸಿದ್ದರಾಮಯ್ಯ

ವಿಜಯಪುರ: ಮಾಜಿ ಸಿಎಂ ಸಿದ್ದರಾಮಯ್ಯರಿಂದಲೇ ಪರಿಸ್ಥಿತಿ ಗಂಭೀರವಾಗಿದೆ ಎಂದು ವಿಜಯಪುರದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಗಂಭೀರ ಆರೋಪ ಮಾಡಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ರಾಜ್ಯದಲ್ಲಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಹಾಗೂ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಬೆಳೆಯಲು ಕಾರಣವೇ ಸಿದ್ದರಾಮಯ್ಯ. ಸಿದ್ದರಾಮಯ್ಯ ಅವಧಿಯಲ್ಲೇ ದೇಶ ವಿರೋಧಿ ಸಂಘಟನೆಗಳು ಬೆಳೆದಿವೆ. ನಮ್ಮ ಸರ್ಕಾರ ಈಗ ಗಟ್ಟಿ ನಿರ್ಧಾರ ತೆಗೆದುಕೊಂಡಿದೆ. ದೇಶಾದ್ಯಂತ ರಾಷ್ಟ್ರೀಯ ತನಿಖಾ ದಳ ದಾಳಿ ನಡೆಸಿದೆ. ಅತೀ ಹೆಚ್ಚು ನಮ್ಮ ರಾಜ್ಯದವರನ್ನೇ ಬಂಧಿಸಿದ್ದಾರೆ ಎಂದರು.

ಪಿಎಫ್‌ಐ ನಿಷೇಧಕ್ಕೆ ದೇಶಭಕ್ತರ ಬೇಡಿಕೆ ಇದೆ. ಅದಕ್ಕೆ ಸಾಕ್ಷ್ಯಾಧಾರಗಳ ಸಂಗ್ರಹ ನಡೆಯುತ್ತಿದೆ. ನಮ್ಮ ಸರ್ಕಾರ ಕಟ್ಟುನಿಟ್ಟಿನ ಕ್ರಮದ ಜೊತೆಗೆ ಗಟ್ಟಿ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪಿಎಫ್‌ಐ ಮೇಲೆ ದಾಳಿ ರಾಜಕೀಯ ಪ್ರೇರಿತ ಆರೋಪ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಎಲ್ಲದಕ್ಕೂ ರಾಜಕೀಯ ಪ್ರೇರಿತ ಎನ್ನುತ್ತಾರೆ. ಭಯೋತ್ಪಾದನೆಗೆ ರಾಜಕೀಯ ಪ್ರೇರಣೆ ನೀಡಿದವರು ಯಾರು ಎಂದು ಪ್ರಶ್ನಿಸಿದರು.

ದಸರಾ ವೇಳೆ ಆರ್‌ಎಸ್‌ಎಸ್, ಬಿಜೆಪಿ ನಾಯಕರ ಮೇಲೆ ದಾಳಿಗೆ ಪಿಎಫ್‌ಐ ಸಂಚು


ಮುಂಬೈ/ಚೆನ್ನೈ, ಸೆ.27– ದಸರಾ ಸಮಯದಲ್ಲಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ನಾಯಕರ ಮೇಲೆ ದಾಳಿ ನಡೆಸಲು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಚು ರೂಪಿಸಿದ್ದ ಸ್ಫೋಟಕ ವಿಚಾರ ಈಗ ಬೆಳಕಿಗೆ ಬಂದಿದೆ. ನಾಗ್ಪುರದಲ್ಲಿರುವ ಆರ್‌ಎಸ್‌ಎಸ್‌ನ ಕೇಂದ್ರ ಕಚೇರಿ, ಹಲವು ಹಿರಿಯ ಆರ್‌ಎಸ್‌ಎಸ್ ನಾಯಕರು ಹಾಗೂ ಬಿಜೆಪಿ ನಾಯಕರ ಮೇಲೆ ದಾಳಿಗೆ ಪಿಎಫ್‌ಐ ಯೋಜನೆ ರೂಪಿಸಿತ್ತು ಎಂದು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ ಮೂಲಗಳನ್ನು ಆಧರಿಸಿ ವರದಿಯಾಗಿದೆ.

ದಸರಾ ಸಮಯದಲ್ಲಿ ಆರ್‌ಎಸ್‌ಎಸ್ ಕಚೇರಿಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಈ ಸಮಯದಲ್ಲಿ ಆರ್‌ಎಸ್‌ಎಸ್ ನಾಯಕರು ಭಾಗಿಯಾಗುತ್ತಾರೆ. ಈ ಸಮಯವನ್ನು ನೋಡಿಕೊಂಡು ಅವರ ಮೇಲೆ ದಾಳಿ ನಡೆಸಲು ಪಿಎಫ್‌ಐ ಪ್ಲ್ಯಾನ್ ಮಾಡಿತ್ತು ಎಂದು ಎಟಿಎಸ್ ಹೇಳಿದೆ. ಕಳೆದ ವಾರ ದೇಶಾದ್ಯಂತ ರಾಷ್ಟ್ರೀಯ ತನಿಖಾ ದಳ ದಾಳಿಯ ಜೊತೆ ಮಹಾರಾಷ್ಟ್ರದಲ್ಲಿ ಎಟಿಎಸ್ ದಾಳಿ ನಡೆಸಿ 10 ಮಂದಿಯನ್ನು ಬಂಧಿಸಿತ್ತು.

14 ಮಂದಿ ಅರೆಸ್ಟ್: ಪಿಎಫ್‌ಐ ಮೇಲೆ ಎನ್‌ಐಎ ದಾಳಿ ಬಳಿಕ ತಮಿಳುನಾಡಿನಲ್ಲಿ ಆರ್‌ಎಸ್‌ಎಸ್ ಕಚೇರಿ, ಹಿಂದೂ ಸಂಘಟನೆಗಳ ನಾಯಕರ ಮೇಲೆ ದಾಳಿ ನಡೆಸಲಾಗಿತ್ತು. ಈ ದಾಳಿ ಸಂಬಂಧ ಪಿಎಫ್‌ಐ ಮತ್ತು ಎಸ್ ಡಿಪಿಐನ 14 ಕಾರ್ಯಕರ್ತರನ್ನು ತಮಿಳುನಾಡು ಪೊಲೀಸರು ಬಂಧಿಸಿದ್ದಾರೆ.

ಸೇಲಂ, ಈರೋಡ್, ಕೊಯಮತ್ತೂರು, ದಿಂಡಿಗಲ್, ತೂತ್ತುಕುಡಿ, ಕನ್ಯಾಕುಮಾರಿ,ಅ ಮದುರೈ ಸೇರಿ ಹಲವು ಕಡೆ ದಾಳಿ ನಡೆಸಿದ ಪೊಲೀಸರು ಕಾರ್ಯಕರ್ತರನ್ನು ಬಂಧಿಸಿದ್ದಾರೆ.











1) ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಪ್ರತಿಷ್ಠಿತ ಮೈಸೂರು ಡಿ.ದೇವರಾಜ ಅರಸು ರಸ್ತೆ.
2) ಟಾಂಗಾ ಗಾಡಿಯಲ್ಲಿ ಸವಾರಿ ನಡೆಸಿ ದೀಪಾಲಂಕಾರವನ್ನು ಕಣ್ತುಂಬಿಕೊಳ್ಳುತ್ತಿರುವ ಪ್ರವಾಸಿಗರು.
3) ರೈಲ್ವೆ ನಿಲ್ದಾಣದ ಬಳಿಯ ವೃತ್ತದ ಬಾಬು ಜಗಜೀವನರಾಂ ಪ್ರತಿಮೆ ಸುತ್ತ ಅತ್ಯಾಕರ್ಷಕ ದೀಪಾಲಂಕಾರ.
4) ರೈಲ್ವೆ ಮೈಸೂರು ವಿಭಾಗೀಯ ಕಚೇರಿಗೆ ವಿಶೇಷ ರೀತಿಯಲ್ಲಿ ದೀಪಾಲಂಕಾರ ಮಾಡಲಾಗಿದೆ.

ಪ್ರವಾಸಿಗರಿಂದ ಬಹು ಬೇಡಿಕೆ ಹಿನ್ನೆಲೆ

ಅಂಬಾರಿ ಬಸ್ ರೂಫ್ ಟಾಪ್ ಸವಾರಿ ದರ 250 ರಿಂದ 350 ರೂ.ಗೆ ಹೆಚ್ಚಳ

ಮೈಸೂರು, ಸೆ.27(ಆರ್‌ಕೆ)–ಮೈಸೂರಿನ ಪಾರಂಪರಿಕ ಕಟ್ಟಡ, ಸ್ಮಾರಕಗಳನ್ನು ನೋಡಲು ನಗರ ಪ್ರದಕ್ಷಿಣೆ ಮಾಡಿಸುವ ಅಂಬಾರಿ ಡಬಲ್ ಡೆಕ್ಕರ್ ಬಸ್‌ನ ರೂಫ್‌ಟಾಪ್ ಸವಾರಿ ದರವನ್ನು 250 ರಿಂದ 350 ರೂ.ಗಳಿಗೆ ಹೆಚ್ಚಿಸಲಾಗಿದೆ.



ಸಂಜೆ 6 ಗಂಟೆ ನಂತರ ದಸರಾ ದೀಪಾಲಂಕಾರ ನೋಡಲು ಪ್ರವಾಸಿಗರು ಹಾಗೂ ಸಾರ್ವಜನಿಕರಿಂದ ಬೇಡಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಅಂಬಾರಿ ಬಸ್ಸಿನ ಮೊದಲ ಮಹಡಿಯ ಸವಾರಿ ದರವನ್ನು 100 ರೂ. ಹೆಚ್ಚಳ ಮಾಡಲಾಗಿದೆ. ಆದರೆ ಕೆಳ ಭಾಗದ ಬಸ್‌ನಲ್ಲಿ 250 ರೂ. ಪಾವತಿಸಿ ಪ್ರಯಾಣಿಸಬಹುದು.

ಸಂಜೆ ಟ್ರಿಪ್ ಸಂಜೆ 6.30 ರಿಂದ ಆರಂಭವಾಗಿ ರಾತ್ರಿ 10 ಗಂಟೆಗೆ ಮುಕ್ತಾಯಗೊಳ್ಳಲಿದೆ. ಆಸಕ್ತರು https://www.kstdc.co ಮೂಲಕ ಆನ್‌ಲೈನ್‌ನಲ್ಲೂ ಟಿಕೆಟ್ ಬುಕ್ ಮಾಡಬಹುದು ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (KSTDC) ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಚಿವರಿಂದ ಆರೋಗ್ಯ ದಸರಾ ವೈದ್ಯಕೀಯ ವಸ್ತುಪ್ರದರ್ಶನ ಉದ್ಘಾಟನೆ



ಮೈಸೂರು, ಸೆ.27(ಆರ್‌ಕೆ)–ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಮೆಡಿಕಲ್ ಕಾಲೇಜಿನ ಅಂಗ ರಚನಾಶಾಸ್ತ್ರ (ಅನಾಟಮಿ) ವಿಭಾಗದ ಸಭಾಂಗಣದಲ್ಲಿ ಆರೋಗ್ಯ ದಸರಾ ವೈದ್ಯಕೀಯ ವಸ್ತುಪ್ರದರ್ಶನವನ್ನು ಆಯೋಜಿಸಲಾಗಿದೆ.

ಎಂಎಂಸಿಆರ್‌ಐ ಮತ್ತು ಆರೋಗ್ಯ ಇಲಾಖೆ ಜಂಟಿ ಆಶ್ರಯದಲ್ಲಿ ಏರ್ಪಡಿಸಿರುವ ವೈದ್ಯಕೀಯ ವಸ್ತುಪ್ರದರ್ಶನವನ್ನು ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಇಂದು ಮಧ್ಯಾಹ್ನ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಜನರಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಇಲಾಖೆಯು ವಸ್ತುಪ್ರದರ್ಶನ ಏರ್ಪಡಿಸಿದ್ದು, ಆಯುಷ್ಮಾನ್, ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ 1 ಲಕ್ಷ ಮಂದಿಗೆ ಉಚಿತವಾಗಿ ಚಿಕಿತ್ಸೆ ನೀಡಿದ್ದು, 118 ಕೋಟಿ ರೂ.ಗಳನ್ನು ಖರ್ಚು ಮಾಡಿದೆ ಎಂದರು. ರಾಜ್ಯದಲ್ಲಿ 5 ಕೋಟಿ ಆಯುಷ್ಮಾನ್ ಭಾರತ್ ಮತ್ತು ಆರೋಗ್ಯ ಕರ್ನಾಟಕ (ಎಬಿಎಕೆ) ಕಾರ್ಡ್ ನೀಡಿದ್ದು, ಕಳೆದ ಒಂದು ವಾರದಿಂದೀಚೆಗೆ 85 ಲಕ್ಷ ಕಾರ್ಡ್ ವಿತರಿಸಲಾಗಿದೆ. ಪ್ರತಿಯೊಂದು ತಾಲೂಕು ಆಸ್ಪತ್ರೆಗಳಲ್ಲಿ ತಲಾ 2 ಐಸಿಯು ವಾರ್ಡ್, ಪ್ರತೀ ಜಿಲ್ಲೆಯ 2 ಆಸ್ಪತ್ರೆಗಳಲ್ಲಿ ಟೆಲಿ ಮೆಡಿಸಿನ್ ವ್ಯವಸ್ಥೆ ಕಲ್ಪಿಸಲಾಗಿದೆ. ಮೈಸೂರು ಜಿಲ್ಲೆಗೆ ಹೆಚ್ಚುವರಿಯಾಗಿ 131 ವೈದ್ಯರನ್ನು ನೇಮಿಸುವ ಪ್ರಕ್ರಿಯೆ ಆರಂಭಿಸಿದ್ದೇವೆ ಎಂದು ಸಚಿವರು ನುಡಿದರು.

ಮೈಸೂರಿನ ಟ್ರಾಮಾ ಕೇರ್ ಸೆಂಟರ್‌ಗೆ ವೈದ್ಯರೂ ಸೇರಿ 225 ಹುದ್ದೆ ಮಂಜೂರಾಗಿದ್ದು, ಮೂರು ತಿಂಗಳೊಳಗಾಗಿ ವೈದ್ಯಕೀಯ ಸೇವೆ ಆರಂಭಿಸಲಾಗುವುದು. ಅಲ್ಲದೆ ಮೈಸೂರು ಮೆಡಿಕಲ್ ಕಾಲೇಜು ಅಡಿ ಬರುವ ಆಸ್ಪತ್ರೆಗಳ ಪುನರುಜ್ಜೀವನಕ್ಕೆ ಈಗಾಗಲೇ 89 ಕೋಟಿ ರೂ.ಗಳನ್ನು ಸಚಿವ ಸಂಪುಟ ಮಂಜೂರು ಮಾಡಿದೆ ಎಂದು ಡಾ. ಸುಧಾಕರ್ ತಿಳಿಸಿದರು.

ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ. ಆರ್.ರೂಪಾ, ಕಾರ್ಪೊರೇಟರ್ ಪ್ರಮೀಳಾ ಭರತ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ಎಂಡಿ ಡಾ. ಅರುಂಧತಿ, ಎಂಎಂಸಿಆರ್‌ಐ ಡೀನ್ ಡಾ. ಕೆ.ಆರ್.ದಾಕ್ಷಾಯಿಣಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್.ಪ್ರಸಾದ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಸಿ.ಎಂ.ಜಯಂತ್, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಎನ್.ನಂಜುಂಡಸ್ವಾಮಿ, ಚೆಲುವಾಂಬ ಆಸ್ಪತ್ರೆಯ ಡಾ. ರಾಜೇಂದ್ರಕುಮಾರ್ ಹಾಗೂ ಇತರರು ಭಾಗವಹಿಸಿದ್ದರು.



ರಂಗೋಲಿ ಹಾಕುವುದರಿಂದ ಮಹಿಳೆಯರ ಆರೋಗ್ಯ ವೃದ್ಧಿಸುತ್ತದೆ: ರಾಮದಾಸ್

ಮಹಿಳಾ ಮತ್ತು ಮಕ್ಕಳ ದಸರಾ ವತಿಯಿಂದ ರಂಗೋಲಿ ಸ್ಪರ್ಧೆ: 16 ರಿಂದ 87 ವರ್ಷದವರು ಉತ್ಸಾಹದಿಂದ ಭಾಗಿ





ಮೈಸೂರು, ಸೆ.27(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ನೂರಾರು ಮಂದಿ ಪಾಲ್ಗೊಂಡು, ವಿವಿಧ ವಿನ್ಯಾಸದ ರಂಗೋಲಿ ಬಿಟ್ಟು, ತಮ್ಮಲ್ಲಿರುವ ಪ್ರತಿಭೆ ಮೆರೆದರು.

ರಂಗೋಲಿ ಸ್ಪರ್ಧೆಯನ್ನು ಶಾಸಕ ಎಸ್.ಎ.ರಾಮದಾಸ್ ರಂಗೋಲಿ ಬಿಡುವ ಮೂಲಕ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಮನೆ ಮುಂದೆ ರಂಗೋಲಿ ಬಿಡುವುದು ನಮ್ಮ ಸಂಪ್ರದಾಯವಾಗಿದ್ದು, ವೈಜ್ಞಾನಿಕವಾಗಿ ಮಹಿಳೆಯರ ಆರೋಗ್ಯ ವೃದ್ಧಿಸುತ್ತದೆ. ರಂಗೋಲಿ ಬಿಡುವಾಗ 8 ಆಸನಗಳ ವ್ಯಾಯಾಮ ಮಾಡಿದಂತಾಗುತ್ತದೆ ಕಣ್ಣಿನ ದೃಷ್ಟಿ, ಬುದ್ಧಿ ಚುರುಕಾಗುತ್ತದೆ ಎಂದರು.

ಮನೆ ಮುಂದೆ ರಂಗೋಲಿ ಬಿಡಿಸುವುದು ಪಾರಂಪರಿಕವಾಗಿ ಆಚರಣೆಯಲ್ಲಿದೆ ಮಹಿಳಾ ದಸರಾ ವತಿಯಿಂದ ಹಲವು ವರ್ಷಗಳಿಂದ ರಂಗೋಲಿ ಬಿಡಿಸುವ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದೆ. ರಂಗೋಲಿ ಕಲೆಯನ್ನು ವಿದೇಶದಲ್ಲಿ ಕಲಿಸಬಯಸುವವರಿಗೆ ಕೇಂದ್ರ ಸರ್ಕಾರದ ಯೋಜನೆಯಡಿ ವಿದೇಶಕ್ಕೆ ಕಳುಹಿಸುವ ವ್ಯವಸ್ಥೆ ಮಾಡಿಕೊಡಲು ಉದ್ದೇಶಿಸಲಾಗಿದೆ. ಆಧುನಿಕ ಯುಗದಲ್ಲಿ ನಮ್ಮ ಪರಂಪರೆಯನ್ನು ಮರೆಯಬಾರದು. ನಮ್ಮ ಆಚರಣೆಗಳನ್ನು ಮುನ್ನಡೆಸಿಕೊಂಡು ಹೋಗಬೇಕು. ರಂಗೋಲಿ ಕಲೆಯಲ್ಲೂ ಆಧುನಿಕತೆಯ ಪರಿಣಾಮ ನಾನಾ ಉಪಕರಣಗಳು ಬಂದಿವೆ. ಆದರೂ, ಕೈಯಲ್ಲೇ ರಂಗೋಲಿ ಬಿಡಿಸುವ ಕಲೆಗಾರಿಕೆಯನ್ನು ಸಾಕಷ್ಟು ಮಂದಿ ಮುಂದುವರೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ. ಈ ಕಲೆಯನ್ನು ಮಕ್ಕಳಿಗೂ ಕಲಿಸಬೇಕು ಎಂದು ಸಲಹೆ ನೀಡಿದರು.

ರಂಗೋಲಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಯೋಗ ಚಿತ್ರ, ಜಂಬೂ ಸವಾರಿ, ಭಾರತ ಮಾತೆ ಚಿತ್ರ, ದುರ್ಗಾದೇವಿ, ನಂದೀಶ್ವರ, ಮಹಿಷಾಸುರ ಚಿತ್ರ ಆನೆ ಅಂಬಾರಿ, ಗಂಡುಭೇರುಂಡ ಸೇರಿದಂತೆ ಇನ್ನಿತರ ಚಿತ್ರಗಳನ್ನೂ ರಂಗೋಲಿ ರೂಪದಲ್ಲೇ ಬಿಡಿಸಿ ಗಮನ ಸೆಳೆದರು. 16 ವರ್ಷದಿಂದ 87 ವರ್ಷದವರೆಗೂ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ವಿಶೇಷ.

ವಿಜೇತರು: ರಂಗೋಲಿ ಸ್ಪರ್ಧೆಯಲ್ಲಿ ಮೊದಲ ಬಹುಮಾನವನ್ನು ಗೌರಿ, ಎರಡನೇ ಬಹುಮಾನ ರಾಜಲಕ್ಷ್ಮೀ, ಮೂರನೇ ಬಹುಮಾನ ಸಾವಿತ್ರಿ ಹಾಗೂ ಸಮಾಧಾನಕರ ಬಹುಮಾನವನ್ನು 87 ವರ್ಷದ ಪಾರ್ವತಮ್ಮ ಪಡೆದುಕೊಂಡರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಉಪಸಮಿತಿಯ ವಿಶೇಷಾಧಿಕಾರಿಗಳು ಹಾಗೂ ಜಿ.ಪಂ.ಉಪ ಕಾರ್ಯದರ್ಶಿ ಪ್ರೇಮ್ ಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಸವರಾಜ್ ಇನ್ನಿತರರಿದ್ದರು.

ದಸರಾ ಯೋಗವಾಹಿನಿಯಲ್ಲಿ ಪತ್ರಕರ್ತರೂ ಸೇರಿ 300 ಮಂದಿ ಭಾಗಿ



ಮೈಸೂರು, ಸೆ 27 (ಆರ್‌ಕೆ)– ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಸರಸ್ವತಿಪುರಂನಲ್ಲಿರುವ ಜವರೇಗೌಡ ಪಾರ್ಕ್‌ನಲ್ಲಿ ಇಂದು ಏರ್ಪಡಿಸಿದ್ದ ಯೋಗ ವಾಹಿನಿ ಕಾರ್ಯಕ್ರಮದಲ್ಲಿ ಪತ್ರಕರ್ತರೂ ಸೇರಿ 300ಕ್ಕೂ ಹೆಚ್ಚು ಮಂದಿ ಭಾಗಿಯಾಗಿ ಯೋಗ ಪ್ರದರ್ಶಿಸಿದರು.

ದಸರಾ ಯೋಗ ಉಪಸಮಿತಿ ಜಿಲ್ಲಾಡಳಿತ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆ, ಜಿಎಸ್‌ಎಸ್ ಯೋಗ ಶಿಕ್ಷಣ ಸಂಸ್ಥೆ, ಆಯುಷ್ ಇಲಾಖೆ ಹಾಗೂ ಮೈಸೂರು ಯೋಗ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಯೋಗ ವಾಹಿನಿ ಕಾರ್ಯಕ್ರಮವನ್ನು ಶಾಸಕ ಎಲ್. ನಾಗೇಂದ್ರ ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಶಾಸಕರು, ಮೈಸೂರು ಆರೋಗ್ಯ, ಶಿಕ್ಷಣ, ಯೋಗದಲ್ಲಿ ಪ್ರಸಿದ್ಧಿಯಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಅವರೇ ಆಗಮಿಸಿ ಸಾಂಸ್ಕೃತಿಕ ನಗರಿಯಲ್ಲಿ ಯೋಗ ಪ್ರದರ್ಶಿಸಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಯಶಸ್ವಿಗೊಳಿಸಿರುವುದು ಹೆಮ್ಮೆಯ ವಿಷಯ ಎಂದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಮಾತನಾಡಿ, ಬದಲಾದ ಜೀವನ ಶೈಲಿ, ಆಹಾರ ಪದ್ಧತಿ ಹಾಗೂ ಕೆಲಸದ ಒತ್ತಡದಿಂದಾಗಿ ಇಂದು ಮನುಷ್ಯ ಅತೀ ಚಿಕ್ಕ ವಯಸ್ಸಿನಲ್ಲೇ ಆರೋಗ್ಯ ಸಮಸ್ಯೆಯಿಂದ ಬಳಲುವಂತಾಗಿದೆ. ಕಾಯಿಲೆ ಬಂದ ನಂತರ ಚಿಕಿತ್ಸೆ ಪಡೆಯುವ ಬದಲು ನಿತ್ಯ ಯೋಗಾಭ್ಯಾಸ, ವ್ಯಾಯಾಮ ಮಾಡುವ ಮೂಲಕ ರೋಗಗಳು ಬಾರದಂತೆ ಮುನ್ನೆಚ್ಚರಿಕೆ ವಹಿಸುವುದು ಒಳಿತು ಎಂದರು.

ಉಪಮೇಯರ್ ಡಾ. ಆರ್.ರೂಪಾ, ದಸರಾ ಉಪಸಮಿತಿ ವಿಶೇಷಾಧಿಕಾರಿಯಾದ ಭೂ ದಾಖಲೆಗಳ ಉಪ ನಿರ್ದೇಶಕಿ ಸೀಮಾಂತಿನಿ, ಕಾರ್ಯಾಧ್ಯಕ್ಷರಾದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ಜಿಲ್ಲಾ ಅಧಿಕಾರಿ ಮಹೇಶ್, ಸದಸ್ಯ ಕಾರ್ಯದರ್ಶಿಯಾದ ಜಿಲ್ಲಾ ಆಯುಷ್ ಅಧಿಕಾರಿ ಡಾ. ಪುಷ್ಪಾ, ಸಮಿತಿ ಅಧ್ಯಕ್ಷ ಬಾಲಕೃಷ್ಣ, ಉಪಾಧ್ಯಕ್ಷರಾದ ಈಶ್ವರ, ಕೆ.ವೈ. ಮಂಜು, ಬಿ.ಸಿ. ಯೋಗೇಶ್ ಕುಮಾರ್, ಸದಸ್ಯ ಅರುಣ್ ಕುಮಾರ್, ಪಾಲಿಕೆ ಸದಸ್ಯರಾದ ಬಿ.ವಿ. ಮಂಜುನಾಥ್, ಪ್ರಮೀಳಾ ಭರತ್, ವೇದಾವತಿ, ಶಿವಕುಮಾರ್, ಜಿಎಸ್‌ಎಸ್‌ನ ಶ್ರೀಹರಿ, ಯೋಗ ಒಕ್ಕೂಟದ ಶಶಿಕುಮಾರ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ ಹಾಗೂ ಇತರರು ಯೋಗವಾಹಿನಿಯಲ್ಲಿ ಪಾಲ್ಗೊಂಡಿದ್ದರು.

ಆಯುಷ್ ಇಲಾಖೆಯ ಡಾ. ಅಶೋಕ್, ಡಾ. ರಂಗನಾಥ್, ಡಾ. ಸುಜಾತ, ಡಾ. ಮನ್ಸೂರ್, ಡಾ. ತಿಲಕ್, ಡಾ. ಪಾಂಡು, ಡಾ. ಕುಮಾರ ಸೇರಿದಂತೆ ಇತರರು ಯೋಗಾಭ್ಯಾಸ ಹೇಳಿಕೊಟ್ಟರು. ಭಾಗವಹಿಸಿದ್ದ ಯೋಗಾಸಕ್ತರಿಗೆ ಯೋಗಾ ಮ್ಯಾಟ್, ಟಿ ಶರ್ಟ್ ಹಾಗೂ ಉಪಾಹಾರ ವ್ಯವಸ್ಥೆ ಮಾಡಲಾಗಿತ್ತಲ್ಲದೆ, ಆರೋಗ್ಯ ತಪಾಸಣೆಯನ್ನೂ ಮಾಡಲಾಯಿತು.

ದಸರಾ ಉದ್ಘಾಟನೆ ವೇಳೆ ಮೇಯರ್, ಶಾಸಕ ಜಿಟಿಡಿಗೆ ಅಪಮಾನ ಆರೋಪ

ತಕ್ಷಣ ಸ್ಪಷ್ಟನೆ ನೀಡಲು ಜಿಲ್ಲಾಡಳಿತಕ್ಕೆ ನಾಯಕರ ಹಿತರಕ್ಷಣಾ ವೇದಿಕೆ ಆಗ್ರಹ

ಮೈಸೂರು, ಸೆ.27(ಆರ್‌ಕೆಬಿ)– ಚಾಮುಂಡಿಬೆಟ್ಟದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದಸರಾ ಮಹೋತ್ಸವ ಉದ್ಘಾಟನೆ ನೆರವೇರಿಸುವ ಸಂದರ್ಭದಲ್ಲಿ ಮೈಸೂರಿನ ಪ್ರಥಮ ಪ್ರಜೆ ಮೇಯರ್ ಶಿವಕುಮಾರ್ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರಿಗೆ ವೇದಿಕೆಯಲ್ಲಿ ಸ್ಥಳಾವಕಾಶ ಮಾಡಿಕೊಡದೆ ಶಿಷ್ಟಾಚಾರವನ್ನು ಉಲ್ಲಂಘಿಸಲಾಗಿದೆ. ಇದು ಮೈಸೂರಿಗರಿಗೆ ಮಾಡಿದ ಅವಮಾನ ಎಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ಪ್ರಧಾನ ಕಾರ್ಯದರ್ಶಿ ಪ್ರಭಾಕರ್ ಹುಣಸೂರು ಖಂಡಿಸಿದ್ದಾರೆ.

ಇದಕ್ಕೆ ಕಾರಣರಾದ ಸರ್ಕಾರ ಮತ್ತು ಜಿಲ್ಲಾಡಳಿತದ ನಡೆಯನ್ನು ಖಂಡಿಸಿರುವ ಅವರು ಕೂಡಲೇ ಈ ಸಂಬಂಧ ಜಿಲ್ಲಾಡಳಿತ ಸ್ಪಷ್ಟನೆ ನೀಡಬೇಕು. ಇದರ ಹೊಣೆಯನ್ನು ಜಿಲ್ಲಾ ಉಸ್ತುವಾರಿ ಸಚಿವರು ಹೊರಬೇಕು. ನಾಡಹಬ್ಬ ದಸರಾ ಕಾರ್ಯಕ್ರಮದಲ್ಲಿ ಪ್ರತಿ ವರ್ಷ ಎಲ್ಲಾ ಪಕ್ಷದ, ಸಂಘಟನೆಗಳ, ಸಮಾಜ ಸೇವಕರು, ಚಿಂತಕರನ್ನು ಒಳಗೊಂಡ ಉಪ ಸಮಿತಿಗಳನ್ನು ರಚಿಸಿ, ಕಾರ್ಯಕ್ರಮ ನಡೆಸಲಾಗುತ್ತಿತ್ತು. ಆದರೆ ಈ ಬಾರಿ ಅಂತಹ ಸಂಪ್ರದಾಯಕ್ಕೆ ತಿಲಾಂಜಲಿ ಹೇಳುವ ಮೂಲಕ ಬಿಜೆಪಿ ಸರ್ಕಾರ ಕೇವಲ ತನ್ನ ಕಾಯಕರ್ತರನ್ನು ಮಾತ್ರ ನೇಮಕ ಮಾಡಿದೆ. ಈ ಮೂಲಕ ಸಾರ್ವಜನಿಕ ದಸರಾವನ್ನು ಪಕ್ಷದ ವೇದಿಕೆಯನ್ನಾಗಿ ಮಾಡಿಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಾಳೆ ಪಾಯಿಂಟ್ ಕುಸ್ತಿ ಪಂದ್ಯಾವಳಿಗೆ ಒಲಿಂಪಿಕ್ ಪದಕ ವಿಜೇತೆ ಸಾಕ್ಷಿ ಮಲ್ಲಿಕ್ ಚಾಲನೆ



ಮೈಸೂರು,ಸೆ.27–ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕುಸ್ತಿ ಉಪಸಮಿತಿ ವತಿಯಿಂದ ಸೆಪ್ಟಂಬರ್ 26ರಿಂದ ಅಕ್ಟೋಬರ್ 2ರವರೆಗೆ ಮೈಸೂರಿನ ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣ ದೊಡ್ಡಕೆರೆ ಮೈದಾನದಲ್ಲಿ ಕುಸ್ತಿ ಪಂದ್ಯಾವಳಿಗಳನ್ನು ಆಯೋಜಿಸಲಾಗಿದೆ. ಕುಸ್ತಿ ಪಂದ್ಯಾವಳಿಗಳನ್ನು ರಾಷ್ಟ್ರ ಮಟ್ಟದಲ್ಲಿ ಹೆಸರಾಗಿರುವ ಕುಸ್ತಿಪಟು ಹಾಗೂ ಒಲಿಂಪಿಕ್ ಪದಕ ವಿಜೇತ ಸಾಕ್ಷಿ ಮಲ್ಲಿಕ್, ಸೆಪ್ಟೆಂಬರ್ 29 ರಂದು ಗುರುವಾರ ಸಂಜೆ 4 ಗಂಟೆಗೆ ದಸರಾ ಪಾಯಿಂಟ್ ಕುಸ್ತಿ ಪಂದ್ಯಾವಳಿಗಳಿಗೆ ಚಾಲನೆ ನೀಡುವರು ಎಂದು ದಸರಾ ಉಪವಿಶೇಷಾಧಿಕಾರಿ ಕುಸ್ತಿ ಪಂದ್ಯಾವಳಿ ಹಾಗೂ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಪಿರಿಯಾಪಟ್ಟಣ, ಸೆ.27– ನಾನು ಎಂದಿಗೂ ಅಧಿಕಾರಕ್ಕಾಗಿ ರಾಜಕಾರಣ ಮಾಡಿಲ್ಲ. ಬದ್ಧತೆಯಿಂದ ತಾಲೂಕಿನ ಪ್ರತಿಯೊಂದು ಗ್ರಾಮದ ಸರ್ವತೋಮುಖ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದೇನೆ. ನನ್ನ ಅಭಿವೃದ್ಧಿ ಕಾರ್ಯದ ಬಗ್ಗೆ ನಿಮಗೆ ತೃಪ್ತಿ ಇದ್ದರೆ ಮಾತ್ರ ಮುಂಬರುವ ಚುನಾವಣೆಯಲ್ಲಿ ಮತ ನೀಡಿ. ಇಲ್ಲದಿದ್ದರೆ ನಾನೇ ರಾಜಕೀಯ ನಿವೃತ್ತಿ ಘೋಷಿಸುತ್ತೇನೆ ಎಂದು ಶಾಸಕ ಮಹದೇವ್ ನುಡಿದರು.

ತಾಲೂಕಿನ ಹುಣಸವಾಡಿ ಗೋಮಾಳದಲ್ಲಿ 20 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ಹಿಂದೆ ತಾಲೂಕಿನಲ್ಲಿ ರಾಜಕಾರಣ ಮಾಡಿದವರು ಈ ಕುಗ್ರಾಮಕ್ಕೆ ಮೂಲ ಸೌಕರ್ಯ ಕಲ್ಪಿಸಿಕೊಟ್ಟಿದ್ದರೆ ನನಗೆ ಈ ರೀತಿಯ ಒತ್ತಡವಿರುತ್ತಿರಲಿಲ್ಲ. ಈ 4 ವರ್ಷದಲ್ಲಿ ನಾನು ತಾಲೂಕಿನ ಪ್ರತಿಯೊಂದು ಗ್ರಾಮದ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಈ ಗ್ರಾಮಕ್ಕೆ ಸಿಸಿ ರಸ್ತೆ ಮಾಡಿಸಿ ಕೊಡುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡರಾದ ಶಾಂತಕುಮಾರ್, ಶಶಿಕಲಾ, ನಾಗರಾಜ್, ಗೋವಿಂದೇಗೌಡ, ಸುಬ್ರಹ್ಮಣ್ಯ, ನಾಗರಾಜ್ ಸೇರಿದಂತೆ ಗ್ರಾಮಸ್ಥರಿದ್ದರು.



ಮೈಸೂರು ತಾಲೂಕಿನ ಸಿದ್ದರಾಮನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸಂಘದ ಆವರಣದಲ್ಲಿ ನಡೆಯಿತು. ಅಧ್ಯಕ್ಷ ಸಿದ್ದರಾಮು ಸಂಘ 5,04,779 ರೂ. ಲಾಭ ಗಳಿಸಿದೆ ಎಂದರು. ಈ ವೇಳೆ ಯಡಕೊಳ ಗ್ರಾಪಂ ಅಧ್ಯಕ್ಷ ಚಂದ್ರಶೇಖರ್, ವಿಸ್ತರಣಾಧಿಕಾರಿ ವಿನುತಾ, ಉಪಾಧ್ಯಕ್ಷ ಮಹದೇವ್, ನಿರ್ದೇಶಕರಾದ ಉದಯರಾಜು, ಶಿವಣ್ಣ, ಶಂಕರ, ದಿನೇಶ್, ಸಿದ್ದರಾಜು, ಮಹದೇವ, ಶ್ರೀನಿವಾಸ, ಜಯಮ್ಮ, ಸವಿತಾ, ಕಾರ್ಯದರ್ಶಿ ರಮೇಶ, ಹಾಲು ಪರೀಕ್ಷಕ ಲೋಕೇಶ್, ಸಹಾಯಕ ಮಧು ಮತ್ತು ಹಾಲು ಉತ್ಪಾದಕರು ಹಾಜರಿದ್ದರು.


ಮಹಿಳೆ ಶವ ನಾಲೆಯಲ್ಲಿ ಪತ್ತೆ



ಹುಣಸೂರು, ಸೆ.27– ನ್ಯಾಯಾಲಯದ ಮಹಿಳಾ ಉದ್ಯೋಗಿಯೊಬ್ಬರ ಶವ ನಾಲೆಯಲ್ಲಿ ಪತ್ತೆಯಾಗಿದ್ದು, ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಮೂಲತಃ ಪಿರಿಯಾಪಟ್ಟಣ ತಾಲೂಕಿನ ಕುಡುಕೂರಿನ ಕೆ.ಕೆ.ರಾಮರಾಜೇ ಅರಸ್ ಅವರ ಪತ್ನಿ, ಹುಣಸೂರು ನ್ಯಾಯಾಲಯದ ದ್ವಿತೀಯ ದರ್ಜೆ ಸಹಾಯಕಿ ಭಾಗ್ಯಮಣ್ಣಿ (40) ಮೃತರು. ಇವರಿಗೆ ಪತಿ, ಇಬ್ಬರು ಮಕ್ಕಳಿದ್ದಾರೆ.

ಭಾಗ್ಯಮಣ್ಣಿಯವರು ಎಂದಿನಂತೆ ಪತಿಯೊಂದಿಗೆ ಪಿರಿಯಾಪಟ್ಟಣಕ್ಕೆ ಬಂದು ಹುಣಸೂರು ಬಸ್ ಹತ್ತಿದ್ದರೆನ್ನಲಾಗಿದ್ದು, ಆದರೆ ಇಂದು ಕರ್ತವ್ಯಕ್ಕೆ ಹಾಜರಾಗಿರಲಿಲ್ಲ. ಮಧ್ಯಾಹ್ನದ ವೇಳೆಗೆ ತಾಲೂಕಿನ ಹನಗೋಡು ಹೋಬಳಿಯ ಆಡಿಗನಹಳ್ಳಿಯಿಂದ ತಟ್ಟೆಕೆರೆಗೆ ತೆರಳುವ ಮಾರ್ಗದ ಹಾರಂಗಿ ನಾಲೆಯಲ್ಲಿ ಶವ ಪತ್ತೆಯಾಗಿದ್ದು, ಅಕ್ಕಪಕ್ಕದ ಜಮೀನಿನವರು ಮಾಹಿತಿ ನೀಡಿದ ಮೇರೆಗೆ ಇನ್ಸ್‌ಪೆಕ್ಟರ್ ಸಿ.ವಿ.ರವಿ ಸ್ಥಳ ಪರಿಶೀಲಿಸಿದರು. ಪೊಲೀಸರು ಶವವನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಭಾರತ್ ಜೋಡೋ ಯಾತ್ರೆ
ಯಶಸ್ವಿಗೆ ಸಹಕರಿಸಿ: ಡಾ.ಹೆಚ್‌ಸಿಎಂ



ನಂಜನಗೂಡು, ಸೆ.27– ಕಾಂಗ್ರೆಸ್ ರಾಷ್ಟ್ರೀಯ ಮುಖಂಡ ರಾಹುಲ್ ಗಾಂಧಿ ನೇತೃತ್ವದಲ್ಲಿ ನಂಜನಗೂಡಿಗೆ ಆಗಮಿಸುವ ಭಾರತ್ ಜೋಡೋ ಯಾತ್ರೆಯಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕರೆ ನೀಡಿದರು.

ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ಮಂಗಳವಾರ ನಡೆದ ಭಾರತ್ ಜೋಡೋ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ದೇಶದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದೆ. ಪ್ರಸ್ತುತ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯ ದುರಾಡಳಿತದಿಂದ ದೇಶ ತತ್ತರಿಸಿದೆ. ಅಗತ್ಯ ವಸ್ತುಗಳ ಬೆಲೆ ಏರಿಸುವ ಮೂಲಕ ದೇಶದ ಜನತೆಯ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ರಾಜ್ಯದ ಬಿಜೆಪಿ ಸರ್ಕಾರ ಅಭಿವೃದ್ಧಿ ಕಾರ್ಯ ಕೈಗೊಳ್ಳದೇ, ಭ್ರಷ್ಟಾಚಾರದಲ್ಲಿ ನಿರತವಾಗಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲು ಪ್ರತಿಯೊಬ್ಬ ಕಾರ್ಯಕರ್ತರು ಶ್ರಮಿಸಬೇಕು ಎಂದ ಅವರು, ಗುಂಡ್ಲುಪೇಟೆಯಿಂದ ಪ್ರಾರಂಭವಾಗುವ ಭಾರತ್ ಜೋಡೋ ಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಾತ್ರೆ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಪೂರ್ವಭಾವಿ ಸಭೆಯಲ್ಲಿ ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ದೇವನೂರು ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಜಿಲ್ಲಾಧ್ಯಕ್ಷ ವಿಜಯ್ ಕುಮಾರ್, ಇಂಧನ್ ಬಾಬು, ನಗರಸಭೆ ಸದಸ್ಯರಾದ ಎಸ್.ಪಿ.ಮಹೇಶ್, ಗಾಯಿತ್ರಿ, ಯೋಗೀಶ್, ಚಂದ್ರು, ಗಿರೀಶ್, ಚಂದ್ರು, ಚೋಳರಾಜ್, ಚಾಮರಾಜ್, ಹೆಜ್ಜಿಗೆ ರವಿ, ಮೂಗಶೆಟ್ಟಿ, ನಂದ ಕುಮಾರ್, ಕೆ.ಬಿ.ಸ್ವಾಮಿ, ಖಾಸಗಿ ವಿದ್ಯಾಸಂಸ್ಥೆಗಳ ತಾಲೂಕು ಅಧ್ಯಕ್ಷ ನಟರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆನಕನಹಳ್ಳಿ ಪ್ರತ್ಯೇಕ ಪಿಎಸಿಎಸ್ ಸ್ಥಾಪನೆಗೆ ಅಸಮ್ಮತಿ



ತಿ.ನರಸೀಪುರ, ಸೆ.27– ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರನ್ನು ಬೇರ್ಪಡಿಸಿ ಬೆನಕನಹಳ್ಳಿ ಪಿಎಸಿಎಸ್ ಸ್ಥಾಪನೆ ಮಾಡಲು ಸೋಸಲೆ ವ್ಯಾಪ್ತಿಯ ಸದಸ್ಯರು ಹಾಗೂ ನಿರ್ದೇಶಕರು ಅಸಮ್ಮತಿಸಿದರು.

ಸೋಸಲೆ ಗ್ರಾಮದಲ್ಲಿ ಆಯೋಜಿಸಿದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2021–22ನೇ ಸಾಲಿನ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷ ಬಿ.ಎಸ್. ಪ್ರಭುಸ್ವಾಮಿ ಮಾತನಾಡಿ, ಸರ್ಕಾರದ ಆದೇಶದಂತೆ ಪ್ರತಿ ಗ್ರಾಪಂಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸ್ಥಾಪನೆ ಮಾಡಬೇಕಿರುವುದರಿಂದ ಬೆನಕನಹಳ್ಳಿ ವ್ಯಾಪ್ತಿಯ ಸದಸ್ಯರನ್ನು ಸೋಸಲೆ ಸಂಘದಿಂದ ಬೇರ್ಪಡಿಸಿ ಬೆನಕನಹಳ್ಳಿ ಪಿಎಸಿಎಸ್ ಸ್ಥಾಪನೆ ಮಾಡುವುದಾಗಿ ಸರ್ಕಾರದ ಆದೇಶ ಪ್ರತಿ ಓದಿದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಸೋಸಲೆ ವ್ಯಾಪ್ತಿಯ ಸದಸ್ಯರು ಹಾಗೂ ನಿರ್ದೇಶಕರು ಪ್ರತ್ಯೇಕ ಮಾಡುವುದು ಬೇಡ, ಸೋಸಲೆಯಲ್ಲೇ ಮುಂದುವರಿಸಬೇಕು ಎಂದು ಪಟ್ಟು ಹಿಡಿದರು. ಇದಕ್ಕೆ ಒಪ್ಪದ ಬೆನಕನಹಳ್ಳಿ ಸದಸ್ಯರು ಗ್ರಾಪಂ ವ್ಯಾಪ್ತಿಯಲ್ಲಿ ಷೇರುದಾರರು ಹೆಚ್ಚು ನೋಂದಣಿಯಾಗಿದ್ದಾರೆ. ಆದ್ದರಿಂದ ಪ್ರತ್ಯೇಕವಾಗಿ ಬೆನಕನಹಳ್ಳಿ ಪಿಎಸಿಎಸ್ ಮಾಡಬೇಕು. ಇಲ್ಲದಿದ್ದರೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಎಚ್ಚರಿಕೆ ನೀಡಿದರು.

ಈ ವೇಳೆ ಸಭೆಯಲ್ಲಿ ಕೆಲಕಾಲ ಗೊಂದಲ ಉಂಟಾಗಿ, ಎರಡು ಗುಂಪುಗಳ ನಡುವೆ ಮಾತಿನ ಚಕಮಕಿ ನಡೆಯಿತು. ತಕ್ಷಣ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಆದರೆ ಸೋಸಲೆ ಸದಸ್ಯರು ಹಾಗೂ ನಿರ್ದೇಶಕರು ಅಧ್ಯಕ್ಷರ ಭಾಷಣಕ್ಕೂ ಮುನ್ನಾ ಸಭೆಯಿಂದ ನಿರ್ಗಮಿಸಿದರು.

ಈ ವೇಳೆ ಮಾತನಾಡಿದ ಅಧ್ಯಕ್ಷ ಪ್ರಭುಸ್ವಾಮಿ, ಸರ್ಕಾರದ ಆದೇಶ ಪಾಲಿಸಬೇಕಾದದು ಅಧ್ಯಕ್ಷನಾದ ನನ್ನ ಜವಾಬ್ದಾರಿಯಾಗಿದೆ. ಕಾನೂನು ವ್ಯಾಪ್ತಿಗೆ ಒಳಪಟ್ಟು ಕೆಲಸ ಮಾಡಲು ಬದ್ಧನಾಗಿದ್ದೇನೆ ಎಂದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಎಂ.ಸೋಮಣ್ಣ, ಎಂ.ಪರಶಿವಮೂರ್ತಿ, ಎಸ್.ಎನ್ ಧರ್ಮರತ್ನಕುಮಾರ್, ಬಿ.ಎಸ್. ಬಸವಪ್ಪ, ಎಸ್.ಕುಮಾರ್, ಎಂ.ನಾಗರಾಜು, ಹೊನ್ನನಾಯಕ, ಜಯಮ್ಮ, ನೀಲಮ್ಮ, ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ.ಎನ್. ಜಗದೀಶ್, ಹಾಗೂ ಷೇರುದಾರರು ಭಾಗವಹಿಸಿದ್ದರು.

ಇಂದು ಕೆ.ಆರ್.ನಗರ, ಸಾಲಿಗ್ರಾಮದಲ್ಲಿ ಗ್ರಾಮೀಣ ದಸರಾ



ಕೆ.ಆರ್.ನಗರ ಸೆ.27– ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳಲ್ಲಿ ನಾಳೆ (ಸೆ.28) ತಾಲೂಕು ಮಟ್ಟದ ಗ್ರಾಮೀಣ ದಸರಾ ಕಾರ್ಯಕ್ರಮ ಆಚರಿಸುತ್ತಿದ್ದು, ಅದರ ಅಂಗವಾಗಿ ಕ್ರೀಡಾಕೂಟಗಳನ್ನು ಆಯೋಜಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ತಹಸೀಲ್ದಾರ್ ಎಸ್. ಸಂತೋಷ್ ಮನವಿ ಮಾಡಿದರು.

ತಾಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಗ್ರಾಮೀಣ ದಸರಾ ಆಚರಣೆ ಸಂಬಂಧ ಅಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮೀಣ ದಸರಾದಲ್ಲಿ ಗ್ರಾಮೀಣ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ತಂಡಗಳಿಗೆ ಸೂಕ್ತ ಬಹುಮಾನ ನೀಡಲಾಗುವುದು ಎಂದರು.

ಮಹಿಳೆಯರು ಮತ್ತು ರೈತರಿಗೆ ಆಡಿಸುವ ಆಟಗಳಲ್ಲಿ ತಾಲೂಕು ಮಟ್ಟದಲ್ಲಿ ವಿಜೇತರಾದ 1 ಮತ್ತು 2ನೇ ಬಹುಮಾನ ಪಡೆದ ಆಟಗಾರರನ್ನು ಜಿಲ್ಲಾ ಮಟ್ಟಕ್ಕೆ ಆಯ್ಕೆ ಮಾಡಲಾಗುವುದು. ಅಲ್ಲದೇ ವಿಜೇತರಿಗೆ ಸೆ.28 ರಂದು ಮಧ್ಯಾಹ್ನ 1 ಗಂಟೆಗೆ ಪಟ್ಟಣದ ಬಯಲು ರಂಗ ಮಂದಿರದಲ್ಲಿ ಆಯೋಜಿಸಿರುವ ಗ್ರಾಮೀಣ ದಸರಾ ವೇದಿಕೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮಾಡಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ತಾಪಂ ಇಓ ಹೆಚ್.ಕೆ. ಸತೀಶ್, ಪುರಸಭಾ ಮುಖ್ಯಾಧಿಕಾರಿ ಡಾ.ಜಯಣ್ಣ, ಟಿಎಸ್‌ಡಬ್ಲ್ಯೂ ಎಸ್.ಎಂ.ಅಶೋಕ್ ಕುಮಾರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಎಸ್.ಗುರುಪ್ರಸಾದ್, ತೋಟಗಾರಿಕಾ ಇಲಾಖೆ ಸಹಾಯಕ ನಿರ್ದೇಶಕ ಪ್ರಸನ್ನ, ಕೆಎಸ್‌ಆರ್‌ಟಿಸಿ ಘಟಕ ವ್ಯವಸ್ಥಾಪಕ ಮಹೇಶ್ ಸೇರಿದಂತೆ ಇನ್ನಿತರರು ಇದ್ದರು.

ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣಕ್ಕೆ ಭೂಮಿ ಪೂಜೆ



ಹೆಚ್.ಡಿ.ಕೋಟೆ, ಸೆ.27– ಸರ್ಕಾರದ ಮಟ್ಟದಲ್ಲಿ ಹೋರಾಟ ನಡೆಸಿ 25 ಕೋಟಿಗೂ ಹೆಚ್ಚು ಅನುದಾನ ಬಿಡುಗಡೆಗೊಳಿಸಿ ಕ್ಷೇತ್ರದ ಬೀದಿಗಳಲ್ಲಿ ಕಾಂಕ್ರೀಟ್ ರಸ್ತೆ ಚರಂಡಿ ನಿರ್ಮಾಣ ಮಾಡಿ ಅಭಿವೃದ್ಧಿಪಡಿಸಲಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಕಟ್ಟೆಮನಗನಹಳ್ಳಿ, ಗೂಳಿಕಟ್ಟೆ, ಸವ್ವೆ, ಬೆಳೆತೂರು ಎ.ಕಾಲೋನಿ ಗ್ರಾಮಗಳಲ್ಲಿ ಸುಮಾರು 65 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನನ್ನ ಅಧಿಕಾರವಧಿಯಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಕ್ಷೇತ್ರದ ಬಹುತೇಕ ಗ್ರಾಮಗಳ ಪರಿಶಿಷ್ಟ ಜಾತಿ ಹಾಗೂ ವರ್ಗದ ಬೀದಿಗಳಲ್ಲಿ ನೂರಾರು ಕೋಟಿ ಅನುದಾನದಲ್ಲಿ ರಸ್ತೆ, ಚರಂಡಿ ನಿರ್ಮಿಸಿ ಅಭಿವೃದ್ಧಿ ಮಾಡಲಾಗಿದೆ. ಅದೇ ರೀತಿ ಸಾಮಾನ್ಯ ವರ್ಗದ ಜನರು ಹೆಚ್ಚು ವಾಸ ಮಾಡುತ್ತಿರುವ ಗ್ರಾಮಗಳಿಗೆ ವಿಶೇಷ ಅನುದಾನದ ಅಡಿ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಿಸಿ ಹಂತ ಹಂತವಾಗಿ ಅಭಿವೃದ್ಧಿ ಮಾಡಲಾಗುತ್ತಿದೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಮಹೇಶ, ಸದಸ್ಯ ಅಪ್ಪಣ್ಣಸ್ವಾಮಿ, ಗ್ರಾಮದ ಮುಖಂಡರಾದ ಬಸವರಾಜಪ್ಪ, ಚಂದ್ರು, ಜೀವಿಕ ಬಸವರಾಜು, ಕೂಸಣ್ಣ, ಸುರೇಶ್, ಸಿದ್ದಪ್ಪ, ಕೆಂಡಗಣ್ಣಪ್ಪ, ರಾಜೇಗೌಡ, ಸಿದ್ದಪ್ಪಾಜಿ, ಲೀಲಾವತಿ, ಸೋಮೇಗೌಡ, ಸಿಂಗ ನಾಯಕ, ಮಂಜು, ಚಂದ್ರು, ಕೃಷ್ಣನಾಯ್ಕ, ರಾಮಕೃಷ್ಣ, ಜವರೇಗೌಡ, ಮಲ್ಲಿಕಾರ್ಜುನ, ಪಿಡಿಓ ವಿಶಕಂಠಚಾರಿ, ಸಹಾಯಕ ಇಂಜಿನಿಯರ್ ನಟಿಶೇಖರ್, ಗೌಸಿಯಾ ತಾಜ್, ಮುಖಂಡರಾದ ಪ್ರದೀಪ ಅಶೋಕ್, ಸೌಮ್ಯ ಇತರರಿದ್ದರು.



ಬನ್ನೂರು ಸಮೀಪದ ಬಸವನಹಳ್ಳಿಯಲ್ಲಿ ಪಿಎಸಿಎಸ್ ವಾರ್ಷಿಕ ಮಹಾಸಭೆ ನಡೆಯಿತು. ಈ ವೇಳೆ ಸಂಘದ ಅಧ್ಯಕ್ಷ ಮಾದೇಗೌಡ, ನಿರ್ದೇಶಕರಾದ ಲಿಂಗರಾಜು, ಮಹೇಶ್, ವೆಂಕಟೇಗೌಡ, ಜಯರಾಮು, ದೇವರಾಜು, ಸುನೀತ, ನಂದಿನಿ, ನಾಗರಾಜು, ಕೃಷ್ಣೇಗೌಡ, ರಾಮಚಂದ್ರ, ಸಿಇಓ ಶಿವಣ್ಣ, ಕುಮಾರ್, ಮನು, ಯೋಗೇಂದ್ರ, ರಾಜು ಹಲವರಿದ್ದರು.

ನಂಜನಗೂಡಿನಲ್ಲಿ ಗ್ರಾಮೀಣ ದಸರಾಕ್ಕೆ ಚಾಲನೆ



ನಂಜನಗೂಡು, ಸೆ.27– ಗ್ರಾಮೀಣ ಕಲಾವಿದರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಗ್ರಾಮೀಣ ದಸರಾ ಆಚರಣೆ ಮಾಡಲಾಗುತ್ತಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಅರಮನೆ ಮಾಳ ಮೈದಾನದಲ್ಲಿ ಗ್ರಾಮೀಣ ದಸರಾಗೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಜನರಿಗೆ ದಸರಾ ವೀಕ್ಷಣೆಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರದ ಹಂತದಲ್ಲಿ ಚರ್ಚೆ ಮಾಡಿ ಗ್ರಾಮೀಣ ದಸರಾ ಕಾರ್ಯಕ್ರಮ ಆಯೋಜಿಸಲಾಗಿದೆ. ಗ್ರಾಮೀಣ ಭಾಗದ ಶಾಲೆಯ ಪ್ರತಿಭಾವಂತ ಮಕ್ಕಳಿಗೂ ಅವಕಾಶ ಕಲ್ಪಿಸುವಂತೆ ತಹಸೀಲ್ದಾರ್‌ಗೆ ಸೂಚನೆ ನೀಡಲಾಗಿದೆ. ನಂಜನಗೂಡು ಧಾರ್ಮಿಕ ಕ್ಷೇತ್ರವಾಗಿರುವುದರಿಂದ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪಟ್ಟಣದಾದ್ಯಂತ ಅದ್ಧೂರಿ ದೀಪಾಲಂಕಾರ ಮಾಡಲಾಗಿದೆ. ಮೈಸೂರಿನಲ್ಲಿ ನಡೆಯುವ ದಸರಾ ಮಾದರಿ 9 ದಿನ ತಾಲೂಕಿನಾದ್ಯಂತ ಗ್ರಾಮೀಣ ದಸರಾದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಕ್ರೀಡಾ ಕೂಟಗಳು ಜರುಗಲಿವೆ ಎಂದರು.

ಈ ವೇಳೆ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ತಹಸೀಲ್ದಾರ್ ಎಂ.ಶಿವಮೂರ್ತಿ, ಇಓ ಶ್ರೀನಿವಾಸ್, ನಗರಸಭಾ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ ಶಂಕರಪ್ಪ, ನಗರಸಭಾ ಆಯುಕ್ತ ರಾಜಣ್ಣ ಸೇರಿದಂತೆ ಪ್ರಮುಖರು ಹಾಜರಿದ್ದರು.

ಸಂಪೂರ್ಣ ಸಾಲ ವಸೂಲಿ ಮಾಡಿದ ಕುಡಿನೀರುಮುದ್ದನಹಳ್ಳಿ ಪತ್ತಿನ ಸಂಘ

ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಶ್ಲಾಘನೆ



ಹುಣಸೂರು, ಸೆ.27– ಪ್ರಸಕ್ತ ಸಾಲಿನಲ್ಲಿ ರೈತರಿಗೆ 5.76 ಲಕ್ಷ ರೂ. ಸಾಲ ನೀಡಿ, ಅಷ್ಟೇ ಅಚ್ಚುಕಟ್ಟಾಗಿ ಸಾಲ ವಸೂಲಿ ಮಾಡಿರುವ ಏಕೈಕ ಪತ್ತಿನ ಸಹಕಾರ ಸಂಘ ಇದಾಗಿದೆ ಎಂದು ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ. ಹರೀಶ್‌ಗೌಡ ಶ್ಲಾಘಿಸಿದರು.

ತಾಲೂಕಿನ ಹುಂಡಿಮಾಳ ಗ್ರಾಮದಲ್ಲಿ ಆಯೋಜಿಸಿದ್ದ ಕುಡಿನೀರುಮುದ್ದನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನ 27 ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ ಟ್ರಾಕ್ಟರ್, ಬೆಳೆ ಸಾಲ, ಹೈನುಗಾರಿಕೆ ಗೃಹ ನಿರ್ಮಾಣ ಇನ್ನಿತರೆ ಕಸುಬುಗಳಿಗೆ ಅತೀ ಹೆಚ್ಚು ಸಾಲ ನೀಡುವ ಮೂಲಕ ರೈತರಿಗೆ ನೆರವಾಗಿರುವುದು ಈ ಸಂಘದ ಹೆಗ್ಗಳಿಕೆ ಎಂದರು.

ಅದೇ ರೀತಿ ಗ್ರಾಮೀಣ ಭಾಗದಲ್ಲಿ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಅಲ್ಲದೇ ಹೈನುಗಾರಿಕೆಗೆ ಹೆಚ್ಚು ಸಾಲ ನೀಡಲಾಗುತ್ತಿದೆ. ಆ ಮೂಲಕ ಈ ಭಾಗದ ಪ್ರತಿ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದ್ದು, ಆ ನಿಟ್ಟಿನಲ್ಲಿ ನಿಮ್ಮ ಪ್ರಯತ್ನ ಮುಂದುವರೆಯಲಿ ಎಂದ ಅವರು, ನಿಮ್ಮ ಕಟ್ಟಡದ ಮೇಲ್ಭಾಗ ವಾಣಿಜ್ಯ ಮಳಿಗೆ ನಿರ್ಮಿಸಲು 20 ಲಕ್ಷ ರೂ. ನೀಡಲಾಗುವುದು. ಆ ಹಣ ಸದ್ಬಳಕೆಯಾಗಲಿ ಎಂದರು.

ಈ ಹಿಂದೆ ನಮ್ಮ ಕೇಂದ್ರ ಬ್ಯಾಂಕ್‌ನಿಂದ 3ರಿಂದ 4 ಕೋಟಿ ಹಣ ಸಾಲ ನೀಡುತ್ತಿದ್ದೇವು. ಹುಣಸೂರು ಸಹಕಾರ ಬ್ಯಾಂಕ್ ವ್ಯವಸ್ಥಾಪಕರ ಅವ್ಯವಹಾರದಿಂದ ಕೋಟಿಗಟ್ಟಲೇ ಹಣ ಕಳೆದುಕೊಳ್ಳಬೇಕಾಯಿತು. ಆ ಸಂದರ್ಭ ನಿಮಗಾದ 35.5 ಲಕ್ಷದ ರೂ. ನಷ್ಟದ ಪೈಕಿ ನಮ್ಮ ಕಡೆಯಿಂದ 5.5 ಲಕ್ಷ ರೂ. ನೆರವು ನೀಡಲಾಗಿತ್ತು. ಹಾಗೆ ಸಂಘದ ಕಾರ್ಯದರ್ಶಿ ಮನೆ ಮಾರಿ 30 ಲಕ್ಷ ಹಣ ಕಟ್ಟಿ ಸಹಕಾರ ಸಂಘ ಉಳಿಸಿಕೊಂಡಿದ್ದು ನಿಸ್ವಾರ್ಥ ಸೇವೆಯಾಗಿದೆ. ಆ ಕಾರಣಕ್ಕೆ ನಿಮಗೆ ನಮ್ಮ ಸಹಕಾರ ಬ್ಯಾಂಕಿನಿಂದ ಅತೀ ಹೆಚ್ಚು ಸಾಲ ನೀಡಲಾಗಿದೆ ಎಂದರು. ಕಾರ್ಯಕ್ರಮಕ್ಕೂ ಮುನ್ನಾ ಹುಂಡಿಮಾಳದ ಮುಖ್ಯದ್ವಾರದಲ್ಲಿ ಜಿ.ಡಿ.ಹರೀಶ್‌ಗೌಡರಿಗೆ ಜೆಸಿಬಿ ಮೂಲಕ ಸೇಬಿನ ಹಾರ ಹಾಕಿ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ನಂತರ ನಡೆದ ಮೆರವಣಿಗೆಯಲ್ಲಿ ಕಳಸ ಹೊತ್ತ ಮಹಿಳೆಯರು ಭಾಗವಹಿಸಿದ್ದರು. ಈ ವೇಳೆ ರಸ್ತೆಯುದ್ದಕ್ಕೂ ಇಟಾಚಿ ಮೂಲಕ ಹೂ ಸುರಿಮಳೆಗೈದು ಗ್ರಾಮಸ್ಥರು ಭವ್ಯ ಸ್ವಾಗತ ನೀಡಿ ಬರಮಾಡಿಕೊಂಡರು.

ಸಭೆಯಲ್ಲಿ ಪ್ರಾಥಮಿಕ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರಾಮಕೃಷ್ಣ, ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ಮೈಚಾ.ಜಿ. ನಿರ್ದೇಶಕ ಹೆಚ್.ಜೆ.ನಾಗಪ್ರಸಾದ್, ಜಿಪಂ ಸದಸ್ಯ ಸುರೇಂದ್ರ, ಹಿರಿಯ ಮುಖಂಡ ಬಸವಲಿಂಗಯ್ಯ, ಸತೀಶ್ ಪಾಪಣ್ಣ, ಸಂಘದ ನಿರ್ದೇಶಕರಾದ ಕಿರಣ್, ಶ್ರೀನಿವಾಸ್, ವಸಂತಕುಮಾರ್, ಕಾರ್ಯದರ್ಶಿ ವೇಲುಮಣಿ, ಮೇಲ್ವಿಚಾರಕ ಶ್ರೀನಿವಾಸ್, ನಗರಸಭೆ ಸದಸ್ಯ ಸತೀಶ್ ಕುಮಾರ್, ಮಹೇಶ್ ಸುಂದ್ರಣ್ಣ ಸೇರಿದಂತೆ ಇನ್ನಿತರರಿದ್ದರು.

ಹಿರೀಕ್ಯಾತನಹಳ್ಳಿ ಪಿಎಸಿಎಸ್‌ಗೆ 2.65 ಲಕ್ಷ ರೂ. ಲಾಭ



ಹಿರೀಕ್ಯಾತನಹಳ್ಳಿ, ಸೆ.27– ಹಿರೀಕ್ಯಾತನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 2.65 ಲಕ್ಷ ರೂ. ಲಾಭ ಗಳಿಸಿದೆ ಎಂದು ಅಧ್ಯಕ್ಷ ಮಂಜುನಾಥ್ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಸಂಘದ ಬಲವರ್ಧನೆಗೆ ಆಡಳಿತ ಮಂಡಳಿ ಕ್ರಿಯಾಶೀಲವಾಗಿದೆ. ಸಂಘವು 560 ಷೇರುದಾರರನ್ನು ಹೊಂದಿದ್ದು, ರೈತರಿಗೆ ಬೆಳೆ ಸಾಲಕ್ಕೆ ಮೊದಲನೇ ಆದ್ಯತೆ ನೀಡಲಾಗಿದೆ. ಈ ಸಾಲಿನಲ್ಲಿ 2 ಕೋಟಿ 23 ಲಕ್ಷ ರೂ. ಬೆಳೆ ಸಾಲ ನೀಡಲಾಗಿದೆ. ಜೊತೆಗೆ ಟ್ರಾಕ್ಟರ್ ಸಾಲ 11 ಲಕ್ಷ 38 ಸಾವಿರ, ವ್ಯವಸಾಯೇತರ ಸಾಲ 1 ಲಕ್ಷ ಹಾಗೂ ಇನ್ನಿತರ ವಿವಿಧ ಯೋಜನೆಗಳಲ್ಲಿ ರೈತರಿಗೆ ಸಾಲ ವಿತರಿಸಿದ್ದು, ರೈತರು ಸಕಾಲಕ್ಕೆ ಸಾಲ ಮರು ಪಾವತಿಸಿ ಸಂಘದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

ಈ ವೇಳೆ ಉಪಾಧ್ಯಕ್ಷೆ ಚಿಕ್ಕಸುಂದರಮ್ಮ, ನಿರ್ದೇಶಕರಾದ ಮಹೇಶ್, ಮಾಯಪ್ಪ, ಅಶೋಕ್, ಮಹದೇವ, ಜ್ಯೋತಿ, ವಸಂತಮ್ಮ, ಬಸಮ್ಮ, ಗೌರಮ್ಮ, ಕೃಷ್ಣೇಗೌಡ, ಸಿಇಓ ಶ್ರೀನಿವಾಸ್, ಗುಮಾಸ್ತ ಸುನೀಲ್ ಕುಮಾರ್ ಹಾಗೂ ಸರ್ವ ಸದಸ್ಯರು ಹಾಜರಿದ್ದರು.

ಹಾಸನದಲ್ಲಿ ಎಸ್‌ಡಿಪಿಐನ ಇಬ್ಬರ ಬಂಧನ

ಹಾಸನ, ಸೆ.27– ದೇಶಾದ್ಯಂತ ಎಸ್‌ಡಿಪಿಐ ಹಾಗೂ ಪಿಎಫ್‌ಐ ಮುಖಂಡರ ಮೇಲೆ ಎನ್‌ಐಎ ದಾಳಿ ನಡೆದ ನಂತರ ಪ್ರತಿಭಟನೆ, ಶಾಂತಿ ಕದಡುವ ಸಾಧ್ಯತೆ ಹಿನ್ನೆಲೆಯಲ್ಲಿ ಎಸ್‌ಡಿಪಿಐ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದಿಕ್ ಆನೆಮಹಲ್, ಪ್ರಧಾನ ಕಾರ್ಯದರ್ಶಿ ಸೈಯದ್ ಫರೀದ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಎನ್‌ಐಎ ದಾಳಿ ಬಳಿಕ ಪ್ರತಿಭಟನೆ, ಶಾಂತಿ ಕದಡುವ ಸಾಧ್ಯತೆ ಹಿನ್ನೆಲೆಯಲ್ಲಿ ಹಲವರನ್ನು ವಶಕ್ಕೆ ಪಡೆಯಲಾಗಿದೆ. ಗೃಹ ಇಲಾಖೆ ಸೂಚನೆ ಮೇರೆಗೆ ರಾಜ್ಯದ ವಿವಿಧ ಜಿಲ್ಲೆಯಲ್ಲಿ ಕಾರ್ಯಾಚರಣೆ ಆರಂಭವಾಗಿದ್ದು, ಹಾಸನದಲ್ಲಿ ಸಿದ್ದಿಕ್ ಅವರನ್ನು ವಶಕ್ಕೆ ಪಡೆದ ಸಕಲೇಶಪುರ ಪೊಲೀಸರು, ಸಕಲೇಶಪುರ ಉಪ ವಿಭಾಗಾಧಿಕಾರಿ ಎದುರು ಹಾಜರುಪಡಿಸಿದ್ದಾರೆ. ಸಿದ್ದಿಕ್ ಹಾಗೂ ಸೈಯದ್ ಫರೀದ್ ಎಂಬುವರ ಬಂಧನದ ಬಗ್ಗೆ ಮಾಹಿತಿ ನೀಡಿದ ಎಸ್ಪಿ ಹರಿರಾಮ್ ಶಂಕರ್, ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ಪಡೆದು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿರುವುದಾಗಿ ತಿಳಿಸಿದ್ದಾರೆ.

ಭೈರನಾಯಕ ನಿಧನ



ಸರಗೂರು, ಸೆ.27– ಪಟ್ಟಣದ 9ನೇ ವಾರ್ಡ್ ನಿವಾಸಿ ಪಪಂ ಮಾಜಿ ಅಧ್ಯಕ್ಷೆ ಪದ್ಮಾ ಅವರ ತಂದೆ ಹಾಗೂ ಪಪಂ ಸದಸ್ಯ ಶ್ರೀನಿವಾಸ್ ಅವರ ಮಾವ ಭೈರನಾಯಕ (59) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ನಾಯಕ ಸಮುದಾಯದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುರುಘಾ ಶ್ರೀಗಳ ನ್ಯಾಯಾಂಗ ಬಂಧನ ಅ.10ರವರೆಗೆ ವಿಸ್ತರಣೆ



ಚಿತ್ರದುರ್ಗ: ಇಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಮೇಲೆ ಬಂಧನಕ್ಕೊಳಗಾಗಿರುವ ಚಿತ್ರದುರ್ಗದ ಮುರುಘಾ ಮಠದ ಡಾ. ಶಿವಮೂರ್ತಿ ಶರಣರ ನ್ಯಾಯಾಂಗ ಬಂಧನ ಅವಧಿಯನ್ನು ಅಕ್ಟೋಬರ್ 10ರವರೆಗೆ ವಿಸ್ತರಿಸಿ ಕೋರ್ಟ್ ಆದೇಶಿಸಿದೆ. ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಬಿ.ಕೆ. ಕೋಮಲಾ ಅವರು ಆರೋಪಿ ಸಂಖ್ಯೆ 2, ಹಾಸ್ಟೆಲ್ ವಾರ್ಡನ್ ರಶ್ಮಿ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಸಹ ಅಕ್ಟೋಬರ್ 10 ರವರೆಗೆ ವಿಸ್ತರಿಸಿದ್ದಾರೆ.

ಆರೋಪಿಯ ನ್ಯಾಯಾಂಗ ಬಂಧನ ಅವಧಿ ಇಂದು ಅಂತ್ಯಗೊಂಡ ಹಿನ್ನೆಲೆಯಲ್ಲಿ ಶ್ರೀಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ಕೋರ್ಟ್ ಅಕ್ಟೋಬರ್ 10ರವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದೆ. ನಂತರ ಶ್ರೀಗಳನ್ನು ಜಿಲ್ಲಾ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ಯಲಾಯಿತು.

ನವರಾತ್ರಿ ಸಂಭ್ರಮದ ನಡುವೆ ರಾಜ್ಯದಲ್ಲಿ 3 ದಿನ ಮಳೆ ಸಾಧ್ಯತೆ

ಬೆಂಗಳೂರು: ಕಳೆದ 2 ವಾರಗಳಿಂದ ಸ್ವಲ್ಪ ಬಿಡುವು ನೀಡಿದ್ದ ಮಳೆರಾಯ ನವರಾತ್ರಿಯ ಸಂಭ್ರಮದ ನಡುವೆ ಮತ್ತೆ ರಾಜ್ಯಕ್ಕೆ ಲಗ್ಗೆಯಿಡಲಿದ್ದಾನೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಮುಂದಿನ 3 ದಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಬಂಗಾಳಕೊಲ್ಲಿಯಲ್ಲಿ ಮೇಲ್ಮೈ ಸುಳಿಗಾಳಿಯ ಪರಿಣಾಮ ಉತ್ತರ ಒಳನಾಡು, ದಕ್ಷಿಣ ಒಳನಾಡು, ಕರಾವಳಿ ಭಾಗಗಳಲ್ಲಿ ಮಳೆಯಾಗಲಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಹಾಸನ, ಕೊಡಗು, ಚಿಕ್ಕಮಗಳೂರು, ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡು ಹಾಗೂ ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಇಂದಿನಿಂದ ಸೆ. 29ರವರೆಗೆ ಮಳೆಯಾಗಲಿದ್ದು, ಹಲವೆಡೆ ಗುಡುಗು ಮಿಂಚು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಇಂದು ಅಪ್ಪು ಚಲನ ಚಿತ್ರೋತ್ಸವ

ಮೈಸೂರು,ಸೆ.27– ಮೈಸೂರು ದಸರಾ–2022 ಹಾಗೂ ಚಲನ ಚಿತ್ರೋತ್ಸವ ಉಪಸಮಿತಿ ವತಿಯಿಂದ ಆಯೋಜಿಸಲಾಗಿರುವ ಅಪ್ಪು ದಿನ ಚಲನಚಿತ್ರೋತ್ಸವನ್ನು ಡಾ.ಪುನೀತ್ ರಾಜಕುಮಾರ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್ ಕುಮಾರ್ ಸೆ.28ರಂದು ಮಧ್ಯಾಹ್ನ 12.30ಕ್ಕೆ ಮಾಲ್ ಆಫ್ ಮೈಸೂರಿನಲ್ಲಿರುವ ಐನಾಕ್ಸ್ ಚಿತ್ರಮಂದಿರದಲ್ಲಿ ಉದ್ಘಾಟಿಸುವರು. ನಂತರ ಶಾಲಾ ಕಾಲೇಜು ಮಕ್ಕಳು ಹಾಗೂ ಪ್ರೇಕ್ಷಕರೊಂದಿಗೆ ಪುನೀತ್ ರಾಜ್ ಕುಮಾರ್ ನಟಿಸಿರುವ ಚಲನಚಿತ್ರವನ್ನು ವೀಕ್ಷಣೆ ಮಾಡುವರು.

2ನೇ ವರ್ಷದ ಸವಿನೆನಪು



ಶ್ರೀ ಆರ್.ಗೋವಿಂದರಾಜನ್ ರವರು ಹೆಜ್ಜಿಗೆ

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನೀವು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ :

ದುಃಖತಪ್ತರು: ಶ್ರೀಮತಿ ಚೌಡೇಶ್ವರಿ ಹೆಜ್ಜಿಗೆ ರಾಮಯ್ಯ, ಪತ್ನಿ ಶ್ರೀಮತಿ ಕವಿತಾ ಗೋವಿಂದರಾಜನ್, ಶ್ರೀ ಮೋಹನ್‌ದಾಸ್ ... ಶ್ರೀ ಭಾಸ್ಕರ್, ಮೃತರ ಸಹೋದರಿಯರು ಮತ್ತು ಅಳಿಯಂದಿರು, ಶ್ರೀ ಆರ್.ಇಂಧನ್‌ಬಾಬು (ಶ್ರೀಕಂಠೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷರು) ಬಂಧು ಮಿತ್ರರು–ಹೆಜ್ಜಿಗೆ ಗ್ರಾಮಸ್ಥರು

4ನೇ ವರ್ಷದ ಸವಿನೆನಪು



ಶ್ರೀ ರಕ್ಷಿತ್

ಜನನ : 7-9-1992 ನಿಧನ : 27-09-2018

ಸದಾ ನಿಮ್ಮ ನೆನಪಿನಲ್ಲಿರುವ

ತಾಯಿ, ತಂಗಿ, ಭಾವ ಹಾಗೂ ಕುಟುಂಬವರ್ಗದವರು

ಸಾರ್ವಜನಿಕ ಪ್ರಕಟಣೆ

[illegible]

No 452, 1st Floor, Room No 5, Shree Nanjundeshwara Complex, M.G Road, Fort Mohalla, Mysuru-570004

ದಿನಾಂಕ: 27.09.2022

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





